ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 2 ಏಪ್ರಿಲ್, ಮೇ, ಜೂನ್ 2020 ವಿಶೇಷ ಸಂಚಿಕೆ ₹ 60/-



Second Round Table Conference from 1st September 1931 to 1st December 1931 participated by all dignitaries, Mahatma Gandhi and Dr. B.R. Ambedkar

ಕೋವಿಡ್-19 ಲಾಕ್‌ಡೌನ್ ಮುಗಿದ ನಂತರದ ಸುರಕ್ಷಾ ಕ್ರಮಗಳು

ಜೀವನದುದ್ದಕ್ಕೂ ಅಭ್ಯಾಸ ಮಾಡಬೇಕಾಗಿರುವುದು

- ಕೈ ತೊಳೆಯುವಿಕೆ/ ನೈರ್ಮಲ್ಯತೆ
- ಉಸಿರಾಟದ ನೈರ್ಮಲ್ಯತೆ.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬೇಡಿ, ಕಸ ಹಾಕಬೇಡಿ, ಮೂತ್ರ ವಿಸರ್ಜನಬೇಡಿ.
- ಸಾಮಾಜಿಕ ಅಂತರ ಕಾಯ್ದುಕೊಳ್ಳಿ.
- ಹೆಚ್ಚಿನ ಅಪಾಯದ ಗುಂಪುಗಳ ಬಗ್ಗೆ ಗಮನ ಕೊಡಿ (ಹಿರಿಯ ವಯಸ್ಕರು, ಮೊದಲೇ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವವರು, ಗರ್ಭಿಣಿಯರು, ಮಕ್ಕಳು, ವಲಸೆ ಬಂದಿರುವವರು)

ಕಚೇರಿ /ಕೆಲಸದ ಸ್ಥಳ

- ಬಯೋಮೆಟ್ರಿಕ್ ಫಿಂಗರ್ ಪ್ರಿಂಟ್ ಉಪಯೋಗಿಸದಿರಿ.
- ನೀವು ಕಚೇರಿಗೆ ಪ್ರವೇಶಿಸುವ ಮೊದಲು ಜ್ವರ ಮತ್ತು ಇತರ ರೋಗ ಲಕ್ಷಣಗಳನ್ನು ಪರಿಶೀಲಿಸಿ.
- ಸಾಬೂನಿನಿಂದ ಆಗಾಗ್ಗೆ 20 ಸೆಕೆಂಡುಗಳ ಕಾಲ ಕೈಗಳನ್ನು ತೊಳೆಯಿರಿ.
- ಸಾಮಾಜಿಕ ಅಂತರವನ್ನು ಖಚಿತಪಡಿಸಿಕೊಳ್ಳಿ, ಪರ್ಯಾಯ ಆಸನವನ್ನು ಖಚಿತಪಡಿಸಿಕೊಳ್ಳಿ, ಸೋಂಕನ್ನು ತಡೆಗಟ್ಟಲು ಮುಖಗವಸನ್ನು ಧರಿಸಿ.
- ಮನೆಯಿಂದ ಊಟದ ಡಬ್ಬಿಯನ್ನು ತನ್ನಿ ಮತ್ತು ನೀವು ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ತಿನ್ನಿರಿ.
- ಹಸ್ತಲಾಘವ, ಅಪ್ಪುಗೆಯನ್ನು ತಪ್ಪಿಸಿ
- ಕಛೇರಿಯಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ವಸ್ತುಗಳು ಮೇಜು, ಕುರ್ಚಿ, ಟೆಲಿಫೋನ್, ಡೋರ್‌ಗಳನ್ನು ಸ್ವಚ್ಛಗೊಳಿಸಿ.
- ನಿಮ್ಮ ಮೊಬೈಲ್ ಫೋನ್ ಅನ್ನು ಇತರರಿಗೆ ಕೊಡಬೇಡಿ ಮತ್ತು ಸ್ಯಾನಿಟೈಜರ್ ಬಳಸಿ ನಿಯಮಿತವಾಗಿ ಸ್ವಚ್ಛಗೊಳಿಸಿ.
- ಭೌತಿಕ ಸಭೆಗಳನ್ನು ತಪ್ಪಿಸಿ, ಆನ್‌ಲೈನ್ ಸಭೆಗಳು / ತರಬೇತಿಗಳಿಗಾಗಿ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿ.
- ಸಂದರ್ಶಕರನ್ನು ಕಛೇರಿಗೆ ಆಹ್ವಾನಿಸಬೇಡಿ.
- ವಿಶ್ರಾಂತಿ ಕೊಠಡಿಗಳು ಸೋಂಕುರಹಿತವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ.

ಮನೆಯಲ್ಲಿರುವಾಗ

- ಸಾಬೂನು, ಹ್ಯಾಂಡ್‌ವಾಶ್ ಬಳಸಿ ನಿಯಮಿತವಾಗಿ ಕೈತೊಳೆಯುತ್ತಿರಿ.
- ಅಗತ್ಯದ ಹೊರತು ಮನೆಯಿಂದ ಹೊರಗೆ ಹೋಗುವುದನ್ನು ತಪ್ಪಿಸಿ.
- ವೈಯಕ್ತಿಕ ನೈರ್ಮಲ್ಯಕ್ಕೆ ಪ್ರಾಮುಖ್ಯತೆ ನೀಡಿ.
- ಯಾವುದೇ ರೀತಿಯ ಸಭೆ ಸಮಾರಂಭಗಳನ್ನು ಆಯೋಜಿಸದಿರಿ/ಹೋಗದಿರಿ ಸಂಗ್ರಹಿಸುವುದನ್ನು ತಪ್ಪಿಸಿ.
- ಮನೆಯಲ್ಲೇ ತ್ಯಾಜ್ಯ ವಿಭಜನೆ ಮಾಡಿ.
- ಮುಚ್ಚಿದ ಕಸದ ತೊಟ್ಟಿಗಳನೇ ಬಳಸಿ ಮತ್ತು ಸೂಕ್ತವಾಗಿ ವಿಲೇವಾರಿ ಮಾಡಿ.

ಪ್ರಯಾಣ

- ಯಾವುದೇ ರೀತಿಯ ಪ್ರಯಾಣವನ್ನು ಮುಂದೂಡಿ / ತಪ್ಪಿಸಿ.
- ಕೆಲಸದ ಸ್ಥಳಕ್ಕೆ ಹೋಗುವಾಗ ಸಾರ್ವಜನಿಕ ಸಾರಿಗೆಯನ್ನು ಅಗತ್ಯವಿದ್ದರೇ ಮಾತ್ರ ಬಳಸಿ.
- ಪ್ರಯಾಣ ಮಾಡುವಾಗ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಿ, ಆಸನ ಮರು ಹೊಂದಾಣಿಕೆ ಮಾಡಿ.
- ಮನೆಯಿಂದ ಹೊರಡುವ ಮೊದಲು ಕಾರು ಚಾಲಕರ ಆರೋಗ್ಯದ ಸ್ಥಿತಿಯನ್ನು ಪರಿಶೀಲಿಸಿ.
- ಯಾವಾಗಲೂ ಮುಖಗವಸನ್ನು ಹಾಕಿಕೊಳ್ಳಿ.

ಕಟ್ಟಡ ನಿರ್ಮಾಣ ಪ್ರದೇಶ

- ಕಾರ್ಮಿಕರಿಗೆ ಕೈತೊಳೆಯಲು ಸೂಕ್ತವಾದ ಸ್ಥಳ ಮತ್ತು ನೀರಿನ ವ್ಯವಸ್ಥೆಗೊಳಿಸಿ.
- ಸಾಕಷ್ಟು ಶೌಚಾಲಯಗಳನ್ನು ಒದಗಿಸಿ ಮತ್ತು ವೈಯಕ್ತಿಕ ಸ್ವಚ್ಛತೆಯನ್ನು ಅಭ್ಯಾಸ ಮಾಡಲು ಪ್ರೇರೇಪಿಸಿ.
- ಊಟದ / ವಿರಾಮದ ಸಮಯದಲ್ಲಿ ಜನಸಂದಣಿಯನ್ನು ತಪ್ಪಿಸಿ.
- ವೈಯಕ್ತಿಕ ಅಂತರವನ್ನು ಪಾಲಿಸಿ.
- ತಂಬಾಕು, ಎಲೆ, ಅಡಿಕೆ, ಪಾನ್ ಗುಟ್ಕಾಗಳನ್ನು ತಿನ್ನುವುದನ್ನು ನಿಷೇಧಿಸಿ ಮತ್ತು ಸಾರ್ವಜನಿಕವಾಗಿ ಉಗುಳುವುದನ್ನು ತಪ್ಪಿಸಿ.

ಬಹುಮಹಡಿ ಕಟ್ಟಡಗಳು

- ಸಾರ್ವಜನಿಕ ಸಭೆ ಸಮಾರಂಭಗಳನ್ನು ಮಾಡದಿರಿ.
- ಮನರಂಜನೆ ಸ್ಥಳಗಳು, ಜಿಮ್, ಈಜುಕೊಳ, ಆಟದ ಪ್ರದೇಶ ತೆರೆಯದಿರಿ.
- ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಜಾಗ್ರತೆ ವಹಿಸಿ ನಿಮ್ಮ ಕಟ್ಟಡಗಳಲ್ಲಿ ನೈರ್ಮಲ್ಯಕ್ಕೆ ಹೆಚ್ಚು ಗಮನಕೊಡಿ.
- ಯಾವುದೇ ತುರ್ತುಸ್ಥಿತಿಯ ಸಂದರ್ಭದಲ್ಲಿ ಸ್ವಯಂಸೇವಕರ ಸಹಾಯ ಪಡೆಯಿರಿ.
- ತ್ಯಾಜ್ಯ ವಿಲೇವಾರಿ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ.
- ತ್ಯಾಜ್ಯವನ್ನು ಹೋಂ ಕೊರೆಂಟೈನ್/ ರೋಗಿಗಳಿಂದ ಸಂಗ್ರಹಿಸಲಾಗಿದೆಯೇ ಎಂದು ತ್ಯಾಜ್ಯ ಸಂಗ್ರಾಹಕರಿಗೆ ತಿಳಿಸಿ.

ಸಾರ್ವಜನಿಕ ಸ್ಥಳಗಳು

- ಯಾವಾಗಲೂ ಮುಖಗವಸನ್ನು ಹಾಕಿಕೊಳ್ಳಿ.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಹಾಗೂ ಕಸ ಹಾಕುವುದನ್ನು ನಿಷೇಧಿಸಿ.
- ಭೌತಿಕ ಅಂತರವನ್ನು ಕಾಪಾಡಿಕೊಳ್ಳಿ.
- ಸಾರ್ವಜನಿಕ ಶೌಚಾಲಯಗಳನ್ನು ಬಳಸುವುದನ್ನು ತಪ್ಪಿಸಿ.
- ಜನಸಂದಣಿ ಪ್ರದೇಶಗಳಿಗೆ ಭೇಟಿ ಕೊಡಬೇಡಿ.
- ಸಾರ್ವಜನಿಕ ಸಾರಿಗೆಯನ್ನು ಅಗತ್ಯವಿದ್ದಲ್ಲಿ ಮಾತ್ರ ಉಪಯೋಗಿಸಿ.
- ವೈಯಕ್ತಿಕ ನೈರ್ಮಲ್ಯತೆ ಕಾಪಾಡಿ.

ಆರೋಗ್ಯ ಸೇತು ಅಪ್ಲಿಕೇಶನ್‌ನ್ನು ಬಳಸಿ ಆರೋಗ್ಯ ಮಿತ್ರ ಸಂಖ್ಯೆ 14411 ಉಪಯೋಗಿಸಿ ಮತ್ತು ಹೆಚ್ಚಿನ ಮಾಹಿತಿಗಾಗಿ ಆರೋಗ್ಯ ಸಹಾಯವಾಣಿ 104 ಕ್ಕೆ ಕರೆಮಾಡಿ

ರಾಷ್ಟ್ರೀಯ ಆರೋಗ್ಯ ಅಭಿಯಾನ

NIRDPR

CRU COMMUNICATION RESOURCE UNIT
A JOINT INITIATIVE OF NIRDPR & UNICEF

World Health Organization India

unicef for every child



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ

Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :

Karnataka Gandhi Smaraka Nidhi

Gandhi Bhavana, Kumarapark East

Bengaluru - 560001

Phone : +91 80 22261967, 9738605799

gandhibhavanabengaluru@gmail.com

Design & Print : **CreativeGeekZ**

Yadhava College Road, Madhavanagara

Bengaluru - 560001

Ph : +91 80 40927049

E-mail : mail@creativegeekz.com

ಈ ಸಂಚಿಕೆಯಲ್ಲಿ

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು, ಬಾಪು ಪ್ರಪಂಚದ್ದಲ್ಲ.ಚಿತ್ರಗಳು ಸಾಂದರ್ಭಿಕವಾಗಿರುತ್ತವೆ.

ಸಂಪಾದಕೀಯ

ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ವಂದನೆಗಳು, ಕರೋನ ಮುಕ್ತ ದೇಶ ಮತ್ತು ಸಮಾಜವನ್ನು ಕಟ್ಟುವುದರಲ್ಲಿ ಶ್ರಮಿಸುತ್ತಿರುವ ಎಲ್ಲರಿಗೂ ಸುಸ್ವಾಗತ. ಎಲ್ಲರಿಗೂ ತಿಳಿದಿರುವಂತೆ ಕೋವಿಡ್-19 ಜಗತ್ತನ್ನು ವಿನಾಶ ಮಾಡುವ ಹಾದಿಯಲ್ಲಿ ದಾಪುಗಾಲು ಹಾಕುತ್ತಿರುವಂತಿದೆ. ಈ ಸಂದರ್ಭದಲ್ಲಿ ಗಾಂಧಿ ಭವನ - ಸುತ್ತಲಿನ ಪರಿಸರ, ಸಮುದಾಯ, ಸಹಸಂಸ್ಥೆಗಳು ಮತ್ತು ಸ್ನೇಹಜೀವಿಗಳು ಕರೋನಾ ಎದುರಿಸುವುದು ಹೇಗೆ? ಎಂಬ ಬಗ್ಗೆ ಅರಿವು ಮೂಡಿಸುವುದರಲ್ಲಿ ತೊಡಗಿಕೊಂಡಿತು. ಮಾರ್ಚ್ 2020ರ ಸಂಚಿಕೆ ಪ್ರಕಟಗೊಳ್ಳುವ ಸಮಯದಲ್ಲಿ ಕರೋನಾ ಹರಡುವಿಕೆಯ ದಿನದಿನಕ್ಕೆ ಉಲ್ಬಣಿಸತೊಡಗಿತ್ತು. ಆದಾಗ್ಯೂ ಬಹಳ ಪ್ರಯಾಸದಿಂದ ಸಂಚಿಕೆಯನ್ನು ಪ್ರಕಟಗೊಳಿಸಿದರೂ, ನಿಮಗೆಲ್ಲರಿಗೂ ತಲುಪಿಸುವ ಪ್ರಯತ್ನದಲ್ಲಿ ಹಿನ್ನೆಡೆಯಾಯಿತು. ಕರೋನಾದ ತೀವ್ರತೆ ಅಧಿಕಗೊಂಡಂತೆ, ಲಾಕ್‌ಡೌನ್, ಸೀಲ್‌ಡೌನ್, ಕರ್ಫ್ಯೂಗಳು ಜಾರಿಗೊಂಡ ಕಾರಣದಿಂದ, ಸಮಸ್ತ ಜನಸಂಪರ್ಕವೂ ಸ್ಥಗಿತಗೊಂಡಿತ್ತು. ನಂತರದ ದಿನಗಳಲ್ಲಿ ಅಂಚೆ ಇಲಾಖೆಗೆ ಪತ್ರಿಕೆಗಳನ್ನು ತಲುಪಿಸಿದೆವು. ಅಲ್ಲಿರುವ ನಮ್ಮ ಅಂಚೆ ಅಣ್ಣಂದಿರು, ಸಂಕಷ್ಟವಿದ್ದಾಗಲೂ ಪತ್ರಿಕೆಗಳನ್ನು ಬಹಳ ಜತನವಾಗಿ, ವಿಳಂಬವಾಗಿಯಾದರೂ ತಲುಪಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಅದರೊಂದಿಗೆ ಭಯ ಆತಂಕದ ಈ ಘಟ್ಟದಲ್ಲಿ ಭಾರತವನ್ನು ಕಾಪಾಡಿದ, ಸಲಹಿದ, ಪೋಷಿಸಿದ ಎಲ್ಲಾ ವೈದ್ಯರು, ದಾದಿಯರು, ಸಹಸಿಬ್ಬಂದಿ ಅವರು, ಪೋಲೀಸರು, ಆಶಾ ಕಾರ್ಯಕರ್ತೆಯರು, ಸ್ವಚ್ಛತಾ ಕಾರ್ಮಿಕರು, ಸ್ವಯಂ ಸೇವಕರು, ಆಹಾರ ಸರಬರಾಜುದಾರರು, ಸಾರಿಗೆ ಇಲಾಖೆಯವರು, ಕರ್ನಾಟಕ ಸರ್ಕಾರದ ಪ್ರಮುಖ ಇಲಾಖೆಗಳು, ಮುಖ್ಯಮಂತ್ರಿಗಳ ಕಾರ್ಯಾಲಯದ ಸಿಬ್ಬಂದಿ ಅವರು, ಮಾಧ್ಯಮ ಮಿತ್ರರು, ರೈತರು-ಕಾರ್ಮಿಕರು ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಳೆದ ಮೂರು ತಿಂಗಳಿಂದ ಶ್ರಮಿಸುತ್ತಿರುವ ಸರ್ವರಿಗೂ ಗಾಂಧಿ ಭವನದ ಪರವಾಗಿ ಅನಂತ ಕೃತಜ್ಞತೆಗಳು ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಗಾಂಧಿ ಭವನ ಪುನಃ ಆರಂಭಗೊಂಡ ದಿನ ಜೂನ್ 1 ರಂದು ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಎಲ್ಲಾ ಸಿಬ್ಬಂದಿ ಅವರು, ಸಹಸಂಸ್ಥೆಗಳವರು ಸೇರಿ ಸರ್ವರಿಗೂ ಅಭಿನಂದನೆಗಳನ್ನು ಅರ್ಪಣೆ ಮಾಡಲಾಯಿತು.

ಈ ಕರಾಳ ಸಮಯದಲ್ಲಿಯೇ, ಗಾಂಧಿ ಅನುಯಾಯಿ ನಾಡೋಜ ಪಾಟೀಲ ಪುಟ್ಟಪ್ಪನವರು, ಸರಳ ಸಜ್ಜನ ರಾಜಕಾರಣಿ ಡಾ. ಎಂ.ವಿ. ರಾಜಶೇಖರನ್ ಅವರು, ನಿತ್ಯೋತ್ಸವ ಕವಿ ನಿಸಾರ್ ಅಹ್ಮದ್ ಅವರೂ, ಅಂಬೇಡ್ಕರ್ ಅವರ ಪ್ರೀತಿಯ ಮುನ್ನಿ ಜಗನ್ ಬಿ ಪಟೇಲ್ ಅವರು ನಮ್ಮನಗಲಿದ್ದಾರೆ. ಅವರೆಲ್ಲರಿಗೂ ಗಾಂಧಿ ಭವನದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಸಿಬ್ಬಂದಿವರ್ಗದವರ ಸಭೆಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಅವರ ಸ್ಮರಣಾರ್ಥ, ಈ ಸಂಚಿಕೆಯಲ್ಲಿ ನುಡಿನಮನವನ್ನು ಸಲ್ಲಿಸುತ್ತಿದ್ದೇವೆ. ಏಪ್ರಿಲ್, ಮೇ ಪೂರ್ಣಾವಧಿಯು ಕರೋನಾದಿಂದ ಸಾಮಾಜಿಕ ಮತ್ತು ಸಾರ್ವಜನಿಕ ಚಟುವಟಿಕೆಗಳು ಸ್ಥಗಿತಗೊಂಡಿರುವುದರಿಂದ ಏಪ್ರಿಲ್ - ಮೇ - ಜೂನ್ - 2020ರ ಸಂಚಿಕೆಯನ್ನು ಒಟ್ಟಾಗಿ ಮಾಡಲಾಗಿದೆ. ಸಹೃದಯತೆಯಿಂದ ಸ್ವೀಕರಿಸುವಿರಿ ಎಂದೇ ಭಾವಿಸಿದ್ದೇನೆ.



ಈ ಸಂಚಿಕೆಯಲ್ಲಿ ವೈಯಕ್ತಿಕ ಆರೋಗ್ಯ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡಲು ಪ್ರಯತ್ನಿಸಲಾಗಿದೆ. ಸಂವಿಧಾನದ ಪಿತಾಮಹ ಭಾರತರತ್ನ ಬಿ.ಆರ್. ಅಂಬೇಡ್ಕರ್ ಅವರು ಕಾರ್ಮಿಕ ಸಚಿವರಾಗಿ ಮಾಡಿದಂಥಹ ಕಾರ್ಯಗಳು ಅಂದಿಗೂ ಇಂದಿಗೂ ಮಾದರಿಯಾಗಿವೆ. ಮತ್ತು ಅವುಗಳು ಸರ್ಕಾರದ ನೀತಿ ನಡಾವಳಿ - ಕಾನೂನುಗಳಾಗಲು ಕಾರಣವಾಗಿವೆ. ಇಂದಿನ ಕರೋನಾ ದುಃಸ್ಥಿತಿಯಲ್ಲಿ ಕಾರ್ಮಿಕರು ಅನುಭವಿಸುತ್ತಿರುವ ಬವಣೆಗಳನ್ನು ಅಂಬೇಡ್ಕರ್ ದೃಷ್ಟಿಕೋನದಿಂದ ಕ್ರಮಕೈಗೊಂಡಲ್ಲಿ ಪರಿಹಾರದ ಮಾರ್ಗಗಳು ಸುಲಭವಾಗುವುದು. ಅದರಂತೆ ನವಭಾರತ ನಿರ್ಮಾಣದಲ್ಲಿ ಅಪಾರವಾಗಿ ಶ್ರಮಿಸಿದ ಬಸವಣ್ಣನವರು, ರಾಜಾರಾಮ್ ಮೋಹನ್ ರಾಯ್, ಮೈಲಾರ ಮಹಾದೇವ, ಮಲೆನಾಡ ಗಾಂಧಿ ಗೋವಿಂದೇಗೌಡರು ಮತ್ತು ನಮ್ಮ ನಡುವಿನ ಗಾಂಧಿ ಎಸ್.ಎನ್. ಸುಬ್ಬಾ ರಾವ್ ಅವರ ಕುರಿತ ಲೇಖನಗಳನ್ನು ವಿಶ್ವವಿನಾಶದ ಈ ಸಂದರ್ಭದಲ್ಲಿ ದಾರಿದೀಪವಾಗಲಿ ಎಂಬ ಸದಾಶಯದಲ್ಲಿ ಸಂಚಿಕೆ ಒಳಗೊಂಡಿದೆ.

ಈ ಸಂಚಿಕೆಯಲ್ಲಿ ದೇಶ ವಿದೇಶಗಳ ವಿಶಿಷ್ಟ ಕೃತಿಗಳನ್ನು ಪರಿಚಯಿಸುವ ಪುಸ್ತಕ ವಿಭಾಗ ಮತ್ತು ಓದುಗ, ಕೇಳುಗರ ಅಭಿಪ್ರಾಯಗಳಿಗಾಗಿ ಪತ್ರ ವಿಭಾಗವನ್ನು ಆರಂಭಿಸಲಾಗಿದೆ. ಸಂಪಾದಕೀಯ ಮುಕ್ತಾಯಗೊಳ್ಳುವ ಸಂದರ್ಭದಲ್ಲಿ ಭಾರತದ ಉತ್ತರ ಗಡಿ ಭಾಗದಲ್ಲಿ ದೇಶ ಕಾಯುತ್ತಿರುವ ಶತ್ರುರಾಷ್ಟ್ರದ ದಾಳಿಯಿಂದ ನಮ್ಮ ವೀರ ಯೋಧರು, ಹುತಾತ್ಮರಾದ ಅಸಹನೀಯ ದುಃಖದ ಆತಂಕದ ವಾರ್ತೆಗಳು ಬಂದಿವೆ. ನಮ್ಮನ್ನೆಲ್ಲ ರಕ್ಷಿಸುತ್ತಾ ಹುತಾತ್ಮರಾದ ಆ ಎಲ್ಲಾ ವೀರಯೋಧರಿಗೆ ಸಾಷ್ಟಾಂಗ ನಮನಗಳನ್ನು ಸಲ್ಲಿಸೋಣ ಮತ್ತು ಇಂಥಹ ವೀರಪುತ್ರರನ್ನು ದೇಶದ ರಕ್ಷಣೆಗಾಗಿ ಕಳುಹಿಸಿದ ಅವರೆಲ್ಲರ ಮಾತಾಪಿತೃಗಳು, ಬಂಧು ಬಳಗದವರು ಮತ್ತು ಪತ್ನಿ ಮಕ್ಕಳಿಗೆ ನಾವೆಲ್ಲರೂ ಅನಂತ ಧನ್ಯವಾದಗಳನ್ನು ಅರ್ಪಿಸೋಣ. ಅವರ ಋಣಿಗಳು ನಾವಾಗಿರುವುದರಿಂದ ಸಮಾಜಸೇವೆ, ಸಾರ್ವತ್ರಿಕ ಕಾರ್ಯಗಳಲ್ಲಿ ಭಾಗಿಯಾಗುತ್ತಾ, ಈ ಸೃಷ್ಟಿ, ನಾಡು, ನುಡಿಯ ಋಣ ತೀರಿಸೋಣ, ನಮಸ್ಕಾರಗಳು.

ಮೊದಲನೆಯ ಅಘಾತ

ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

ನಾನು ನಿರಾಶನಾಗಿ ಬೊಂಬಾಯಿಯಿಂದ ರಾಜಕೋಟೆಗೆ ಹೋದೆ. ರಾಜಕೋಟೆಯಲ್ಲಿ ನನ್ನ ಸ್ವಂತ ಕಛೇರಿಯನ್ನು ಸ್ಥಾಪಿಸಿದ. ಇಲ್ಲಿ ನಾನು ತಕ್ಕಮಟ್ಟಿಗೆ ಚೆನ್ನಾಗಿಯೇ ಅಭಿವೃದ್ಧಿ ಹೊಂದತೊಡಗಿದೆ. ಅರ್ಜಿಗಳನ್ನು ನಿವೇದನ ಪತ್ರಿಕೆಗಳನ್ನು ಬರೆಯುವುದರಲ್ಲಿ ನನಗೆ ತಿಂಗಳಿಗೆ ಸರಾಸರಿ ಮುನ್ನೂರ ರೂಪಾಯಿಗಳ ವರಮಾನ ಬರುತ್ತಿತ್ತು. ಈ ಕಾರ್ಯ ನನಗೆ ದೂರತುದದಕ್ಕೆ ಕಾರಣ ನನ್ನ ಶಕ್ತಿ ಸಾಮರ್ಥ್ಯಗಳಲ್ಲ, ಇತರರ ಪ್ರಭಾವ. ನಮ್ಮಣ್ಣನಿಗೆ ವಕೀಲಿ ವೃತ್ತಿಯಲ್ಲಿ ಒಬ್ಬ ಪಾಲುದಾರ ಇದ್ದನು. ಅವನ ವೃತ್ತಿ ಚೆನ್ನಾಗಿ ನಿಯಮಿತವಾಗಿ ನಡೆಯುತ್ತಿತ್ತು. ಅವರ ದೃಷ್ಟಿಯಲ್ಲಿ ಮುಖ್ಯವಾದುದೆಂದು ತೋರಿದ ಅಥವಾ ನಿಜವಾಗಿಯೇ ಮುಖ್ಯವಾಗಿದ್ದ ಅರ್ಜಿ ಮುಂತಾದವನ್ನು ಬರೆಯಲು ಅವರು ಅವುಗಳನ್ನು ದೊಡ್ಡ ಬ್ಯಾರಿಸ್ಟರುಗಳ ಕಡೆಗೆ ರವಾನಿಸುತ್ತಿದ್ದರು. ಅವರ ಬಳಿಗೆ ಬರುತ್ತಿದ್ದ ಕಕ್ಷಿಗಾರ ಅರ್ಜಿಗಳನ್ನು ಬರೆಯುವುದು, ನನ್ನ ಪಾಲಿಗೆ ಬಂದಿತು.

ಬೊಂಬಾಯಿಯಲ್ಲಿ ನಾನು ದಳ್ಳಾಳಿ ಹಣ ಕೊಡುವುದಿಲ್ಲವೆಂಬ ತತ್ವವನ್ನು ನಿಷ್ಠೆಯಿಂದ ಪಾಲಿಸಿದ್ದೆನಾದರೂ ಇಲ್ಲಿ ಅದನ್ನು ನಡೆಸಲು ಸಾಧ್ಯವಾಗಲಿಲ್ಲ ಎಂದು ಒಪ್ಪಿಕೊಳ್ಳಬೇಕು. ಇಲ್ಲಿಯ ಸ್ಥಿತಿಗೂ ಅಲ್ಲಿಯ ಸ್ಥಿತಿಗೂ ವ್ಯತ್ಯಾಸವಿದೆ. ಬೊಂಬಾಯಿಯಲ್ಲಿ ಹಣವನ್ನು ಕೊಡುವುದು ದಳ್ಳಾಳಿಗಳಿಗೆ. ಇಲ್ಲಿ ಕೊಡುವುದು ನನಗೆ ಮೊಕದ್ದಮೆಗಳನ್ನು ಒದಗಿಸಿಕೊಡುತ್ತಿದ್ದ ವಕೀಲರಿಗೆ, ಬೊಂಬಾಯಿಯಲ್ಲಿ ಹೇಗೊ ಹಾಗೆ ಇಲ್ಲಿಯೂ ಸಹ ಎಲ್ಲ ಬ್ಯಾರಿಸ್ಟರಗಳೂ ತಮ್ಮ ಶುಲ್ಕದ ಒಂದು ಭಾಗವನ್ನು ವಕೀಲರಿಗೆ ತಪ್ಪದೆ ಕೊಡಲೇಬೇಕು ಎಂದು ನನಗೆ ಹೇಳಿದರು. ನಮ್ಮ ಅಣ್ಣನ ವಾದಕ್ಕೆ ನನ್ನಲ್ಲಿ ಯಾವ ಉತ್ತರವೂ ಇರಲಿಲ್ಲ. ಅವರು ಹೀಗೆ ಹೇಳಿದರು: "ಇಲ್ಲಿ ನೋಡು, ನಾನು ಮತ್ತೊಬ್ಬ ವಕೀಲರ ಪಾಲುದಾರರಾಗಿರುವುದು ನಿನಗೆ ಗೊತ್ತೇ ಇದೆ. ನಮ್ಮಲ್ಲಿ ಬರುವ ಮೊಕದ್ದಮೆಗಳಲ್ಲಿ ನಾನು ನಡೆಸಬಹುದಾದುದನ್ನೆಲ್ಲ ನಿನಗೆ ನಾನು ಕೊಡುವುದು ಸ್ವಾಭಾವಿಕ. ನನ್ನ ಪಾಲುದಾರರಿಗೆ ನೀವು ದಳ್ಳಾಳಿ ಹಣವನ್ನು ಕೊಡಲು ಒಪ್ಪದಿದ್ದರೆ, ನನ್ನನ್ನು ನೀನು ಒಳ್ಳೆಯ ಪೇಚಾಟಕ್ಕೆ ಸಿಕ್ಕಿಸಿದಂತೆ ಆಗುತ್ತದೆ. ಅಲ್ಲದೆ ನೀನೂ ನಾನು ಒಟ್ಟಿಗೆ ಇರುವುದರಿಂದ ನೀನು ಕೊಟ್ಟುದರಲ್ಲಿ ಒಂದು ಪಾಲು ನನಗೆ ಬಂದೇ ಬರುತ್ತದೆ. ನನ್ನ ಪಾಲುದಾರ, ಅದೇ ಮೊಕದ್ದಮೆಯನ್ನು ಮತ್ತಾರಾದರೂ ಬ್ಯಾರಿಸ್ಟರ್‌ಗೆ ಕೊಟ್ಟರೆ ಅವನ ಬಾಬ್ತು ದಳ್ಳಾಳಿ ಹಣ ಅವರಿಗೆ ತಾನಾಗಿಯೇ ಬರುತ್ತದೆ. ನಾನು ಈ ವಾದಕ್ಕೆ ಮರುಳಾದೆ. ಬ್ಯಾರಿಸ್ಟರ್ ವೃತ್ತಿಯನ್ನು ನಾನು ನಡೆಸುವುದಾದರೆ ದಳ್ಳಾಳಿ ಕೊಡುವುದಿಲ್ಲವೆಂಬ ನನ್ನ ತತ್ತ್ವವನ್ನು ಇಂತಹ ಸಂದರ್ಭಗಳಲ್ಲಿ ಅನುಷ್ಠಾನಗೊಳಿಸುವುದು ಸಾಧ್ಯವಿಲ್ಲವೆಂದು ಅರಿತು ನನ್ನ ಮನಸ್ಸನ್ನು ಸಮಾಧಾನ ಮಾಡಿಕೊಂಡ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ನನ್ನನ್ನೇ ನಾನು ಮೋಸ ಮಾಡಿಕೊಂಡೆ. ಮತ್ತಾವ ಮೊಕದ್ದಮೆಯ ಸಂಬಂಧದಲ್ಲಿಯೂ ನಾನು ದಳ್ಳಾಳಿ ಹಣ ಕೊಟ್ಟುದು ನನಗೆ ಜ್ಞಾಪಕವಿಲ್ಲ.

ಹೀಗೆ ನನ್ನ ಜೀವನಕ್ಕೆ ಸಾಕಾಗುವಷ್ಟು ಹಣವನ್ನು ನಾನು ಗಳಿಸತೊಡಗಿದೆ. ಆದರೆ ನನ್ನ ಬಾಳಿನ ಪ್ರಥಮ ಆಘಾತ ನನಗೆ ಉಂಟಾದುದು ಈ ಸಂದರ್ಭದಲ್ಲಿಯೇ ಬ್ರಿಟಿಷ್ ಅಧಿಕಾರಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದನ್ನು ನಾನು ಕಿವಿಯಲ್ಲಿ ಕೇಳಿದ್ದೆ. ಆದರೆ ಅದುವರೆಗೆ ನಾನು ಅವರಲ್ಲಿ ಒಬ್ಬರನ್ನು ಪ್ರತ್ಯಕ್ಷವಾಗಿ ಎದುರಿಸಿರಲಿಲ್ಲ.

ಪೋರ್‌ಬಂದರಿನ ಹಿಂದಿನ ರಾಣಾ ಸಾಹೇಬರು ಗದ್ದಿಗೆ ಏರುವುದಕ್ಕೆ ಮುಂಚೆ, ನಮ್ಮಣ್ಣ ಆತನಿಗೆ ಸಲಹೆಗಾರನ, ಕಾರ್ಯದರ್ಶಿಯೂ ಆಗಿದ್ದ. ಆ ಆದಿಕಾರದಲ್ಲಿರುವಾಗ ರಾಣಾ ಸಾಹೇಬರಿಗೆ ತಪ್ಪು ಸಲಹೆಯನ್ನು ಕೊಟ್ಟನೆಂಬ ಅಪರಾಧ ನಮ್ಮಣ್ಣನ ತಲೆಗೆ ಕಟ್ಟಿತು. ವಿಷಯ ಪೊಲಿಟಿಕಲ್ ಏಜೆಂಟರವರೆಗೆ ಮುಟ್ಟಿದ್ದಿತು. ಅವರು ನಮ್ಮಣ್ಣನ ವಿಷಯದಲ್ಲಿ ಕೆಟ್ಟ ಅಭಿಪ್ರಾಯವುಳ್ಳವರಾಗಿದ್ದರು. ಇಂಗ್ಲೆಂಡಿನಲ್ಲಿ ನಾನು ಇದ್ದಾಗ ನನಗೆ ಅವರ ಪರಿಚಯವಾಗಿತ್ತು. ಅವರು ನನ್ನೊಂದಿಗೆ ತಕ್ಕ ಮಟ್ಟಿಗೆ ಸ್ನೇಹದಿಂದಲೇ ವರ್ತಿಸುತ್ತಿದ್ದರೆಂದು ಹೇಳಬಹುದು ಆ ಸ್ನೇಹವನ್ನು ನಾನು ಉಪಯೋಗಪಡಿಸಿಕೊಂಡು ನಮ್ಮಣ್ಣನ ವಿಷಯವಾಗಿ ಒಳ್ಳೆಯ ಮಾತುಗಳನ್ನು ಹೇಳಿ ಪೊಲಿಟಿಕಲ್ ಏಜೆಂಟರಿಗೆ ಅವನಲ್ಲಿದ್ದ ದುರಭಿಪ್ರಾಯವನ್ನು ಹೋಗಲಾಡಿಸಬೇಕೆಂದು ನಮ್ಮಣ್ಣ ಯೋಚಿಸಿದನು. ಈ ಅಭಿಪ್ರಾಯ ನನಗೆ ಸ್ವಲ್ಪವೂ ಒಪ್ಪಿಗೆಯಾಗಲಿಲ್ಲ. ಇಂಗ್ಲೆಂಡಿನಲ್ಲಿ ಆತನೊಡನೆ ಉಂಟಾದ ಅಲ್ಪ ಸ್ವಲ್ಪ ಪರಿಚಯದ ಲಾಭವನ್ನು ಇಲ್ಲಿ ಪಡೆಯಲು ಯತ್ನಿಸುವುದು ಸರಿಯಲ್ಲವೆಂದು ನಾನು ಯೋಚಿಸಿದ. ನಮ್ಮಣ್ಣ ನಿಜವಾದ ತಪ್ಪು ಮಾಡಿದ್ದರೆ ನನ್ನ ಶಿಫಾರಸ್ಸಿನಿಂದ ಪ್ರಯೋಜನವೇನು? ಅವನು ನಿರಪರಾಧಿಯಾಗಿದ್ದರೆ ಸರಿಯಾದ ಮಾರ್ಗದಲ್ಲಿ ತನ್ನ ಅರ್ಜಿಯನ್ನು ಸಲ್ಲಿಸಿ, ಆತ್ಮವಿಶ್ವಾಸದಿಂದ ಹೋರಾಡಿ ಪರಿಣಾಮವನ್ನು ಎದುರಿಸಬೇಕು ಎಂದುಕೊಂಡ, ಈ ವಿಚಾರಸರಣಿ ನಮ್ಮಣ್ಣನಿಗೆ ರುಚಿಸಲಿಲ್ಲ. "ನಿನಗೆ ಕಾಥೇವಾಡ ವಿಷಯ ಗೊತ್ತಿಲ್ಲ. ನೀನು ಇನ್ನೂ ಪ್ರಪಂಚಜ್ಞಾನವನ್ನು ಕಲಿಯಬೇಕು. ಇಲ್ಲಿ ಏನು ನಡೆಯಬೇಕಾದರೂ ಶಿಫಾರಸಿನಿಂದಲೇ, ನಿನಗೆ ಪರಿಚಯವಿರುವ ಆಫೀಸರಲ್ಲಿ, ನಿಮ್ಮಣ್ಣನ ವಿಷಯವಾಗಿ ಒಂದೆರಡು ಒಳ್ಳೆಯ ಮಾತುಗಳನ್ನು ಆಡಿ ನಿನ್ನ ಕರ್ತವ್ಯವನ್ನು ಮಾಡದಿರುವುದು ನಿನಗೆ ಉಚಿತವಲ್ಲ" ಎಂದನು.

ನಾನು ನಮ್ಮಣ್ಣನ ಮಾತುಗಳನ್ನು ಮೀರಲಾರದೆ ನನಗೆ ಇಷ್ಟವಿಲ್ಲದಿದ್ದರೂ ಆ ಅಧಿಕಾರಿಯ ಬಳಿ ಹೋದೆ. ಅಧಿಕಾರಿಯನ್ನು ಹೋಗಿ ಕಾಣಲು ನನಗೆ ಯಾವ ಹಕ್ಕು ಇರಲಿಲ್ಲ. ಇದರಿಂದ ನನ್ನ ಆತ್ಮಗೌರವಕ್ಕೆ ಹಾನಿ ಎಂಬುದು ನನಗೆ ಗೊತ್ತಿತ್ತು. ನಾನು ಒಂದು ಭೇಟಿಯನ್ನು ಕೋರಿದೆನು. ಅದೂ ದೊರೆತು, ನಾನು ಆತನನ್ನು ಹೋಗಿ ನೋಡಿದೆ. ಇಂಗ್ಲೆಂಡಿನ ಪರಿಚಯವನ್ನು ಜ್ಞಾಪಿಸಿದೆ. ನನಗೆ ತಕ್ಷಣ ಗೊತ್ತಾಯಿತು. ಕಾಥೇವಾಡ ಇಂಗ್ಲೆಂಡ್ ಅಲ್ಲ, ರಜದಲ್ಲಿರುವ ವ್ಯಕ್ತಿ, ಅಧಿಕಾರದಲ್ಲಿರುವ ವ್ಯಕ್ತಿಯಲ್ಲ, ಬೇರೆಯೇ ಎಂಬುದು ಪೊಲಿಟಿಕಲ್ ಏಜೆಂಟ್‌ನು ನನ್ನ ಪರಿಚಯವನ್ನು ಅಂಗೀಕರಿಸಿದ. ಆದರೆ ಅದರ ಜ್ಞಾಪಕ ಅವನ ದರ್ಪವನ್ನು ಹೆಚ್ಚಿಸಿದಂತೆ ತೋರಿತು. ಆ ಪರಿಚಯದ ದುರುಪಯೋಗ ಮಾಡಿಕೊಳ್ಳಲು ನೀನು ಬಂದಿಲ್ಲವಷ್ಟೇ ಎಂದು ಹೇಳುವಂತಿತ್ತು ಆ ದರ್ಪ, ಅದೇ ಅಭಿಪ್ರಾಯ ಅವನ ಮುಖದಲ್ಲಿ ಚಿತ್ರಿತವಾದಂತಿತ್ತು. ಆದರೂ ನಾನು ಹೋಗಿದ್ದ ವಿಷಯ ಪ್ರಸ್ತಾಪ ಪ್ರಾರಂಭಿಸಿದೆ. ಸಾಹೇಬ ಸಹನೆಯನ್ನು ಕಳೆದುಕೊಂಡು. "ನಿಮ್ಮಣ್ಣ ಪಿತೂರಿಗಾರ. ಇನ್ನೇನನ್ನೂ ನೀನು ಹೇಳಿವುದು ನನಗೆ ಬೇಕಾಗಿಲ್ಲ. ನನಗೆ ಸಮಯವಿಲ್ಲ. ನಿಮ್ಮಣ್ಣ ಏನಾದರೂ ಹೇಳುವುದಿದ್ದರೆ ಸರಿಯಾದ ರೀತಿಯಲ್ಲಿ ಅರ್ಜಿ ಹಾಕಲಿ" ಎಂದನು. ಉತ್ತರ ಸಾಕಾದುದಾಗಿತ್ತು. ಪ್ರಾಯಶಃ ಅದು ನ್ಯಾಯವೂ ಆಗಿತ್ತು. ಆದರೆ ಸ್ವಾರ್ಥಕ್ಕೆ ಕಣ್ಣಿಲ್ಲ. ನಾನು ನನ್ನ ಕಥೆಯನ್ನೇ ಮುಂದುವರಿಸಿದೆ. ಸಾಹೇಬ ಎದ್ದು ನಿಂತು "ಈಗ ಹೊರಡು" ಎಂದನು.

"ದಯವಿಟ್ಟು ನನ್ನ ಕಥೆಯನ್ನು ಪೂರ್ತಿ ಕೇಳಿ" ಎಂದೆನು. ಆತನಿಗೆ ಆದರಿಂದ ಕೋಪವುಂಟಾಯಿತು. ತನ್ನ ಜವಾನನನ್ನು ಕರೆದು "ಈತನನ್ನು ಹೊರಕ್ಕೆ ಕಳುಹಿಸು" ಎಂದು ಹೇಳಿದನು. ನಾನು ಇನ್ನೂ ಅನುಮಾನಿಸುತ್ತಲೇ ಇದ್ದೆ. ಜವಾನ ಬಂದು ನನ್ನ ಹೆಗಲಿಗೆ ಕೈ ಹಾಕಿ ನನ್ನನ್ನು ಕೊಠಡಿಯಿಂದ ಹೊರಕ್ಕೆ ನೂಕಿದ.

ಸಾಹೇಬನು ಹೊರಟುಹೋದ. ಜವಾನನೂ ಹೊರಟುಹೋದ. ದುಃಖ ಮತ್ತು ಕೋಪದಿಂದ ಬುಸುಗುಟ್ಟುತ್ತಾ ನಾನು ಹಿಂದಿರುಗಿದೆ. ನಾನು ತತ್‌ಕ್ಷಣ ಈ ಮುಂದಿನ ಅಭಿಪ್ರಾಯವುಳ್ಳ ಒಂದು ಪತ್ರವನ್ನು ಸಾಹೇಬನಿಗೆ ಬರೆದು ಕಳುಸಹಿಸಿದೆ. "ನೀವು ನನಗೆ ಅವಮಾನ ಮಾಡಿದಿರಿ, ನಿಮ್ಮ ಆಳಿನ ಮೂಲಕ ನನ್ನ ಮೇಲೆ ಆಕ್ರಮಣ ನಡೆಸಿದಿರಿ. ನನ್ನಲ್ಲಿ ಕ್ಷಮೆಯನ್ನು ಕೋರದಿದ್ದಲ್ಲಿ, ನಿಮ್ಮ ಮೇಲೆ ಮಾನನಷ್ಟದ ದಾವಾ ಹೂಡುತ್ತೇನೆ".

ಮಹಿಳೆಯರ ಸಭೆ

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

ಸಭೆ ಮಾರುತಿ ಗುಡಿಯಲ್ಲಿ ನಡೆಯಿತು. ಗಾಂಧೀಜಿ ಹೇಳಿದರು: ಈ ಗುಡಿಯಲ್ಲಿ ನಿಮ್ಮೆಲ್ಲರ ದರ್ಶನದಿಂದ ನಾನು ಪುನೀತನಾದೆ. ಎಲ್ಲಕ್ಕಿಂತ ನನಗೆ ಹೆಚ್ಚು ಸಂತೋಷ ನನ್ನ ಗೆಳೆಯ ಶೌಕತ್ ಆಲಿಯನ್ನು ನೀವು ನೋಡಬಯಸಿದ್ದು. ನಾವೆಲ್ಲರೂ ದಣಿದು ಸ್ವಲ್ಪ ವಿಶ್ರಾಂತಿ ಪಡೆಯುತ್ತಿದ್ದೆವು. ಆದರೆ ನೀವು ಶೌಕತ್ ಆಲಿಯನ್ನು ನೋಡ ಬಯಸಿದ್ದರಿಂದ ಕೂಡಲೆ ಆತನಿಗೆ ಹೇಳಿಕಳುಹಿಸಿ ಕರೆದುಕೊಂಡು ಬಂದೆ. ಈ ನಿಮ್ಮ ಸದ್ಭಾವನೆಯಲ್ಲಿ ಭಾರತದ ಗೆಲುವು ಅಡಗಿದೆ. ನಮ್ಮ ಹಿಂದೂ ಹೆಂಗಸರು ಮುಸ್ಲಿಂರನ್ನು ಎಲ್ಲಿಯವರೆಗೆ ಅಣ್ಣ-ಅಮ್ಮಂದಿರೆಂದು ತಿಳಿಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದುರದೃಷ್ಟ ನೀಗದು. ಈ ದೇವಸ್ಥಾನದಲ್ಲಿ ಕುಳಿತು ನಿಮ್ಮ ಮನಸ್ಸನ್ನು ನೋಯಿಸಲು ನನಗೆ ಇಷ್ಟವಿಲ್ಲ. ನಾನು ಒಬ್ಬ ಸನಾತನಿ ಹಿಂದೂ. ಬೇರೆ ಯಾವ ಧರ್ಮವನ್ನೂ ತಿರಸ್ಕರಿಸಬಾರದೆಂದು, ಅಗೌರವದಿಂದ ಕಾಣಬಾರದೆಂದು ನನ್ನ ಹಿಂದೂಧರ್ಮ ನನಗೆ ಹೇಳಿಕೊಟ್ಟಿದೆ. ಎಲ್ಲಿಯವರೆಗೆ ಇತರ ಮತದವರನ್ನು ಪ್ರೀತಿಸುವುದಿಲ್ಲವೋ ನಮ್ಮ ನೆರೆಹೊರೆಯುವರನ್ನು ಪ್ರೀತಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದೇಶದ ಕ್ಷೇಮ ಸಾಧ್ಯವಾಗದು ಎಂದು ನನಗೆ ಗೊತ್ತಾಗಿದೆ. ನಿಮ್ಮ ರೂಢಿಗಳನ್ನು ಬದಲಾಯಿಸಿ, ಮುಸಲ್ಮಾನರ ಜೊತೆಯಲ್ಲಿ ಊಟ ಮಾಡಿ, ಅವರನ್ನು ಮದುವೆ ಮಾಡಿಕೊಳ್ಳಿ ಎಂದು ಹೇಳಲು ನಾನು ಇಲ್ಲಿಗೆ ಬಂದಿಲ್ಲ. ಆದರೆ ಪ್ರತಿಯೊಬ್ಬ ಮನುಷ್ಯನನ್ನು ಪ್ರೀತಿಸಬೇಕು ಎಂದು ಹೇಳಲು ಬಂದಿದ್ದೇನೆ. ಇತರ ಮತಗಳ ಜನರನ್ನು ಪ್ರೀತಿಸಬೇಕೆಂದು ನಿಮ್ಮ ಮಕ್ಕಳಿಗೆ ಹೇಳಿಕೊಡಲು ಬೇಡುತ್ತೇವೆ.

ದೇಶದ ಆಗುಹೋಗುಗಳನ್ನು, ರಾಷ್ಟ್ರೀಯ ವಿದ್ಯಮಾನಗಳನ್ನು ಅರಿತುಕೊಳ್ಳಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತೇನೆ. ಇದಕ್ಕಾಗಿ ನೀವು ಉನ್ನತ ವಿದ್ಯಾಭ್ಯಾಸಂಗ ಮಾಡಬೇಕಾದ್ದಿಲ್ಲ. ದೊಡ್ಡ ಗ್ರಂಥಗಳನ್ನು ಓದಬೇಕಾದ್ದಿಲ್ಲ. ನಮ್ಮ ಸರಕಾರ ರಾಕ್ಷಸಿ ಸರಕಾರ ಎಂದು ಹೇಳುತ್ತೇನೆ. ಸರಕಾರ ನಮ್ಮ ಮುಸ್ಲಿಂ ಸೋದರರ ಭಾವನೆಯನ್ನು ತುಂಬಾ ಗಾಸಿಗೊಳಿಸಿದೆ. ಪಂಜಾಬಿನಲ್ಲಿ ಸ್ತ್ರೀ-ಪುರುಷರ ಮೇಲೆ, ಮಕ್ಕಳ ಮೇಲೆ ಮಾಡಿದ ಭಯಂಕರ ಅತ್ಯಾಚಾರಗಳನ್ನು ಹೇಳಲು ಸಾಧ್ಯ ಇಲ್ಲ. ಈ ಸರಕಾರ ತನ್ನ ತಪ್ಪನ್ನು ಒಪ್ಪಿಕೊಳ್ಳದು, ಪರಿತಾಪಪಡದು. ನಮ್ಮನ್ನೇ ತಿರುಗಿ ಕೇಳುತ್ತದೆ ಈ ಕ್ರೌರ್ಯವನ್ನೆಲ್ಲ ಮರೆತುಬಿಡಿ ಎಂದು. ಆದ್ದರಿಂದಲೇ ಇದನ್ನು ರಾಕ್ಷಸೀ ಸರಕಾರ ಎನ್ನುತ್ತೇನೆ. ಈಗ ನಮ್ಮ ಜನರು ಎಲ್ಲರೂ ಅಸಹಕಾರ ಮಾಡಬೇಕು. ರಾವಣನೊಂದಿಗೆ ಸೀತೆ ಅಸಹಕರಿಸಲಿಲ್ಲವೆ? ರಾಮಚಂದ್ರ ಅಸಹಕರಿಸಲಿಲ್ಲವೆ? ರಾವಣ ಎಷ್ಟು ಪ್ರಲೋಭನಗೊಳಿಸಿದ ಸೀತೆಯನ್ನು. ಮುತ್ತು ರತ್ನಗಳನ್ನು ಕಳಿಸಿದ. ಸೀತೆ ಅದು ಯಾವುದನ್ನೂ ಕಣ್ಣೆತ್ತಿ ಕೂಡ ನೋಡದೆ, ರಾವಣನ ಹಿಡಿತದಿಂದ ತಪ್ಪಿಸಿಕೊಳ್ಳಲು ಕಟ್ಟುನಿಟ್ಟಾದ ತಪಶ್ಚರ್ಯೆ ಮಾಡಿದಳು. ಮುಕ್ತಳಾಗುವವರೆಗೆ ಒಳ್ಳೆಯ ಬಟ್ಟೆ ಉಡಲಿಲ್ಲ. ಒಡವೆ ತೊಡಲಿಲ್ಲ. ರಾಮಲಕ್ಷ್ಮಣರಿಬ್ಬರೂ ಎಷ್ಟು ತಪಸ್ಸು ಮಾಡಿದರು. ಅವರ ಇಂದ್ರಿಯ ಸಂಯಮ ಎಷ್ಟು? ಬರೀ ಹಣ್ಣು-ಹಂಪಲು ತಿನ್ನುತ್ತ ಬ್ರಹ್ಮಚರ್ಯವ್ರತನಿಷ್ಠರಾಗಿ ಕಾಲ ಕಳೆದರಲ್ಲ. ಈ ದಬ್ಬಾಳಿಕೆಯ ಸರಕಾರ ನಮ್ಮ ಬೆನ್ನಿನ ಮೇಲೆ ಸವಾರಿ ಮಾಡುತ್ತಿರುವವರೆಗೆ ಗಂಡಸಿಗಾಗಲಿ, ಹೆಂಗಸಿಗಾಗಲಿ ಒಳ್ಳೆಯ ಬಟ್ಟೆ ಬರೆ ಉಡಲು, ಒಳ್ಳೆಯ ಒಡವೆ ತೊಡಲು ಅಧಿಕಾರವೇ ಇಲ್ಲ. ಭಾರತ ಸ್ವತಂತ್ರ ಆಗುವವರೆಗೆ, ಮುಸ್ಲಮಾನರ ಗಾಯಗಳು ಮಾಯುವವರೆಗೆ ನಾವೆಲ್ಲರೂ ಫಕೀರರ ಹಾಗೆ ಇರಬೇಕು. ಕಷ್ಟ ಸಹನೆಯ ಬೆಂಕಿಯುಲ್ಲಿ ನಮ್ಮ ಶ್ರೀಮಂತಿಕೆ ನಮ್ಮ ವಿಲಾಸ ಭೋಗಗಳನ್ನು ಸುಡಬೇಕು. ನಿಮ್ಮ ಸುಖಭೋಗಗಳನ್ನು ಬಿಟ್ಟು ಕಠಿಣ ತಪಶ್ಚರ್ಯೆಯನ್ನು ಅವಲಂಬಿಸಿ, ನಿಮ್ಮ ಚಿತ್ತವನ್ನು ಶುದ್ಧವಾಗಿಟ್ಟುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

50 ವರ್ಷಗಳ ಹಿಂದೆ ನಮ್ಮ ಹೆಂಗಸರು ಎಲ್ಲರೂ ರಾಟೆ ತಿರುಗಿಸುತ್ತಿದ್ದರು, ಕೈನೂಲಿನ ಬಟ್ಟೆ

ಉಡುತ್ತಿದ್ದರು. ಹೆಂಗಸರಿಗೆ ನಿಮಗೆ ಹೇಳುತ್ತೇನೆ ಎಂದು ನಾವು ಸ್ವದೇಶಿ ಧರ್ಮವನ್ನು ಕೈಬಿಟ್ಟೆವೊ ಅಂದೇ ನಮ್ಮ ಪತನ ಪ್ರಾರಂಭವಾಯಿತು. ನಾವು ಗುಲಾಮರಾದೆವು. ದೇಶದಲ್ಲಿ ಎಲ್ಲ ಕಡೆಯಲ್ಲಿಯೂ ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಉಡಲು ಬಟ್ಟೆ ಇಲ್ಲದೆ ಬೆತ್ತಲೆ ಹೋಗುತ್ತಿದ್ದಾರೆ. ಪರಿಸ್ಥಿತಿ ಹೀಗಿದೆ. ನೀವು ಪ್ರತಿಯೊಬ್ಬರೂ ದಿನವೂ ಒಂದು ಗಂಟೆ ಹೊತ್ತು ನೂತು ಆ ನೂಲನ್ನು ದೇಶಕ್ಕೆ ದಾನ ಕೊಡಬೇಕು ಎಂದು ಬೇಡುತ್ತೇನೆ. ಕೆಲವು ಕಾಲ ನಿಮಗೆ ಸೊಗಸಾದ ಬಟ್ಟೆ ಸಿಗಲಿಕ್ಕಿಲ್ಲ. ಆದರೆ ಸೊಗಸಾದ ನೂಲನ್ನು ನೂಲಲು ಕಲಿತರೆ ಆಗ ಅದು ಸಿಕ್ಕೇ ಸಿಗುತ್ತದೆ. ಆದರೆ ದೇಶ ಗುಲಾಮಗಿರಿಯಲ್ಲಿರುವ ತನಕ, ಒಳ್ಳೆ ಬಟ್ಟೆಯನ್ನು ಉಡುವ ಯೋಚನೆಯನ್ನೇ ಮಾಡಬಾರದು. ಒಳ್ಳೆಯ ನೂಲನ್ನು ನೂಲಲು ಸಮಯ ಬಹಳ ಬೇಕು, ಈಗಲೋ ನಮಗೆ ಘಳಿಗೆ ಘಳಿಗೆಯೂ ಅತ್ಯಮೂಲ್ಯ.

ನಿಮ್ಮಲ್ಲಿ ಸ್ವಾರ್ಥತ್ಯಾಗವನ್ನು ನಾನು ಪ್ರಚೋದಿಸಲಬಲ್ಲೆನಾದರೆ ದೇಶಕ್ಕಾಗಿ ನಿಮ್ಮ ಕೈಮೇಲಿರುವ ಎಲ್ಲ ಒಡವೆಗಳನ್ನು ಸುಲಿದುಕೊಳ್ಳಲು ನಾನು ಹಿಂಜರಿಯೆ. ಅದರಿಂದ ಬಂದ ಹಣವನ್ನು ದೇಶಪಾಂಡೆ ಗಂಗಾಧರರಾಯರು ರಾಷ್ಟ್ರೀಯ ವಿದ್ಯಾಭ್ಯಾಸಕ್ಕೆ, ಸ್ವದೇಶಿ ಪ್ರಚಾರಕ್ಕೆ ಉಪಯೋಗಿಸುತ್ತಾರೆ. ಈ ದೇವಾಲಯಕ್ಕೆ ಹಣ ಹೇಗೆ ನೀಡುತ್ತೀರೋ ಅದೇ ಭಾವನೆಯಿಂದ ದೇಶಕ್ಕಾಗಿ ನೀಡಿ, ಕಟುಕನ ಕೈಗೆ ಸಿಕ್ಕ ಬಡಹಸುವಿನಂತೆ ಆಗಿದೆ ಭಾರತ. ಅದನ್ನು ಬಿಡಿಸುವುದು ನನ್ನ ಕರ್ತವ್ಯ, ನಿಮ್ಮ ಕರ್ತವ್ಯ.

ಕಟ್ಟ ಕಡೆಯಲ್ಲಿ ನಿಮ್ಮನ್ನು ಒಂದು ಮಾತು ಕೇಳುತ್ತೇನೆ. ಶೌಕತ್ ಆಲಿ ಗಂಗಾಧರ ರಾಯರು, ನಾನು ಯಾವ ಕೆಲಸ ಮಾಡುತ್ತಿದ್ದೇವೋ ಅದನ್ನು ಹರಸಿ, ಯಾರೂ ಯಾವ ತಂಗಿಯೂ ಏನೋ ದಾಕ್ಷಿಣ್ಯಕ್ಕೊಳಗಾಗಿ ತನ್ನ ಆಭರಣವನ್ನು ಕಳಚಿಕೊಡದೇ ಇರಲಿ. ನಿಮ್ಮ ಮನಸ್ಸಿನಲ್ಲಿ ಇದು ಪವಿತ್ರ ಕಾರ್ಯ, ಇದು ಕರ್ತವ್ಯ ಎನಿಸಿದರೆ ಮಾತ್ರ ನೀಡಿ. ದೇವರು ನಿಮಗೆ ಧೈರ್ಯವನ್ನೂ ಪರಿಶುದ್ಧತೆಯನ್ನೂ ಕೊಟ್ಟು ದೇಶಕ್ಕಾಗಿ ತ್ಯಾಗ ಮಾಡುವ ಮನೋಭಾವನೆಯನ್ನು ಕೊಡಲಿ.

ಅಂದಿನ ಮಹಿಳೆಯರ ಸಭೆಯಲ್ಲಿ ಎರಡು ಸಾವಿರ ರೂಪಾಯಿಗೆ ಕಡಿಮೆಯಿಲ್ಲದ ಆಭರಣಗಳು ಬಂದವು. ಜೊತೆಗೆ ಸ್ವಲ್ಪ ನಗದು ಹಣವೂ ಬಂತು.

ನಿತ್ಯೋತ್ಸವ

– ಪ್ರೊ. ಕೆ.ಎಸ್. ನಿಸಾರ್ ಅಹಮದ್

ಜೋಗದ ಸಿರಿ ಬೆಳಕಿನಲ್ಲಿ
ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಕದದಿರ
ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣ ವನದ
ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ ತಾಯಿ ನಿತ್ಯೋತ್ಸವ
ನಿನಗೆ ನಿತ್ಯೋತ್ಸವ

ಇತಿಹಾಸದ ಹಿಮದಲ್ಲಿನ
ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ
ಶಾಸನಗಳ ಸಾಲಿನಲ್ಲಿ
ಓಲೆಗರಿಯ ಸಿರಿಗಳಲ್ಲಿ
ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯಿ ನಿತ್ಯೋತ್ಸವ
ನಿನಗೆ ನಿತ್ಯೋತ್ಸವ

ಹಲವೆನ್ನದೆ ಹಿರಿಮೆಯೆ
ಕುಲವೆನ್ನದ ಗರಿಮೆಯೆ
ಸದ್ವಿಕಾಸ ಶೀಲ ನುಡಿಯ
ಲೋಕಾವೃತ ಸೀಮೆಯೆ
ಈ ವತ್ಸರ ನಿಮತ್ಸರ
ಮನೆದುದಾರ ಮಹಿಮೆಯೆ
ನಿತ್ಯೋತ್ಸವ ತಾಯಿ ನಿತ್ಯೋತ್ಸವ
ನಿನಗೆ ನಿತ್ಯೋತ್ಸವ

ಮದ್ಯಪಾನದ ಪರಿಣಾಮಗಳು ಮತ್ತು ದುಷ್ಪರಿಣಾಮಗಳು :

ಡಾ. ಸಿ.ಆರ್. ಚಂದ್ರಶೇಖರ್

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

"ಇನ್ಸಪೆಕ್ಟರೇ ನನಗೆ ರಕ್ಷಣೆ ಬೇಕು, ನಾನೆಲ್ಲಿ ಹೋದರೂ ಕೆಲವರು ನನ್ನನ್ನು ಹಿಂಬಾಲಿಸುತ್ತಾರೆ. ನನ್ನನ್ನು ಕೊಲ್ಲಲು, ಅದು ಸಾಧ್ಯವಾಗದಿದ್ದರೆ ನನ್ನ ಕೈಕಾಲು ಮುರಿದು ಮೂಲೆಯಲ್ಲಿ ಕೂರಿಸಲು ಸಂಚು ಮಾಡುತ್ತಿದ್ದಾರೆ. ಅವರಿಗೆ ನನ್ನ ರೂಪವತಿ ಹೆಂಡತಿಯ ಮೇಲೆ ಕಣ್ಣು. ಆ ಕತ್ತೆರಂಡೆಯೂ ಅವರ ಕಡೆ ಸೇರಿಕೊಂಡಿದ್ದಾಳೆ. ನನಗೆ ವಿಷ ಹಾಕಿ ಕೊಲ್ಲಲು ಪ್ರಯತ್ನ ಮಾಡಿದಳು. ಈಗ ನಾನು ಅವಳು ಮಾಡಿದ ಅಡುಗೆಯನ್ನು ಉಣ್ಣುವುದಿಲ್ಲ. ಹೊರಗಡೆ ತಿನ್ನುತ್ತಿದ್ದೇನೆ. ಅವಳ ಅಪ್ಪ ಅಮ್ಮ ಕೂಡ ಅವಳಿಗೇ ಸಪೋರ್ಟು. ಇವರನ್ನೆಲ್ಲ ಹಿಡಿದು, ಒದೆಕೊಡಿ, ಭಯಪಡಿಸಿ ಎಂದ ಪ್ರಭಾಕರ. ಪ್ರಭಾಕರ ಮದ್ಯಪಾನದ ಚಟ ಬೆಳೆಸಿಕೊಂಡು, ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗಿದ್ದಾನೆ. ಪಾಪ ಅವನ ಹೆಂಡತಿ, ತರಕಾರಿ ವ್ಯಾಪಾರ ಮಾಡಿ, ಜೀವನ ಸಾಗಿಸುತ್ತಿದ್ದಾಳೆ.

"ನೋಡಿದಿರಾ ರಾಘವೇಂದ್ರನ ಸೊಕ್ಕನ್ನು! ನಿತ್ಯ ಬಾಟಲು ಹಾಕಿ ತೂರಾಡುತ್ತಾ ಆಫೀಸಿಗೆ ಬರುತ್ತಾನೆ. ಹೋಗಲಿ ಪಾಪ ಎಂದು ಮೇಲಾಧಿಕಾರಿಗಳಿಗೆ ನಾವು ದೂರು ಕೊಟ್ಟಿರದಿದ್ದುದೇ ತಪ್ಪಾಯಿತು. ಅವನೇ ಈಗ ನಮ್ಮೆಲ್ಲರ ಮೇಲೆ ದೂರು ಕೊಟ್ಟಿದ್ದಾನೆ. ನಾವೆಲ್ಲ ಅವನ ವಿರುದ್ಧ ಮಸಲತ್ತು ಮಾಡುತ್ತಿದ್ದೇವಂತೆ. ಅವನು ಕೆಲಸ ಮಾಡಲು ಅಡ್ಡಿಮಾಡುತ್ತಿದ್ದೇವಂತೆ. ಅವನ ಹೆಂಡತಿಯನ್ನು ಕೆಡಿಸಿದ್ದೇವಂತೆ. ಅವಳನ್ನು ಅವನ ವಿರುದ್ಧ ಎತ್ತಿ ಕಟ್ಟಿದ್ದೇವಂತೆ. ನಾವು ಅವನನ್ನು ವಿಷಹಾಕಿ ಕೊಲ್ಲಲು ಸಂಚು ಮಾಡುತ್ತಿದ್ದೇವಂತೆ. ಈ ದಿನ ಎಂ.ಡಿ. ನನ್ನನ್ನು ಕರೆದು, ಏನ್ರಿ ಇದೆಲ್ಲ ಎಂದು ಕೇಳಿದರು. ನಾನು ರಾಘವೇಂದ್ರ ಕುಡುಕ ಎಂದು ವಿವರಿಸಿದ ಮೇಲೆ ಸುಮ್ಮನಾದರು" ಎಂದರು ಸೂಪರ್‌ವೈಸರ್ ಜಯಸಿಂಹ.

'ಆಲ್ಕೋಹಾಲ್ ಪೆರನಾಯಿಡ್ ಸ್ಟೇಟ್' ಎಂಬ ಈ ಮನೋರಾಗದಲ್ಲಿ ವ್ಯಕ್ತಿ ಸಂಶಯಪೀಡಿತನಾಗಿ, ಕೈಹಿಡಿದ ಹೆಂಡತಿಯನ್ನು ನೆರೆಹೊರೆ, ಸಹದ್ಯೋಗಿಗಳನ್ನು ಸಂಶಯ ದೃಷ್ಟಿಯಿಂದ ನೋಡುತ್ತಾ ಅವರೆಲ್ಲ ತನ್ನ ವಿರುದ್ಧವಾಗಿದ್ದಾರೆ ಎಂದು ನಂಬುತ್ತಾನೆ. ಹಾಗೂ ಅವರ ಮಏಳೇ ಹಲ್ಲೆ ಮಾಡಬಹುದು, ಹೆಂಡತಿಯನ್ನು ಮನೆಯಿಂದ ಹೊರಗಟ್ಟಬಹುದು, ಸಾಹಿಸಲೂಬಹುದು.

ವರ್ನಿಕೆಯ ಎಚಿಸೆಫೆಲೋಪತಿ : ಈ ಸ್ಥಿತಿಯಲ್ಲಿ ಕಾರ್ಸಕಾಫ್ ಚಿತ್ತವಿಕಲತೆಯ ಲಕ್ಷಣಗಳ ಜೊತೆಗೆ, ಮೆದುಳಿನ ಸೆರೆಬೆಲ್ಲಮ್ (ಉಪಮಸ್ತಿಷ್ಕ)ಗೆ ಹಾನಿಯುಂಟಾಗಿ ವ್ಯಕ್ತಿ ನೇರವಾಗಿ ಸಮತೋಲನದಿಂದ ನಡೆಯಲಾರ, ಕೈಗಳನ್ನು ಉಪಯೋಗಿಸಲಾರ. ಕಣ್ಣುಗುಡ್ಡೆಗಳನ್ನು ಚಲಿಸುವ ಮಾಂಸ ಖಂಡಗಳು ನಿಷ್ಕ್ರಿಯಗೊಳ್ಳುವುದರಿಂದ ದೃಷ್ಟಿದೋಷ ಉಂಟಾಗುತ್ತದೆ. ಬಿ-1 ವಿಟಮಿನ್ ಕೊರತೆಯೇ ಇದಕ್ಕೆ ಪ್ರಮುಖ ಕಾರಣ. ಈ ವಿಟಮಿನ್ ಕೊಟ್ಟು ಆಲ್ಕೋಹಾಲ್ ಸೇವನೆಯನ್ನು ತಕ್ಷಣ ನಿಲ್ಲಿಸಿದರೆ ವ್ಯಕ್ತಿ ನಿಧಾನವಾಗಿ ಚೇತರಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ವ್ಯಕ್ತಿಯು ಸಾಯಲೂಬಹುದು. ಆಲ್ಕೋಹಾಲ್ ಫೆರಿಫೆರಲ್ ನ್ಯೂರೋಪತಿ (ಪರಿಧಿಯ ನರಬೆನೆ - ಸವೆತ) ಆಲ್ಕೋಹಾಲ್ ನಂಜುವಸ್ತು ನೇರವಾಗಿ ಹಾಗೂ ಬಿ-1, ಬಿ-6 ಮತ್ತು ಬಿ-12 ಕೊರತೆಯಿಂದ ಪರಿಧಿಯ ನರತಂತುಗಳು ಹಾನಿಗೀಡಾಗುತ್ತವೆ. ಹಲವು ನರತಂತುಗಳಸಮೂಹ ಹಾನಿಗೀಡಾಗಬಹುದು. ಕೈಕಾಲು ಜೋಮು, ಮರಗಟ್ಟುವಿಕೆ ಅಥವಾ ಉರಿ/ಪಿನ್ನು ಚುಚ್ಚಿದಂತಹ ಅನುಭವ, ಸ್ನಾಯುಗಳ ನಿಶ್ಯಕ್ತಿ ನೋವು, ಅಸಮತೋಲನ ನಡಿಗೆ ಮುಖ್ಯ ಲಕ್ಷಣಗಲು. ಚರ್ಮದ ಸ್ಪರ್ಶ, ಒತ್ತಡ ಹಾಗೂ ಕೀಲುಗಳ ಭಂಗಿಯ ಅರಿವು ಕಡಿಮೆಯಾಗುತ್ತದೆ.

ಡೆಮೆನ್ಷಿಯ (ಮತಿಯೀನ ಸ್ಥಿತಿ) : ದೀರ್ಘಾವಧಿಯಲ್ಲಿ, ಮದ್ಯಪಾನೀಯ ಮೆದುಳಿನ ಕಾರ್ಟೆಕ್ಸ್ ನಶಿಸಲು ಪ್ರಾರಂಭವಾಗುತ್ತದೆ. ಇದಕ್ಕೆ ಅಪೌಷ್ಟಿಕತೆ ಕಾರಣವೇ, ಆಲ್ಕೋಹಾಲ್ ನೇರವಾಗಿ ಕಾರಣವೇ ಎಂಬ ಜಿಜ್ಞಾಸೆ ಇದ್ದರೂ ವ್ಯಕ್ತಿ ಮತಿಹೀನ ಸ್ಥಿತಿ - ಡೆಮೆನ್ಷಿಯಾಗೆ ತುತ್ತಾಗಬಹುದು. ನೆಪು, ಕಲುಯುವ ಸಾಮರ್ಥ್ಯ, ಬುದ್ಧಿ ಚತುರತೆಗಳು, ಕಲಿತ ಕೌಶಲ್ಯಗಳು, ಸ್ವಾವಲಂಭಿಯಾಗಿ ಬದುಕುವ ಸಾಮರ್ಥ್ಯವನ್ನು ವ್ಯಕ್ತಿ ಕ್ರಮೇಣ ಕಳೆದುಕೊಳ್ಳುತ್ತಾನೆ. ಪೂರ್ಣವಾಗಿ ಪರಾವಲಂಭಿಯಾಗುತ್ತಾನೆ. ತಾನು ಯಾರು, ತನ್ನ ಮನೆಯವರು ತನ್ನ ಬಂಧು-ಮಿತ್ರರು, ತನ್ನ ಆಸ್ತಿಪಾಸ್ತಿಯ ವಿವರಗಳು, ತಾನೆಲ್ಲಿದ್ದೇನೆ, ಕಾಲಮಾನ ಎಲ್ಲವೂ ಮರೆತು ಹೋಗುತ್ತದೆ. ತನ್ನ ಬೇಕು-ಬೇಡಗಳನ್ನು ಗಮನಿಸಲಾರ, ಮೂಲೆಯಲ್ಲಿ ಹಾಸಿಗೆ ಹಿಡಿದು ಮಲಗುತ್ತಾನೆ. ಫಿಟ್ಸ್, ಪಾರ್ಶ್ವವಾಯು ಇತ್ಯಾದಿ ನರಸಂಭಂದಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಡೆಮೆನ್ಷಿಯಾ ಗುಣವಾಗುವುದಿಲ್ಲ. ಸಾವು ನಿಶ್ಚಿತ.

ಮಹಿಳೆಯರ ಮೇಲೆ ಆಲ್ಕೋಹಾಲ್ ದುಷ್ಪರಿಣಾಮಗಳು

ಗಂಡಸರಿಗೆ ಹೋಲಿಸಿದರೆ ಹೆಂಗಸರಿಗೆ ಆಲ್ಕೋಹಾಲ್ ಸೇವನೆಯಿಂದ ಬೇಗ ಹಾಗೂ ತೀವ್ರ ನಶೆ ಏರುತ್ತದೆ. ಸ್ವಲ್ಪ ಪ್ರಮಾಣದ ಸೇವನೆಯಿಂದಲೇ, ದೇಹ ಮತ್ತು ಮನಸ್ಸಿನ ಮೇಲೆ ಹತೋಟಿ ಕಳೆದುಕೊಳ್ಳುತ್ತಾರೆ. ಸಾಂಪ್ರದಾಯಿಕ ಭಾರತೀಯ ಸ್ತ್ರೀಯರು ಆಲ್ಕೋಹಾಲ್ ಸೇವನೆಯಿಂದ ದೂರ ಉಳಿದಿರುವುದು ಸ್ವಾಗತಾರ್ಹ, ಆದರೆ ಆಧುನಿಕ ಭಾರತೀಯ ಸ್ತ್ರೀ ಅದರಲ್ಲೂ ಹದಿವಯಸ್ಸಿನ ಹಾಗೂ ಪ್ರೌಢ ಸ್ತ್ರೀ, ಮೆಟ್ರೋ ನಗರಗಳಲ್ಲಿ ವಾಸ ಮಾಡುವ ವಿದ್ಯಾವಂತ ಸ್ತ್ರೀ ಆಲ್ಕೋಹಾಲ್ ಸೇವನೆಯಿಂದ ಪುರುಷನೊಂದಿಗೆ ಸ್ಪರ್ಧಿಸುತ್ತಿದ್ದಾಳೆ. ಬೆಂಗಳೂರಿನ ಪಬ್‌ಗಳಿಗೆ ಹೋಗುವವರಲ್ಲಿ ಶೇಕಡ 20 ರಿಂದ 25 ರಷ್ಟು ಮಂದಿ ಹುಡುಗಿಯರು. ಟೆನ್‌ಶನ್ ತಗ್ಗಿಸಲು, ರಿಲ್ಯಾಕ್ಸ್ ಮಾಡಲು, ಮನರಂಜನೆಗಾಗಿ ಬೀರ್, ಬ್ರಾಂದಿ, ವಿಸ್ಕಿ ಸೇವಿಸುವುದು ಸ್ತ್ರೀಯರಲ್ಲೂ ಫ್ಯಾಶನ್ ಆಗುತ್ತಿದೆ. ಇದು ಸ್ತ್ರೀ ಬಂಡಾಯ, ಪ್ರತಿಭಟನೆ ಹಾಗೂ ಸಾರ್ವಭೌಮತೆಯ ಸೂಚಕವೂ ಆಗುತ್ತಿರುವುದು ವಿಷಾದನೀಯ!

ಪುರುಷರಿಗೆ ಹೋಲಿಸಿದರೆ, ಸ್ತ್ರೀಯರಲ್ಲಿ ಆಲ್ಕೋಹಾಲ್ ಸೇವನೆಯ ದುಷ್ಪರಿಣಾಮಗಳು ಹೆಚ್ಚು.

- ರಕ್ತದಲ್ಲಿ ಆಲ್ಕೋಹಾಲ್ ಪ್ರಮಾಣ ಹೆಚ್ಚಿರುತ್ತದೆ. ಒಂದು ನಿರ್ದಿಷ್ಟ ಪ್ರಮಾಣದ ಆಲ್ಕೋಹಾಲ್. ಗಂಡಸಿರಿಗಿಂತ ಹೆಂಗಸರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೀರಲ್ಪಟ್ಟು ರಕ್ತದಲ್ಲಿ ಅಧಿಕ ಪ್ರಮಾಣವನ್ನು ಮುಟ್ಟುತ್ತದೆ.
- ಕಡಿಮೆ ಪ್ರಮಾಣದಲ್ಲಿ ಸೇವಿಸಿದರೂ, ವಿವಿಧ ಅಂಗಾಂಗಗಳು ಬೇಗ ರೋಗಗ್ರಸ್ತವಾಗುತ್ತದೆ.
- ಕಡಿವೆ ಅವಧಿಯಲ್ಲೇ ಲಿವರ್ ಹಾನಿಗೊಳಗಾಗುತ್ತದೆ.
- ಮದ್ಯಪಾನೀ ಸ್ತ್ರೀಯರಲ್ಲಿ ಇತರ ಸ್ತ್ರೀಯರಿಗಿಂತ ಸ್ತನಗಳ ಕ್ಯಾನ್ಸರ್ ಹೆಚ್ಚು
- ಗರ್ಭಧಾರಣೆಯ ಅವಧಿಯಲ್ಲಿ ಸ್ತ್ರೀ ಹೆಚ್ಚು ಆಲ್ಕೋಹಾಲ್ ಸೇವಿಸಿದರೆ, ಗರ್ಭಸ್ಥ ಶಿಶುವಿನ ಮೇಲೆ ಅನೇಕ ದುಷ್ಪರಿಣಾಮಗಳುಂಟಾಗುತ್ತವೆ.

ಆದ್ದರಿಂದ ಸ್ತ್ರೀಯರು ಆಲ್ಕೋಹಾಲ್ ಸೇವಿಸದಿರುವುದೇ ಕ್ಷೇಮ.

ಗರ್ಭಧಾರಣೆ ಮತ್ತು ಆಲ್ಕೋಹಾಲ್

ಗರ್ಭಿಣಿ ಸ್ತ್ರೀ ವಾರಕ್ಕೆ ಎರಡು ಮೂರು ಸಲ, ಎರಡು ಅಥವಾ ಹೆಚ್ಚಿನ ಅಳತೆಯ ಆಲ್ಕೋಹಾಲ್ ಸೇವಿಸಿದರೆ (ಒಂದು ಅಳತೆ – 360 ಮಿಲಿ ಬೀರ್ – 30 ಮಿಲಿ ವಿಸ್ಕಿ, ಬ್ರಾಂದಿ) ಗರ್ಭಪಾತವಾಗುವ ಸಾಧ್ಯತೆ ಹೆಚ್ಚುತ್ತದೆ. ಅಥವಾ ಮಗು ಹೊಟ್ಟೆಯಲ್ಲೇ ಸತ್ತು ಹುಟ್ಟಬಹುದು. ಮಗು ಜೀವಂತವಾಗಿ ಹುಟ್ಟಿದರೂ, ಅನೇಕ ನ್ಯೂನತೆಗಳಿರಬಹುದು. ಇದಕ್ಕೆ ಫೀಟಲ್ ಆಲ್ಕೋಹಾಲ್ ಸಿಂಡ್ರೋಮ್ ಎನ್ನುತ್ತಾರೆ. ಇಂಥಹ ಮಹಿಳೆಯರು ಜನ್ಮ ನೀಡುವ ಮಗುವಿನ ಲಕ್ಷಣಗಳಿವು.

- ದೇಹ ಕೈಕಾಲುಗಳ ಅಸಮತೋಲನ ಚಲನೆ
- ಸ್ನಾಯುಗಳ ಬಿಗಿ ಕಡಿಮೆ ಇರುತ್ತದೆ
- ಸಿಟ್ಟು–ಕೋಪ ಹೆಚ್ಚಿರುತ್ತದೆ
- ಅತಿ ಚಟುವಟಿಕೆ
- ಏಕಾಗ್ರತೆಯ ಕೊರತೆ
- ಬರುಡೆ ಮತ್ತು ಮುಖದ ನ್ಯೂನತೆಗಳು – ಮೇಲೆತ್ತಿದ್ದ ಮೊಟರು ಮೂಗು,
- ಮೇಲ್ತುಟಿ ತೆಳುವಾಗಿರುವುದು, ಸಣ್ಣಗದ್ದ ಇತ್ಯಾದಿ
- ಮಗುವಿನ ತೂಕ ಕಡಿಮೆ ಇರುವುದು
- ಕೆಲವು ಪ್ರಕರಣಗಳಲ್ಲಿ ಪ್ರಧಾನ ಅಂಗಾಂಗಳ ವೈಕಲ್ಯ
- ಬುದ್ಧಿ ಮಂದ

ಆದ್ದರಿಂದ ಗರ್ಭಿಣಿ ಸ್ತ್ರೀಯರಿಗೆ ಆಲ್ಕೋಹಾಲ್ ಸೇವನೆ ನಿಷಿದ್ಧ

ಆಲ್ಕೋಹಾಲ್ ಸಮಸ್ಯೆಗಳಿಗೆ ಸ್ತ್ರೀ ಬಳಿಪಶು

- ಕುಡುಕ ತಂದೆ / ಅಣ್ಣ / ಗಂಡನ ಬೈಗುಳ, ಹೊಡೆತಗಳಿಗೆ ಮೈ ಒಡ್ಡಬೇಕು
- ಕುಡುಕರ ಲೈಂಗಿಕ ದುರ್ವರ್ತನೆ, ಅತ್ಯಾಚಾರ, ಅನಾಚಾರಗಳಿಗೆ ಒಳಗಾಗಬೇಕು
- ಸ್ತ್ರೀ ತನ್ನ ಸಂಪಾದನೆ, ಒಡವೆ, ವಸ್ತ್ರ, ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳಬೇಕು
- ಸ್ತ್ರೀ ತಾನೇ ದುಡಿದು, ಕುಡುಕ ಗಂಡನಿಗೆ, ತಂದೆಗೆ ಮಕ್ಕಳಿಗೆ ಇತರ ಆಶ್ರಿತರಿಗೆ ಆಸರೆ ನೀಡಬೇಕು. ಸಂಸಾರದ ಸಾರಥ್ಯ ವಹಿಸಬೇಕು
- ಕುಡುಕ ಗಂಡ / ತಂದೆಯ ಅನಾರೋಗ್ಯ ಸಮಸ್ಯೆಗಳಿಗೆ ಆಸ್ಪತ್ರೆಗೆ ಅಲೆದಾಟ, ಔಷದೋಪಚಾರ ಮಾಡುವ ಹೊಣೆ ಹೊರಬೇಕು. ರೋಗಗಳಿಂದ ಬರುವ ನ್ಯೂನತೆ, ಕೊರತೆ ವೈಫಲ್ಯಗಳನ್ನು ಸಹಿಸಿಕೊಳ್ಳಬೇಕು
- ಅಡ್ಡದಾರಿ ಹಿಡಿಯುವ ಭಾವನಾತ್ಮಕ ನಡವಳಿಕೆ ಸಂಬಂಧಿಸಿದ, ದೋಷದ ವರ್ತನೆ ತೋರಿಸುವ, ಕಲಿಯುವುದರಲ್ಲಿ ಹಿಂದೆ ಬೀಳುವ ಮಕ್ಕಳನ್ನು ಸುಧಾರಿಸಬೇಕು. ಕುಡಿತದ ಚಟವಿರುವ ತಂದೆ–ತಾಯಿಗಳ ಮಕ್ಕಳು ಮಾನಸಿಕ – ಸಾಮಾಜಿಕ ಬೌದ್ಧಿಕ ಬೆಳವಣಿಗೆ ಕುಂಟಿತಗೊಳ್ಳುತ್ತದೆ. ಈ ಮಕ್ಕಳಲ್ಲಿ ಸುಳ್ಳು, ಕಳ್ಳತನ, ಹಿಂಸಾಚಾರ, ಲೈಂಗಿಕ ದುರ್ವರ್ತನೆ, ಮನೆ ಬಿಟ್ಟು ಓಡಿಹೋಗುವುದು, ಸಮಾಜ ವಿರೋಧಿ ಧೋರಣೆ ಮತ್ತು ನಡವಳಿಕೆಗಳು ಕಂಡುಬಂದು, ಅವುಗಳ ಹೊರೆ ಪೋಷಕರ ಮೇಲೆ ಬೀಳುತ್ತದೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)



ಬಿ.ಎಲ್. ಅನ್ನಪೂರ್ಣಮ್ಮ ನಂಜಪ್ಪ

"ಮೈಸೂರು ಚಲೋ" ಹೋರಾಟದಲ್ಲಿ ಪ್ರಮುಖವಾಗಿ ಭಾಗವಹಿಸಿದವರಲ್ಲಿ ಅನ್ನಪೂರ್ಣಮ್ಮ ನಂಜಪ್ಪ ಅವರು ಒಬ್ಬರಾಗಿದ್ದಾರೆ. ಅಂದಿನ ಅವರ ಭಾಷಣಗಳು, ಮನೆಯಲ್ಲಿರುವ ಮಹಿಳೆಯರನ್ನು ಹೋರಾಟಕ್ಕೆ ಸಜ್ಜುಗೊಳಿಸುವಂತೆ ಪ್ರೇರಣೆ ನೀಡುತ್ತಿದ್ದವು.

"ಭಾಂಧವರೇ, ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹದ ಘೋಷಣೆಯಾಗಿ 15 ದಿನಗಳು ಕಳೆದಿವೆ. ದೇಶಾದಾದ್ಯಂತ ಹೋರಾಟದ ಕಿಚ್ಚು ಭುಗಿಲೆದ್ದಿದೆ. ಯುವಜನರು, ವೃದ್ಧರು ಹೆಣ್ಣುಮಕ್ಕಳು ಸ್ವಾತಂತ್ರ್ಯ ಹೋರಾಟದಲ್ಲಿ ಲಾಟಿ ಏಟು, ದಬ್ಬಾಳಿಕೆಗೆ ಒಳಗಾಗಿ, ಪ್ರಾಣಾರ್ಪಣೆ ಮಾಡುತ್ತಿದ್ದಾರೆ. ವಿದೇಶಿ ಆಡಳಿತದಿಂದ ದೇಶವನ್ನು ವಿಮೋಚನೆ ಮಾಡಲು, ನಾವೆಲ್ಲಾ ಒಗ್ಗಟ್ಟಾಗಿ ಹೋರಾಡೋಣ ಬನ್ನಿ. ಚಲೋ ಮೈಸೂರು ಜಾಥದೊಂದಿಗೆ ಹೆಜ್ಜೆ ಹಾಕಿರಿ ಬನ್ನಿ." ಎಂದು ಕರೆ ನೀಡುತ್ತಿದ್ದ ಮೈಸೂರು ಚಲೋ ಹೋರಾಟದ ಏಕೈಕ ಮಹಿಳೆಯಾಗಿದ್ದಾರೆ. ಇವರು ಮೈಸೂರು ಕಾಂಗ್ರೆಸ್‌ನ ಬೆಂಗಳೂರು ವಿಭಾಗದ ಮಹಿಳಾ ಮುಖಂಡರಾಗಿದ್ದರು. ಜಾಥಕ್ಕೆ ಚಾಲನೆ ನೀಡುವಾಗ, ಧ್ವಜವನ್ನು ಸೆರಗಿನಲ್ಲಿ ಬಚ್ಚಿಟ್ಟುಕೊಂಡು ತೆರಳಿ, ಕಾಂಗ್ರೆಸ್ ಕಚೇರಿ ಮುಂದೆ ಧ್ವಜವನ್ನು ಹಾರಿಸಿ ಜಾಥಾವನ್ನು ಮುನ್ನೆಡೆಸಿದ್ದರು. ಜಾಥಾದ ನೇತೃತ್ವ ವಹಿಸಬೇಕಾದ ಕೆ.ಸಿ. ರೆಡ್ಡಿ ಅವರನ್ನು ಬಂಧಿಸಿದ ಕಾರಣ ಇಡೀ ಜಾಥಾದ ನೇತೃತ್ವ ಅನ್ನಪೂರ್ಣಮ್ಮನವರು ವಹಿಸಬೇಕಾಯಿತು. ಜಾಥಾದ ಹಾದಿಯುದ್ದಕ್ಕೂ ಮಹಿಳೆಯರು ಗ್ರಾಮಸ್ಥರನ್ನು ಒಗ್ಗೂಡಿಸಿಕೊಂಡು ಮುನ್ನೆಡೆಯುತ್ತಿದ್ದ ಸಂದರ್ಭದಲ್ಲಿ ಹಳ್ಳಿ ಮಹಿಳೆಯ ರೀತಿ ಮಾರುವೇಷ ತೊಡಗಬೇಕಾದ ಪರಿಸ್ಥಿತಿಯುಂಟಾಗಿತ್ತು. ಆದರೂ ಒಮ್ಮೆ ಇವರಿಗೆ ಬ್ರಿಟಿಷ್ ಸರ್ಕಾರ ಗಡಿಪಾರು ಶಿಕ್ಷೆಯನ್ನು ವಿಧಿಸಿತು. ಆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ತೌರುಮನೆ ಆಂಧ್ರ ಪ್ರದೇಶಕ್ಕೆ ತೆರಳಿ ತಲೆ ಮರೆಸಿಕೊಂಡರು. ಬೆಂಗಳೂರು ನಗರದಲ್ಲಿ ರಾಜಕೀಯ ಪಕ್ಷ ಸೇರಿದ ಮೊದಲ ಮಹಿಳೆ ಅನ್ನಪೂರ್ಣಮ್ಮ ಅವರಾಗಿದ್ದಾರೆ. ಇವರು ನೂಲುವವರ ಸಂಘ, ಪ್ರಜಾಪ್ರತಿನಿಧಿ ಸಭೆ ಮತ್ತು ಪೋಷಕ - ಬೋಧಕರ ಸಂಘ ಹಾಗೂ ಹಿಂದುಪುರದಲ್ಲಿ, ಸೇವಾಶ್ರಮದಲ್ಲಿ ಸದಾ ಕಾರ್ಯತತ್ಪರರಾಗಿರುತ್ತಿದ್ದರು.

ಸುಬ್ಬಮ್ಮ ಜೋಯಿಸ್

ಕರ್ನಾಟಕದ ಗಾಂಧಿ ಎಂದೇ ಸುಪ್ರಸಿದ್ಧರಾಗಿದ್ದ ತಗಡೂರಿನ ರಾಮಚಂದ್ರರಾಯರ ಪತ್ನಿ ಸುಬ್ಬಮ್ಮ ಅವರು. ಪತಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಅಜೀವ ಪರ್ಯಂತ ಶ್ರಮಿಸಿದರು. ಪ್ರತಿ ಭಾನುವಾರ ಸಾಮೂಹಿಕ ಧ್ವಜ ವಂದನೆ ಕಾರ್ಯಕ್ರಮ ಇವರ ಮನೆಯಲ್ಲಿಯೇ ನಡೆಯುತ್ತಿತ್ತು. ಇದರಿಂದಾಗಿ ಪತಿ ಸದಾ ಜೈಲುವಾಸಿ, ಅವರ ಅನುಪಸ್ಥಿತಿಯಲ್ಲಿ ಸುಬ್ಬಮ್ಮ ಅವರೇ ಧ್ವಜ ವಂದನಾ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇವರ ನಿರಂತರ ದಲಿತರ ಅಭಿವೃದ್ಧಿ ಕೆಲಸಗಳು ಮತ್ತು ಸಹಕಾರ ಸಂಘದ ಕೆಲಸಗಳನ್ನು ಕಂಡು ಗಾಂಧಿ ಮತ್ತು ನೆಹರು ಅವರು ಪ್ರಶಂಸಿಸಿದ್ದರು. ಶಿರಸಿ, ಸಿದ್ದಾಪುರ, ಅಂಕೋಲಗಳಲ್ಲಿ (ಕರ ನಿರಾಕರಣೆ ಚಳುವಳಿಯಲ್ಲಿ) ಭಾಗವಹಿಸಿದ ಕುಟುಂಬಗಳಲ್ಲಿ ತಲಾ ಒಬ್ಬೊಬ್ಬರನ್ನು ಸರ್ಕಾರ ಜೈಲಿಗೆ ಕಳುಹಿಸುತ್ತಿದ್ದ ಸಂದರ್ಭದಲ್ಲಿ, ಆ ಕುಟುಂಬಗಳ ನಿರ್ವಹಣೆಗೆ ಅನ್ನ ಹಂಚುವ ಕಾರ್ಯ ನಿರ್ವಹಿಸಿದರು. ಮತ್ತು ಬ್ರಿಟಿಷ್ ಸರ್ಕಾರ ಆ ಕುಟುಂಬಗಳ ಆಸ್ತಿ ಹರಾಜು ಹಾಕಿದಾಗ, ಹರಾಜಿನಲ್ಲಿ ಆಸ್ತಿ ಕೊಂಡವರ ಮನೆ ಮುಂದೆ ಸತ್ಯಾಗ್ರಹ ನಡೆಸಿ, ಸತ್ಯಾಗ್ರಹಿಗಳಿಗೆ ಮರಳಿ ಆಸ್ತಿ ಸಿಗುವಂತೆ ಮಾಡುವ ಕೈಂಕರ್ಯದಲ್ಲಿ ಇವರು ಯಶಸ್ವಿಯಾಗಿದ್ದರು. ಮೈಸೂರಿನ ತಿಗಣೆ ಗ್ರಾಮದ ಪಟೇಲ್ ಗದ್ದಿಗೆಪ್ಪ ಗೌಡ ಸರ್ಕಾರದ ಹರಾಜಿನಲ್ಲಿ ಸತ್ಯಾಗ್ರಹಿಗಳ ಮನೆಯ ಎಮ್ಮೆಯನ್ನು ಖರೀದಿಸಿದ ವಿರುದ್ಧ, ಅವರ ಮನೆಯ ಮುಂದೆ ಸತ್ಯಾಗ್ರಹ ನಡೆಸಿ, ಗೌಡನ ಹತ್ತಾರು ಕಿರುಕುಳಗಳಿಗೆ ತುತ್ತಾಗಿ ಚಾಕು ತಿವಿತದಿಂದ ಕೈಸೀಳಿದರೂ ಹಿಮ್ಮೆಟ್ಟದ ಸುಬ್ಬಮ್ಮನನ್ನು ಪೋಲೀಸರು ದಸ್ತಗಿರಿ

ಮಾಡಿದ್ದರು. ಶಿರಸಿ ಜೈಲಿಂದ ಇವರನ್ನು ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಇವರ ಕನ್ನಡಕ ಮತ್ತು ಮಾಂಗಲ್ಯವನ್ನು ಕಿತ್ತುಕೊಳ್ಳಲಾಯಿತು. ಅದೇ ಜೈಲಿನಲ್ಲಿದ್ದ ಕಮಲಾದೇವಿ ಅವರ ಪ್ರಯತ್ನದಿಂದಾಗಿ ಇವರ ಮಾಂಗಲ್ಯ ದೊರಕಿದರೂ, ಕನ್ನಡಕ ದೊರಕದೆ ತೀವ್ರ ಸಂಕಷ್ಟಕ್ಕೆ ಈಡಾದರು. ಜೈಲಿನಿಂದ ಬಿಡುಗಡೆಯಾದ ನಂತರ, ಮನೆಯ ಹಿರಿಯರಿಂದ ಬಹಿಷ್ಕೃತರಾದ ದಂಪತಿಗಳು ಆಶ್ರಮದಲ್ಲಿ ವಾಸಿಸ ತೊಡಗಿದರು. ತದನಂತರ ಶಿವಮೊಗ್ಗದಲ್ಲಿ ಗೌರಮ್ಮ ಅವರು ಸ್ಥಾಪಿಸಿದ ಬಾಲಿಕಾಶ್ರಮದಲ್ಲಿ ಒಂದೂವರೆ ವರ್ಷ ಮಕ್ಕಳ ಮಾತೆಯಾಗಿ ಸೇವೆ ಸಲ್ಲಿಸಿದರು.

ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಸುಬ್ಬಮ್ಮ ಅವರು, ಮೈಸೂರಿನ ಸುಬ್ರಾಯನ ಕೆರೆಯಲ್ಲಿ ಧ್ವಜಾರೋಹಣ ಮಾಡುವ ಸಂದರ್ಭದಲ್ಲಿ ಮತ್ತೆ ಬಂಧನಕ್ಕೊಳಗಾದರು. ಸಾಲಿಗ್ರಾಮ, ಗುಂಡ್ಲುಪೇಟೆ, ಕೆ.ಆರ್. ನಗರ, ನಂಜನಗೂಡು, ಮಂಡ್ಯ, ಮೈಸೂರುಗಳಲ್ಲಿ ಸಂಚರಿಸಿ, ಜನರನ್ನು ಶಿವಪುರದ ಮಹಾಧಿವೇಶನದಲ್ಲಿ ಭಾಗವಹಿಸಲು ಹುರಿದುಂಬಿಸಿದರು. ಮೈಸೂರಿನ ಟೌನ್‌ಹಾಲ್ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ 3ನೇ ಬಾರಿ ಸುಬ್ಬಮ್ಮ ಜೈಲು ಸೇರಬೇಕಾಯಿತು. ಅವರ ಮೊದಲ ಮಗು ಜೈಲಿನಲ್ಲಿಯೇ ಜನಿಸಿತು. ಮತ್ತು ಹಲವು ಬಾರಿ ಹಸುಗೂಸುಗಳನ್ನು ಕಟ್ಟಿಕೊಂಡೇ ಇವರು ಜೈಲುವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ನಂತರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ್ದ ಸುಬ್ಬಮ್ಮ ಅವರು 1981ರ ಫೆಬ್ರವರಿ 24ರಂದು ಚಿರಶಾಂತಿಯೆಡೆಗೆ ಪಯಣಿಸಿದರು.

ಎಂ. ಆರ್. ಲಕ್ಷ್ಮಮ್ಮ

ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಸರಳತೆ, ಸಂಘಟನೆ, ಸೇವಾ ಮನೋಭಾವನೆಯೊಂದಿಗೆ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲ್ಗೊಂಡರು. "ಬೆಳಕು" ಪತ್ರಿಕೆಯ ಸಂಪಾದಕಿಯಾಗುವ ಮೂಲಕ ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಲೇಖನಗಳಿಂದ ಜನರಿಗೆ ವಿಮೋಚನಾ ಹೋರಾಟದಲ್ಲಿ ಭಾಗಿಯಾಗಲು ಉತ್ತೇಜನ ನೀಡಿದರು. ನಂತರ 'ಸೋದರಿ' ವಾರ ಪತ್ರಿಕೆಯನ್ನು ಪ್ರಾರಂಭಿಸಿ ಅತ್ಯಂತ ತೀಕ್ಷ್ಣ ಬರಹಗಳಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ಬೆಂಬಲವಾಗಿ ನಿಂತರು. ಇದರಿಂದ ಬ್ರಿಟಿಷ್ ಸರ್ಕಾರ ಅವರನ್ನು ಮೂರು ತಿಂಗಳ ಸೆರೆಮನೆ ವಾಸ ವಿಧಿಸಿತು. ಹತ್ತು ತಿಂಗಳ ಮಗುವನ್ನು ಬಿಟ್ಟು ಸೆರೆವಾಸ ಅನುಭವಿಸಿದರು. ಜೈಲಿನಿಂದ ಹೊರಬಂದ ತಕ್ಷಣ ಮೈಸೂರು – ಬೆಂಗಳೂರಿನಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸಿ, ಮಹಿಳೆಯರು, ಸಾಮಾಜಿಕ ಕಾರ್ಯ, ನೈರ್ಮಲ್ಯ, ಶುಚಿತ್ವದೊಂದಿಗೆ ಸಂಘಟಿತರಾಗಲು ಕಾರ್ಯ ನಿರ್ವಹಿಸಿದರು. ಅದರೊಂದಿಗೆ ಮಂಡಳಿಯ ಸದಸ್ಯರು ರಾತ್ರಿ ಪಾಳಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಕರಪತ್ರ, ಕಾಗದಪತ್ರಗಳನ್ನು ರಹಸ್ಯವಾಗಿ ತಲುಪಿಸುವ ಕಾರ್ಯ ಮಾಡಿದರು. 1941ರಲ್ಲಿ ಮೈಸೂರು ವಿಧಾನ ಪರಿಷತ್‌ನ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ನಂತರ 1952, 1958, 1964ರಲ್ಲಿ ಆಯ್ಕೆಯಾದ ಇವರು ಶಾಸನ ಸಭೆಯ ಉಪಾಧ್ಯಕ್ಷೆಯಾಗಿ ಸೇವೆಸಲ್ಲಿಸಿದ್ದರು. ಇವರು 1984ರಲ್ಲಿ ನಮ್ಮನ್ನಗಲಿದ್ದಾರೆ.

ಪಿ.ಆರ್. ಜಯಲಕ್ಷ್ಮಮ್ಮ

ಗಾಂಧೀಜಿ ಅವರ ವಿಮೋಚನಾ ಹೋರಾಟ ಮತ್ತು ವಿಚಾರಧಾರೆಗಳಿಂದ ಆಕರ್ಷಿತರಾದ ಜಯಲಕ್ಷ್ಮಮ್ಮ ಮೈಸೂರಿಗೆ ಗಾಂಧಿ ಅವರು ಆಗಮಿಸಿದ ಸಂದರ್ಭದಲ್ಲಿ, ಅಲ್ಲಿಗೆ ತೆರಳಿ, ಅವರನ್ನು ಭೇಟಿಯಾದರು ಮತ್ತು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಗಾಂಧಿ ಅವರು ಮಹಿಳಾ ಸಮೂಹವನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ, ತಮ್ಮ ಆಭರಣಗಳನ್ನು ಗಾಂಧಿ ಅವರಿಗೆ ಅರ್ಪಿಸಿದರು. ಮನೆಯೇ ಸತ್ಯಾಗ್ರಹಿಗಳ ಆಶ್ರಯ ತಾಣವಾಯಿತು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ, ಪೋಲೀಸರ ಲಾಠಿಚಾರ್ಜ್ ಮತ್ತು ಗುಂಡಿನ ದಾಳಿಗೆ ತುತ್ತಾದ ಗಾಯಳುಗಳಿಗೆ ಚಿಕಿತ್ಸೆ ಹಾಗೂ ನೆರವು ನೀಡಿದರು. ಪತಿ ಪತ್ರಿಕೋದ್ಯಮಿ (ತಾಯಿ ನಾಡು) ಪಿ. ರಾಮಯ್ಯ ಅವರನ್ನು ಸರ್ಕಾರ ಬಂಧಿಸಿ ಜೈಲಿಗೆ ಕಳುಹಿಸಿದ ಸಂದರ್ಭದಲ್ಲಿ 15ದಿನದ ಬಾಣಂತಿ ಜಯಲಕ್ಷ್ಮಮ್ಮ ಮಗುವನ್ನು ಕಂಕುಳಲ್ಲಿ ಹೊತ್ತುಕೊಂಡು, ಮೆರವಣಿಗೆಯಲ್ಲಿ ಸಾಗುತ್ತಾ ಚಳುವಳಿಗಾರರಿಗೆ ಸ್ಫೂರ್ತಿಯಾಗಿದ್ದರು. ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಾ, ಸ್ವಾತಂತ್ರ್ಯ ದೊರಕುವವರೆಗೂ ಅವಿಶ್ರಾಂತವಾಗಿ ಶ್ರಮಿಸಿದರು. ಸ್ವಾತಂತ್ರ್ಯಾ ನಂತರ ಗೋಪಾಲಕೃಷ್ಣ ಶಿಕ್ಷಣ ಸಂಸ್ಥೆ, ಗೋಪಾಲ ನಿಕೇತನ ಅನಾಥಾಶ್ರಮ ಕಟ್ಟಿ, ವಿಕಲ ಚೇತನರಿಗೆ ಅನಾಥರಿಗೆ ಶಿಕ್ಷಣ, ಆಶ್ರಯ ನೀಡಿ ಬೆಳಸಿದರು. "ಗಾಯಿತ್ರಿ ವೆಲ್‌ಫೇರ್ ಸೊಸೈಟಿ" ಕಟ್ಟಿ, ಹೆಣ್ಣು ಮಕ್ಕಳಿಗೆ ಉದ್ಯೋಗ

ದೊರಕಿಸುವ ಕಾರ್ಯ ಮಾಡಿದರು. ಇದರೊಂದಿಗೆ ಮೈಸೂರು ಅರಸರು ಇವರ ಸಾಮಾಜಿಕ ಸೇವೆಗಾಗಿ ಬಂಗಾರದ ಪದಕವನ್ನು ಪ್ರಧಾನ ಮಾಡಿದ್ದರು.

ತಾಯಮ್ಮ ವೀರಣ್ಣಗೌಡ

ಚನ್ನಪಟ್ಟಣದ ವೀರಣ್ಣಗೌಡ ಅವರ ಪತ್ನಿಯಾದ ಶ್ರೀಮತಿ ತಾಯಮ್ಮ ಅವರು ಗಾಂಧಿ ಅವರ ಭಾಷಣಗಳು, ಸುದ್ದಿ ಸಮಾಚಾರಗಳಿಂದ ಪ್ರೇರಿತರಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದರು. ಬಾಲ್ಯ ವಿವಾಹ ಮತ್ತು ವೈದವ್ಯದ ಸಂಕಷ್ಟದಿಂದ ಪಾರಾಗಿ ಶಿಕ್ಷಣ ಪಡೆದು ಮರುಮದುವೆಯಾದ ಈಕೆ ಹಿರಿಯ ಮಹಿಳಾ ಹೋರಾಟಗಾರರೊಂದಿಗೆ, ಅಂದರೆ ಕಮಲಾದೇವಿ ಚಟ್ಟೋಪಾಧ್ಯಾಯ, ಜಯದೇವಿತಾಯಿ ಲಿಗಾಡೆ, ಲೀಲಾವತಿ ಮಾಗಡಿ, ಮುದ್ದಮ್ಮ, ಬಳ್ಳಾರಿ ಸಿದ್ದಮ್ಮ ಇವರೊಂದಿಗೆ ಸ್ವಾತಂತ್ರ್ಯ ಹೋರಾಟದೊಡನೆ ಸೇರಿಕೊಂಡರು. ಇವರ ಮನೆಯೇ ಸತ್ಯಾಗ್ರಹಿಗಳ ಅನ್ನ, ಆಶ್ರಯದ ತಾಣವಾಯಿತು. "ಶಿವಪುರ ಧ್ವಜ ಸತ್ಯಾಗ್ರಹ" ಅಂದಿನ ಕ್ರಾಂತಿಕಾರಿ ಹೋರಾಟದಲ್ಲಿ ತಾಯಮ್ಮ ಅವರು ಪಾಲ್ಗೊಂಡು ಮತ್ತು ಮಹಿಳೆಯರ ವಿಮೋಚನಾ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡುತ್ತಾ, ಮಂಡ್ಯ, ಚನ್ನಪಟ್ಟಣ, ರಾಮನಗರದಲ್ಲಿ ಮಹಿಳೆಯರು ನಿರ್ಭಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರೇರಣಾದಾಯಕರಾದರು.

ಶಕುಂತಲಾ ಕುರ್ತಕೋಟಿ

ಸ್ವಾತಂತ್ರ್ಯಹೋರಾಟಗಾರರಕುಟುಂಬದಲ್ಲಿಯೇ ಜನಿಸಿದ ಶಕುಂತಲಾ ಅವರು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಸತ್ಯಾಗ್ರಹ, ಧರಣಿ ಉಗ್ರ ಹೋರಾಟಗಳಲ್ಲಿ ಭಾಗಿಯಾದವರಾಗಿದ್ದಾರೆ. ಮನೆಗೆ ಬರುತ್ತಿದ್ದ ಗಾಂಧಿ ಅವರ ಹರಿಜನ ಪತ್ರಿಕೆ, ತಿಲಕರ ಕೇಸರಿ ಪತ್ರಿಕೆಗಳನ್ನು ಓದುತ್ತಾ, ಹಿರಿಯರ ಇಚ್ಛೆಯಂತೆ ಟಳಕವಾಡದ ಬಾಲಿಕಾ ಆದರ್ಶ ವಿದ್ಯಾಲಯದಲ್ಲಿ ಶಿಕ್ಷಣ ಪಡೆದರು. ಬೆಳಗಾವಿಯ 1941ರ ಹೋರಾಟದಲ್ಲಿ ಭಾಗಿಯಾಗುತ್ತ, ಬಾಲಕಿಯರ ಸೇವಾದಲ ಸಂಘಟನೆಯ ನಾಯಕಿಯಾದರು. ವಿದ್ಯಾರ್ಥಿಗಳ ಫಿಕೆಟಿಂಗ್, ಬಂದ್, ಮೆರವಣಿಗೆಯ ನಾಯಕತ್ವ ವಹಿಸಿದರು. ಗಾಂಧಿ, ನೆಹರು, ರಂಗನಾಥ ದಿವಾಕರ, ವಡವಿ, ಅಚ್ಯುತ ಪಟವರ್ಧನ್ ಮತ್ತು ಗಂಗಾಧರ ದೇಶಪಾಂಡೆ ಅವರ ಸಂಪರ್ಕ ಮತ್ತು ಮೆಚ್ಚುಗೆ ಗಳಿಸಿದರು. ಅತ್ಯುತ್ಸಾಹದ ಬೆಳಗಾವಿಯ ಬೃಹತ್ ಮೆರವಣಿಗೆಯ ಸಂದರ್ಭದಲ್ಲಿ ಸಶಸ್ತ್ರ ಪೋಲೀಸರು ಇವರನ್ನು ದಸ್ತಗಿರಿ ಮಾಡಿದರು. ಬಿಡುಗಡೆಯ ನಂತರ ಭೂಗತರಾಗಿದ್ದ ಇವರು ಪತ್ರಿಕೆ, ಕರಪತ್ರ, ಕಾಗದ ಪತ್ರಗಳನ್ನು ರವಾನೆಯ ಕೆಲಸ ನಿರ್ವಹಿಸಿದರು. ಭೂಗತರಾಗಿದ್ದು ಸಾಕಷ್ಟು ಕೆಲಸ ಸಾಧ್ಯವಿಲ್ಲವೆಂದು ಮನಗಂಡು ಹೊರಬಂದರು, ತದನಂತರದಲ್ಲಿ ಟಳಕವಾಡ, ಬೆಳಗಾವಿಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೆರವಣಿಗೆಯನ್ನು ಸಂಘಟಿಸಿ ಚರ್ಚಿಲ್‌ರ ಪ್ರತಿಮೆ ದಹನದಂತಹ ತೀವ್ರ ಕಾರ್ಯದಲ್ಲಿ ತೊಡಗಿದರು. ಸಾವಿರಾರು ಸಂಖ್ಯೆಯ ವಿದ್ಯಾರ್ಥಿ ವೃಂದವನ್ನು ಸೆರೆಮನೆಯಲ್ಲಿಡಲಾಯಿತು. ಶಕುಂತಲಾ ಅವರನ್ನೂ 'ಅಂಡರ್ ಟ್ರಯಲ್ ಖೈದಿ' ಎಂದು ಐದುವರೆ ತಿಂಗಳು ಸೆರೆಯಲ್ಲಿರಿಸಿದರು. ಕುರ್ತಕೋಟಿ ಅವರ ಉಗ್ರ ಹೋರಾಟದಿಂದ ಆಕರ್ಷಿತರಾಗಿ ಇಚ್ಛೆಪಟ್ಟು ಅವರನ್ನೇ ವಿವಾಹವಾದರು. 1944ರಲ್ಲಿ ಇವರ ವಿವಾಹ ಸುದ್ದಿ ತಿಳಿದು ಕುರ್ತಕೋಟಿ ಅವರನ್ನು ಹುಡುಕಿಕೊಟ್ಟವರಿಗೆ ಸರ್ಕಾರ ಸಾವಿರ ರೂಪಾಯಿ ಬಹುಮಾನ ಘೋಷಿಸಿತು. ಮತ್ತು ಅವರ ಹುಡುಕಾಟ ತೀವ್ರಗೊಂಡಿತ್ತು. ಬೆಳಗಾವಿಯಲ್ಲಿ ಅವರನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು.ಸ್ವಾತಂತ್ರ್ಯ ನಂತರ ಗಾಂಧೀಜಿ

The Essence of Democracy in criticism of Government

- K.M. Munshi

K.M. Munshi, Member Consitutent Assembly and founder Kulapathi of Bharathiya Vidya Bhavana, had played significant role in the drafting of India's Constitution. Munshiji felt 'Sedition' was extensively misused to Suppress Public expression during Pre-independence by imprisoning freedom fighters or anyone who dared to raise voice against British Government. On 1st December 1948 in a debate in the Constituent Assembly Shri. Munshiji Veciforus against incorporating the word 'Sedition' in independent India lets is be used to suppress those who raise voice against Government. In his openion in a democracy the Government should welcome criticism and suggestions from it's citizen.

H. Hanumanthappa
Ex. Rajya Sabha Member & Ex. Khadi Board, Chairman
Courtacy : Bhaan's Journal February 2020

ಅವರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಶಕುಂತಲಾ ಅವರು ಧಾರವಾಡ ಗಾಂಧಿ ಪ್ರತಿಷ್ಠಾನದಲ್ಲಿ ಸೇವೆ ಮತ್ತು ಗಾಂಧಿ ವಿಚಾರ ಪ್ರಚಾರದಲ್ಲಿ ತೊಡಗಿದರು. ಜಯಪ್ರಭಾ ಎಂಬ ಮಕ್ಕಳ ಕೂಟ ಕಟ್ಟಿ, ಮಕ್ಕಳ ಅಭಿವೃದ್ಧಿ ಕಾರ್ಯದಲ್ಲಿ ನಿರತರಾದರು.

ರಮಾಬಾಯಿ ಜೀವನರಾವ್ ಯಾಳಗಿ

"ಸ್ವಾತಂತ್ರ್ಯ ಹೋರಾಟದ ಕುಟುಂಬ"ವೆಂದೇ ಹೆಸರಾದ ಯಾಳಗಿ ಕುಟುಂಬದ ಸದಸ್ಯೆ ರಮಾಬಾಯಿಯವರಾಗಿದ್ದಾರೆ. ಗಾಂಧೀಜಿ ಅವರ ದಂಡಿ ಯಾತ್ರೆಯಿಂದ ಪ್ರೇರಣೆಗೊಂಡು, ಬೆಳಗಾವಿಯಲ್ಲಿ 1930ರ ಏಪ್ರಿಲ್ ಆರರಂದು ಅದೇ ಮಾದರಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ತಕ್ಷಣ ಜೀವನರಾವ್ ಅವರನ್ನು ಪೋಲೀಸರು ಬಂಧಿಸಿದರು. ಎದೆಗುಂದದ ರಮಾಬಾಯಿ ಸತ್ಯಾಗ್ರಹದ ನೇತೃತ್ವ ವಹಿಸಿದರು. ತದನಂತರದಲ್ಲಿ 1931ರಲ್ಲಿ ಯರವಾಡ ಜೈಲಿನಲ್ಲಿದ್ದ ಮಲ್ಲಪ್ಪ ಧನಶೆಟ್ಟಿ, ಕೃಷ್ಣ ಸಾರಡಾ, ಕುರ್ಬಾನ್ ಹುಸೇನ್ ಮತ್ತು ಜಗನ್ನಾಥ ಶಿಂಧೆಯನ್ನು ಗಲ್ಲಿಗೇರಿಸಿದಾಗ, ಬ್ರಿಟಿಷರ ವಿರುದ್ಧ ಹತ್ತು ಸಾವಿರ ಜನರ ಪ್ರತಿಭಟನಾ ಮೆರವಣಿಗೆಯನ್ನು ದಂಪತಿಗಳು ಆಯೋಜಿಸಿದ್ದರು. ಪೋಲೀಸರ ಲಾಠಿ ಪ್ರಹಾರದಿಂದ ತೀವ್ರ ಗಾಯಗಳಿಗೆ ತುತ್ತಾದರೂ ರಮಾಬಾಯಿ ಅವರು ಚಳುವಳಿಗಾರರಿಗೆ ಧೈರ್ಯ ತುಂಬಿ ಮುನ್ನಡೆಸಿದರು. ಮಹಾತ್ಮಾಜಿ ಅವರ 1932ರ ಬೆಳಗಾವಿ ಭೇಟಿಯ ಸಂದರ್ಭದಲ್ಲಿ ಯಾಳಗಿ ಅವರ ಮನೆಗೆ ಬಂದು ದಂಪತಿಗಳಿಗೆ ಹರಸಿ, ಚಳುವಳಿಗಳನ್ನು ಮುಂದುವರೆಸಲು ಕರೆ ನೀಡಿದರು. ಮಹಿಳಾ ಸಂಘಟನೆ, ಗ್ರಾಮೀಣ ಮಹಿಳೆಯರಿಗೆ ಪ್ರೋತ್ಸಾಹದೊಂದಿಗೆ, 1941ರಲ್ಲಿ ನಡೆಸಿದ ಸತ್ಯಾಗ್ರಹದಲ್ಲಿ ರಮಾಬಾಯಿ ಅವರಿಗೆ ಆರು ತಿಂಗಳ ಕಾಲ ಜೈಲುವಾಸವಾಯಿತು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದೊಡ್ಡ ಮಹಿಳಾ ಪಡೆಯೇ ಪಾಲ್ಗೊಳ್ಳುವಂತೆ ಶ್ರಮಿಸಿದ, ಬ್ರಿಟಿಷರ ವಿರುದ್ಧ ಭಾಷಣ ಮಾಡಿದ್ದಕ್ಕಾಗಿ ರಮಾಬಾಯಿ ಅವರಿಗೆ ಪುನಃ ಒಂದೂವರೆ ವರ್ಷ ಸೆರೆಮನೆ ವಾಸವಾಯಿತು.

ಆ ಲೋಕ ಈ ಲೋಕಗಳ ದ್ವಂದ್ವದಲ್ಲಿ...

ಸಮಸ್ಯೆ ಎಂದರೆ ಲೋಕ – ಜೀವನದಲ್ಲಿ ಬಾಳುತ್ತಿರುವಾಗ ಈ ಅನುಸಂಧಾನಗಳೆಲ್ಲ ಬರಿಯ ಗಾಳಿಗೋಪುರಗಳಾಗದೆ, ಬರಿಯ ಪಾಂಡಿತ್ಯ ಪ್ರದರ್ಶನವಾಗದೆ, ಮಾತುಗಾರಿಕೆಯಾಗದೆ ನಿಜವಾದ persuit ಆಗಿ ಉಳಿಯುವುದು ಹೇಗೆ ಎನ್ನುವುದು. ಗಾಂಧೀ ಒಂದು ದಿಕ್ಸೂಚಿ. ರಹಸ್ಯವಿದೆ ಎಂದಾಗ, ಗಾಂಧೀ ಆ ರಹಸ್ಯಾನುಭವಕ್ಕೆ ತನ್ನನ್ನು ಒಡ್ಡಿಕೊಳ್ಳುವ ಬಗೆ ಹೇಗೆಂದರೆ ತನ್ನ ವ್ಯಕ್ತಿತ್ವದ ಎಲ್ಲ ರಹಸ್ಯಗಳನ್ನೂ ಬಯಲಾಗಿಸುವ ಮೂಲಕ. ಅದು ಅದರ ಗುಟ್ಟುಗಳನ್ನು ನಮ್ಮಲ್ಲಿ ಉಸುರಬೇಕಾದರೆ, ನಮ್ಮಲ್ಲಿ ಯಾವುದೇ ಗುಟ್ಟುಗಳಿರಬಾರದು.

–ಲಕ್ಷ್ಮೀಶ ತೋಳ್ಪಾಡಿ

ಜಾರ್ಜ್ ಫರ್ನಾಂಡಿಸ್ ಚಿತಾಭಸ್ಮ ಸ್ಮಾರಕ ಉದ್ಘಾಟನೆ



ಮಂಗಳೂರು: ಅಗಲಿದ ಕೇಂದ್ರದ ಮಾಜಿ ರಕ್ಷಣಾ ಸಚಿವ, ಪದ್ಮವಿಭೂಷಣ ದಿ. ಜಾರ್ಜ್ ಫರ್ನಾಂಡಿಸ್ ಚಿತಾಭಸ್ಮವುಳ್ಳ ಸ್ಮಾರಕವನ್ನು ನಗರದ ಬಿಜೈ ಚರ್ಚ್ ಆವರಣದಲ್ಲಿ ಭಾನುವಾರ ಲೋಕಾರ್ಪಣೆ ಮಾಡಲಾಗಿದೆ.

ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಫಾ. ಡಾ. ಪೀಟರ್ ಪಾವ್ಲ್ ಸಲ್ದಾನ ಉದ್ಘಾಟನೆ ನೆರವೇರಿಸಿದರು. ಜಾರ್ಜ್ ದೀರ್ಘ ಕಾಲದ ಅನಾರೋಗ್ಯದಿಂದ 2019ರ ಜ.29ರಂದು ತನ್ನ 88ನೇ ವಯಸ್ಸಿನಲ್ಲಿ ನಿಧನರಾಗಿದ್ದರು. ದೆಹಲಿಯಲ್ಲಿ ಅಂತಿಮ ವಿಧಿ ವಿಧಾನಗಳು ನಡೆದಿದ್ದವು. ಜಾರ್ಜ್ ಅವರ ಹುಟ್ಟೂರಿನ ಮನೆ ಬಿಜೈ ಚರ್ಚ್ ವ್ಯಾಪ್ತಿಗೆ ಬರುವುದರಿಂದ ಕಳೆದ ವರ್ಷ ಜಾರ್ಜ್ ಚಿತಾಭಸ್ಮವನ್ನು ತಂದು ಬಿಜೈ ಚರ್ಚ್‌ನಲ್ಲಿ ಇರಿಸಲಾಗಿತ್ತು. ಇದೀಗ ಚರ್ಚ್ ವತಿಯಿಂದ ಚಿತಾಭಸ್ಮ ಇರಿಸಿದ ಜಾಗದಲ್ಲಿ ಸ್ಮಾರಕ ನಿರ್ಮಿಸಲಾಗಿದ್ದು, ದೇಶದ ಧೀಮಂತ ಕಾರ್ಮಿಕ ನಾಯಕನ ಹೆಸರನ್ನು ಚಿರಸ್ಥಾಯಿಗೊಳಿಸಲಾಗಿದೆ.

ಕನ್ನಡಪ್ರಭ Mon, 24 Februa
https://kpepap

ಆಯ್ಕೆಯ ಬಡತನ ಅಥವಾ ಸರಳ ಜೀವನ

– ಡಾ. ಎನ್. ಜಗದೀಶ್ ಕೊಪ್ಪ

"ಗಾಂಧೀಜಿ ಅವರ ಸ್ವಗತ" ಕೃತಿಯಿಂದ ಆಯ್ದುಕೊಂಡ ಮುಂದುವರಿದ ಭಾಗ ಹಿಂದಿನ ಸಂಚಿಕೆಯಿಂದ

1931ರಲ್ಲಿ ಲಂಡನ್ ನಗರದಲ್ಲಿ ನಡೆದ ದುಂಡು ಮೇಜಿನ ಸಭೆಗೆ ಹೋದಾಗ ಸ್ಥಳೀಯರೊಂದಿಗೆ ಗಾಂಧಿ ಅವರು ನಡೆಸಿದ ಸಂವಾದದ ಸಂಕ್ಷಿಪ್ತ ರೂಪ ಇದಾಗಿದೆ.

ನಿಮ್ಮ ಮಿತವಾದ ಹಾಗೂ ಸರಳವಾದ ಜೀವನದಿಂದ ದೇಹ, ಮನಸ್ಸು, ಮತ್ತು ಆತ್ಮಕ್ಕೆ ಶಾಂತಿ ಹಾಗೂ ನೆಮ್ಮದಿ ದೊರೆಯುತ್ತದೆ......

ವ್ಯಕ್ತಿ ಹೆಚ್ಚು ಹೆಚ್ಚು ಸಂಪಾದಿಸುತ್ತಾ, ಶೇಖರಿಸುತ್ತಾ ಹೋದಂತೆ, ಅವನು ಅಥವಾ ಆಕೆ ತನ್ನನ್ನು ಮಾತ್ರವಲ್ಲದೆ, ತನ್ನ ನೆರೆಹೊರೆಯವರನ್ನು ವಂಚಿಸುತ್ತಾ ಹೋಗುತ್ತಾನೆ/ಳೆ. ನನ್ನೊಳಗಿನ ಸ್ಫೂರ್ತಿಯ ಹಿನ್ನಲೆಯಿಂದ ಹೇಳುವುದಾದರೆ, ನಾನು ಈ ಜೀವನದಲ್ಲಿ ಎಲ್ಲವನ್ನೂ ತ್ಯಜಿಸಿದ್ದೇನೆ. ನೀವ ನನ್ನ ಪ್ರಾಮಾಣಿಕತೆಯನ್ನು ಪ್ರಶ್ನಿಸವಾರದು. ನನ್ನ ಉದ್ದೇಶವನ್ನು ಇಲ್ಲಿ ಗಮನಿಸಬೇಕು. ನನ್ನ ದೃಷ್ಟಿಯಲ್ಲಿ ಮನುಷ್ಯನ ಅತಿಯಾದ ಬೇಡಿಕೆ ಎಂದರೆ, ಅದು ಒಂದು ರೀತಿಯಲ್ಲಿ ಬಲೆ ಅಥವಾ ಕೊನೆಯಿರದ ಬೇಡಿಕೆಗಳ ಕುಣಿಕೆ ಎಂದು ನನ್ನ ಭಾವನೆ. ನೀವು ಧರಿಸುವ ವಸ್ತ್ರಗಳಲ್ಲಿ ಒಂದನ್ನು ಕಡಿಮೆ ಮಾಡಿದರೆ, ಅದು ತನ್ನ ದೇಹದ ಮೇಲೆ ವಸ್ತ್ರವೇ ಇಲ್ಲದಿರುವ ಇನ್ನೊಬ್ಬ ವ್ಯಕ್ತಿಯ ದೇಹವನ್ನು ಮುಚ್ಚಬಲ್ಲದು. ಇದನ್ನು ಹೇಗೆ ತೀರ್ಮಾನಿಸುವುದು? ನಾನು ಅನ್ನ, ವಸತಿ, ಮತ್ತು ಮೈ ಮೇಲೆ ವಸ್ತ್ರವಿಲ್ಲದ ಲಕ್ಷಾಂತರ ಅಮಾಯಕ ಜೀವಗಳಿಗೆ ಜೀವಂತ ಸಾಕ್ಷಿಯಾಗಿದ್ದಿನಿ. ಈಗಲೂ ಸಹ ಸಾಕ್ಷಿಯಾಗುತ್ತಿದ್ದೇನೆ. ಇಂತಹ ನರಳುವವರ ಜಗತ್ತಿನಲ್ಲಿ ಉಳ್ಳವರ ಜಗತ್ತನ್ನು ನೀವು ಹೇಗೆ ಸಮರ್ಥಿಸಿಕೊಳ್ಳಲು ಸಾಧ್ಯ?

ನಿಜ, ನಾನು ಹೇಳುವ ಆಯ್ಕೆಯ ಬಡತನವನ್ನು ಸ್ವೀಕರಿಸುವುದು ಮತ್ತು ಅನುಸರಿಸುವುದು ನಿಜಕ್ಕೂ ತ್ರಾಸದಾಯಕವಾದುದು. ಅದು ನಮ್ಮ ಜೀವನದಲ್ಲಿ ಅನೇಕ ವೈರುಧ್ಯಗಳನ್ನು ಒಳಗೊಂಡಿದೆ. ನೀವು ಆಸ್ತಿಯನ್ನು ಸಂಪಾದಿಸುವುದಾದರೆ ಅಥವಾ ಅದರ ಒಡೆತ ಬಯಸುವುದಾದರೆ, ಅದರ ಮೂಲ ಉದ್ದೇಶ ನಿಮ್ಮ ಯೋಗಕ್ಷೇಮಕ್ಕೆ ಮಾತ್ರ ಸೀಮಿತವಾಗಿರಬಾರದು. ಕಷ್ಟದಲ್ಲಿರುವ ಅಥವಾ ಅವಶ್ಯಕತೆ ಇರುವ ಇನ್ನೊಂದು ಜೀವಕ್ಕೂ ನೆರವಾಗುವಂತೆ ಇರಬೇಕು. ಒಬ್ಬ ವ್ಯಕ್ತಿ ನಿಮ್ಮ ಬಳಿ ಒಂದು ಜೊತೆ ವಸ್ತ್ರ ಬೇಡಿದರೆ ನೀವು ಕೊಡದೆ ಇರಲು ಸಾಧ್ಯವಿಲ್ಲ. ನೀವು ನಿಮ್ಮ ಮನೆಯ ಬಾಗಿಲುಗಳನ್ನು ಮುಚ್ಚಲು ಸಾಧ್ಯವಾಗುವುದಿಲ್ಲ ಅಥವಾ ಯಾರೋ ಇನ್ನೊಬ್ಬ ವ್ಯಕ್ತಿಗೆ ಆತನಿಗೆ ಸಹಾಯ ಮಾಡು ಎಂದು ಹೇಳಲು ಬರುವುದಿಲ್ಲ. ಇಟ್ಟುಕೊಳ್ಳುವ ತೃಪ್ತಿಗಿಂತ ಈ ಜಗತ್ತಿನಲ್ಲಿ ನೀಡುವ ನೆಮ್ಮದಿ ದೊಡ್ಡದು.

ಆಯ್ಕೆಯ ಬಡತನ ಕುರಿತು ನಿಜವಾದ ಅರ್ಥವನ್ನು ವಿವರಿಸುವುದಾದರೆ, ನಿಮಗೆ ಒಂದು ಮಾದರಿಯನ್ನು ಹೇಳುತ್ತೇನೆ. ಡಾ. ರಾಯ್‌ಡೆನ್ ಎಂಬುವರು ನಾನು ಜಗತ್ತಿನ ಆಯ್ಕೆಯ ಬಡತನದ ಪರಮ ಪ್ರತಿಪಾದಕ ಎಂದು ಹೇಳಿಕೊಂಡಿದ್ದಾರೆ. ಅತ್ಯಂತ ಮುಜುಗುರದಿಂದ ನಾನು ಇಂತಹ ಹೇಳಿಕೆಗಳನ್ನು ನಿರಾಕರಿಸುತ್ತೇನೆ. ಏಕೆಮದರೆ, ಇದು ಒಂದು ರೀತಿಯಲ್ಲಿ ನಕಲಿ ವಿನಮ್ರತೆ ಅಥವಾ ಹೇಳಿಕೆ ಎನ್ನಬಹುದು. ನಾನು ನಂಬಿರುವ ಸತ್ಯ ಮತ್ತು ನಾನು ಆಯ್ಕೆ ಮಾಡಿಕೊಂಡಿರುವ ಮತ್ತು ನನ್ನ ಆಲೋಚನೆಯ ಸರಳವಾದ ಜೀವನ ಅಥವಾ ಆಯ್ಕೆಯ ಬಡತನ ಕುರಿತಂತೆ ವಿವರಿಸುವುದಾದರೆ, ಈ ಕುರಿತು ನನಗೆ ಸಂಪೂರ್ಣ ತೃಪ್ತಿಯಿದೆ. ಯಾವುದೇ ವ್ಯಕ್ತಿಗೆ ಇಂತಹ ಜೀವನದಲ್ಲಿ ನಿಶ್ಚಿತವಾದ ಆಸಕ್ತಿ ಮತ್ತು ತೀರ್ಮಾನಗಳಿರಬೇಕು. "ನಾನು ಯಾವುದೇ ಕಾರಣಕ್ಕೆ ಈ ಭೂಮಿಯ ಮೇಲೆ ಅನಾವಶ್ಯಕವಾಗಿ ಯಾವುದೇ ವಸ್ತಿಗಳನ್ನು ಶೇಖರಿಸುವುದಿಲ್ಲ ಮತ್ತು ಅವುಗಳ ಮೇಲಿನ ಒಡೆತನ ಸಾಧಿಸುವುದಿಲ್ಲ" ಎಂಬ ದೃಢ ನಿರ್ಧಾರ ಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ ಈ ಶರೀರದ ಮೇಲೆ ಕೂಡ ನಾವು ಅಧಿಕಾರ ಹೊಂದಿರಬಾರದು.

ನೀವು ನನ್ನನ್ನು ನಂಬುವುದಾದರೆ, ಅಥವಾ ನೀವು ಪ್ರಾರ್ಥನಾ ಮಂದಿರಕ್ಕೆ (ಚರ್ಚ್)ಹೋಗಿ ದೇವರನ್ನು ಪ್ರಾರ್ಥಿಸುವ ವ್ಯಕ್ತಿಗಳಾಗಿದ್ದರೆ, ದೇವರನ್ನು ನಂಬುವವರಾಗಿದ್ದರೆ, ದೇಹ ಮತ್ತು ಆತ್ಮ ಎರಡೂ ಒಂದೇ ಅಲ್ಲ ಎಂಬುದನ್ನು ನಂಬುತ್ತೀರಿ. ಶರೀರವೆಂಬುದು ಆತ್ಮನಲ್ಲಿ ತಾತ್ಕಾಲಿಕವಾಗಿ ಮನೆ ಮಾಡಿಕೊಂಡಿರುವಂತಹದ್ದು. ಅದನ್ನು ತಾತ್ಕಾಲಿಕವಾಗಿ

ಆ ಸೃಷ್ಟಿಕರ್ತ ನಿಮಗೆ ನೀಡಿದ್ದಾನೆ. ಈ ನಂಬಿಕೆಯ ಪ್ರಕಾರ ದೇಹ ಅಥವಾ ಶರೀರ ನಮ್ಮದಲ್ಲ. ಆ ಸೃಷ್ಟಿಕರ್ತನು ಇದನ್ನು ಯಾವಾಗ ಬೇಕಾದರೂ ಹಿಂಪಡೆಯಬಲ್ಲ. ಆದ್ದರಿಂದ ಈ ಕುರಿತು ನನ್ನ ನಿಲುವು ಮತ್ತು ಆಸೆಗಳು ಏನೆಂದರೆ, ಈ ಶರೀರವನ್ನು ನಾವು ಅವನಿಗೆ ಒಪ್ಪಿಸಬೇಕು. ಈ ದೇಹವನ್ನು ವಿಲೇವಾರಿ ಮಾಡಬೇಕೇ ಹೊರತು, ಅದು ಛಿದ್ರಗೊಳ್ಳದಂತೆ ನೋಡಿಕೊಳ್ಳಬೇಕು. ಆದರೆ, ಈ ಪ್ರಕ್ರಿಯೆಯಲ್ಲಿ ಸ್ವ ಹಿತಾಸಕ್ತಿ ಅಥವಾ ಆತ್ಮ ತೃಪ್ತಿಯ ಭಾವ ಇರಕೂಡದು ಬದಲಾಗಿ ಸಂಪೂರ್ಣ ಸೇವಾ ಮನೋಭಾವ ಇರಬೇಕು. ಶರೀರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಒಂದು ದೇಹಕ್ಕೆ ಎಷ್ಟು ಪ್ರಮಾಣದಲ್ಲಿ ವಸ್ತ್ರ ಬೇಕು? ಜೊತೆಗೆ ಬೇರೆ ಯಾವ ವಸ್ತುಗಳು ಅವಶ್ಯಕತೆ ಇದೆ? ಈ ಕುರಿತು ನನ್ನೊಳಗೆ ಹಲವಾರು ವರ್ಷಗಳ ಕಾಲ ನಿರಂತರ ಜಿಜ್ಞಾಸೆ ಏರ್ಪಟ್ಟಿದೆ. ಇಲ್ಲಿ ನಾನು ನಿಮಗೆ ನನ್ನ ವಿರುದ್ಧವೇ ಸಾಕ್ಷಿ ನೀಡಬಯಸುತ್ತೇನೆ. ನಾನು ನಿಜವಾದ ಮತ್ತು ಪರಿಪೂರ್ಣವಾದ ಆಯ್ಕೆಯ ಬಡತನ ಅಥವಾ ಮಿತವಾದ ಸರಳವಾದ ಜೀವನದ ಹಂತವನ್ನು ತಲುಪಲು ಸಾಧ್ಯವಾಗಿಲ್ಲ. ಈ ವಿಷಯದಲ್ಲಿ ಅಂದರೆ, ಈ ನಿಟ್ಟಿನಲ್ಲಿ ಇನ್ನೂ ಹೋರಾಟ ನಡೆಸುತ್ತಿರುವ ಒಬ್ಬ ಸಾಮಾನ್ಯ ಮನುಷ್ಯನಾಗಿದ್ದೇನೆ. ಒಮ್ಮೆ ಈ ವಿಷಯದ ಕುರಿತಾಗಿ ಯಾರೋ ಒಬ್ಬ ವ್ಯಕ್ತಿಯಿಂದ ನನಗೆ ಸವಾಲು ಎದುರಾಗಿತ್ತು. ನಾನು ಎಲ್ಲರಿಗಿಂತ ಮತ್ತು ನನ್ನ ನೆರೆಹೊರೆಯವರಿಗಿಂತ ಹೆಚ್ಚು ಶ್ರೀಮಂತ ಎಂದು ಪ್ರತಿಪಾದಿಸಿಕೊಂಡಿದ್ದೆ. ನನ್ನ ಪ್ರಕಾರ ಶ್ರೀಮಂತ ಎಂದರೆ, ಏನೂ ಹೊಂದಿಲ್ಲದ ನಿರಾಳ ಮನೋಭಾವವನ್ನು ಹೊಂದಿರುವ ವ್ಯಕ್ತಿ ಎಂದರ್ಥ.

ಸರಳ ಹಾಗೂ ಮಿತವಾದ ಜೀವನದ ನಿಯಮಗಳನ್ನು ಪಾಲಿಸಿದವರಿಗೆ ಮಾತ್ರ ಈ ವಿಷಯದಲ್ಲಿ ಸಂಪೂರ್ಣವಾದ ತೃಪ್ತಿ ಸಿಗುವುದು ಸಾಧ್ಯ. ಆದರೆ, ಇದರಲ್ಲಿ ಪರಿಪೂರ್ಣತೆಯ ಸಾಧ್ಯತೆ ಕಷ್ಟ ಎಂಬುವುದೂ ಕೂಡ ಅಷ್ಟೇ ಸತ್ಯ. ಮನುಷ್ಯ ತನ್ನ ಸಹಜ ಭಾವನೆಗಳನ್ನು ಹತ್ತಿಕ್ಕಿದಾಗ ಮಾತ್ರ ಪೂರ್ಣತೆ ಸಾಧ್ಯವಾಗುವಂತಹದ್ದು. ಇಂತಹ ಆದರ್ಶ ಸ್ಥಿತಿಯನ್ನು ತಲುಪಬೇಕಾದರೆ, ನಿಮ್ಮಲ್ಲಿರುವ ಎಲ್ಲವನ್ನೂ ತ್ಯಾಗ ಮಾಡಬೇಕಾಗುತ್ತದೆ. ಏನನ್ನೂ ನಾವು ಹೊಂದಿರಬಾರದು. ನಮ್ಮ ಬಳಿ ಭೌತಿಕವಾಗಿ ಏನೂ ಇಲ್ಲದಿದ್ದರೂ ಈ ಜಗತ್ತಿನ ಎಲ್ಲ ಸೌಕರ್ಯಗಳನ್ನು ನಾವು ಹೊಂದಿರುತ್ತೇವೆ. ಆಹಾರ ನಮಗೆ ಅವಶ್ಯಕ. ಅದು ಸಹಜವಾಗಿ ನಮಗೆ ದೊರೆಯುತ್ತದೆ. ನಿಮ್ಮಲ್ಲಿ ಬಹುತೇಕ ಮಂದಿ ಪ್ರಾರ್ಥನೆ ಸಲ್ಲಿಸುವಾಗ ಒಳ್ಳೆಯ ಆಹಾರಕ್ಕಾಗಿ, ಒಳ್ಳೆಯ ಜೀವನಕ್ಕಾಗಿ ಪ್ರಾರ್ಥಿಸುವುದನ್ನು ನಾನು ಕೇಳಿದ್ದೇನೆ. ಅವರ ಪ್ರಾರ್ಥನೆಗೆ ಉತ್ತರವೆಂಬಂತೆ ಅವರಿಗೆ ಒಳ್ಳೆಯ ಆಹಾರ ದೊರಕುವುದುಂಟು. ನಾನು ಇದನ್ನು ನಂಬುತ್ತೇನೆ. ಆದರೆ, ನಿಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ನೀವು ಇದಕ್ಕಿಂತ ಮತ್ತೊಂದು ಹೆಜ್ಜೆ ಮುಂದೆ ಬರಬೇಕು. ನೀವು ನನ್ನ ರೀತಿಯಲ್ಲಿ ಸ್ವಯಂಪ್ರೇರಿತರಾಗಿ ಈ ಜಗತ್ತಿನಲ್ಲಿ ಎಲ್ಲವನ್ನು ತ್ಯಾಗ ಮಾಡಬೇಕು. ನೀವು ಮಾಡುದ ತ್ಯಾಗದಲ್ಲಿ ನಿಮ್ಮ ಶರೀರವೂ ಒಳಗೊಂಡಿರಬೇಕು. ಈ ಹಂತವನ್ನು ತ್ಯಾಗಕ್ಕೆ ಸಿದ್ಧವಾದ ಹಂತ ಎಂದು ನಾನು ಕರೆಯುತ್ತೇನೆ. ವಾಸ್ತವವಾಗಿ ಇದಕ್ಕೆ ನಿಮ್ಮನ್ನು ನೀವು ಕಠಿಣ ಪರೀಕ್ಷೆಗೆ ಒಡ್ಡಿಕೊಳ್ಳುವುದರ ಮೂಲಕ, ಎಲ್ಲಾ ಭಾವನೆಗಳನ್ನು ಮತ್ತು ಆಸೆಗಳನ್ನು ಹತ್ತಿಕ್ಕಬೇಕಾತ್ತದೆ. ಒಂದು ರೀತಿಯಲ್ಲಿ ಇದು ಕಠಿಣವಾದ ಪ್ರಯತ್ನ. ಇದರಲ್ಲಿ ಯಶಸ್ವಿಯಾದವರಿಗೆ ಯಾವುದೇ ಐಹಿಕವಾದ ಆಸೆ ಮತ್ತು ಬೇಡಿಕೆಗಳ ಅಗತ್ಯ ಇರುವುದಿಲ್ಲ.

ಇಂತಹ ಸೇವೆ ಅಥವಾ ಮಿತವಾದ ಸರಳ ಜೀವನದ ಪರಿಕಲ್ಪನೆಯು ನಾನು ದಕ್ಷಿಣ ಆಫ್ರಿಕಾದಲ್ಲಿ ವಕೀಲನಾಗಿ ಕಾರ್ಯ ನಿರ್ವಹಿಸುತ್ತಿರುವಾಗ ನನ್ನೊಳಗೆ ಮೊಳಕೆಯೊಡೆಯಿತು. ನಾನು ಸಂಪಾದಿಸುತ್ತಿದ್ದ ಹಣ ನನ್ನ ಹಲವು ಬೇಡಿಕೆಗಳನ್ನು ಪೂರೈಸುವುದರ ಜೊತೆಗೆ ಹಲವು ವಸ್ತುಗಳ ಮೇಲಿನ ಒಡೆತನವನ್ನು ಸಹ ನೀಡುತ್ತಿತ್ತು. .ಆದರೆ, ಆ ದಿನಗಳಲ್ಲಿ ಇಂತಹ ಸೇವೆ ಮಾಡುವ ಅವಕಾಶ ನನಗೆ ದೊರಕಿರಲಿಲ್ಲ. ಈಗ ಇದು ಒಳಿತು ಅಥವಾ ಕೆಟ್ಟದ್ದು ಎಂದು ನಾನು ಏನನ್ನೂ ಹೇಳಲಾರೆ, ಅದು ಆ ದೇವರಿಗೆ ಮಾತ್ರ ಗೊತ್ತಿದೆ. ನನಗೀಗ ಯಾವುದರ ಅಗತ್ಯವಿಲ್ಲ. ನಾನು ಎಲ್ಲವನ್ನೂ ತ್ಯಜಿಸದ ಮೇಲೆ ನನ್ನ ಬಳಿ ಇರುವುದನ್ನು ನನ್ನ ನೆರೆ ಹೊರೆಯವರ ಹಂಚಿಕೊಂಡು ಬದುಕುವುದನ್ನು ಆರಂಭಿಸಿದೆ. ನಾನು ನನ್ನ ಬಳಿ ಇರುವುದನ್ನು ಈ ಜಗತ್ತಿನ ಎಲ್ಲರೊಂದಿಗೆ ಹಂಚಿಕೊಳ್ಳಲಾರೆ, ಕೇವಲ ನನ್ನ ನೆರೆಹೊರೆಯವರಿಗೆ ಮಾತ್ರ ಹಂಚಿಕೊಳ್ಳಲು ನನಗೆ ಸಾಧ್ಯವಾಗಿದೆ. ಇದು ಸಹಜವಾಗಿ ಮನುಷ್ಯನೊಬ್ಬನ ಮಿತಿ ಕೂಡ ಹೌದು. ಈ ಆದರ್ಶದ ಹಂತವನ್ನು ತಲುಪಿದ ನಂತರ ನನಗೆ ಯಾವುದರ ಅಗತ್ಯ ಈಗ ಇಲ್ಲವಾಗಿದೆ. ಆದ್ದರಿಂದ ಇಲ್ಲಿ ನಾನು ಜಗತ್ತಿನ ಎಲ್ಲಾ ಸಂಪನ್ಮೂಲಗಳ ಕುರಿತಂತೆ ನೀವು ನಿರ್ಧಾರ ತೆಗೆದುಕೊಳ್ಳಬಹುದೆಂಬ ಆಶಯದಿಂದ ಮಹತ್ತರ ವಿಷಯಗಳೆಂಬಂತೆ ಇದನ್ನು ನಿಮ್ಮ ಮುಂದೆ ಇಟ್ಟಿದ್ದೇನೆ.

ಮುಂದುವರಿಯುವುದು...

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು

ಪರಿಸರ ಸಂರಕ್ಷಕಿಯರು



ಆನೆಮನೆ ಒಡತಿ

'ದುಬಾರೆ' ಎಲ್ಲರೂ ನೋಡಲೇ ಬೇಕಾದ ಸ್ಥಳ. ಕೊಡಗಿನ ರಮಣೀಯ ಅರಣ್ಯದ ಮಧ್ಯೆ, ಆನೆಮನೆ ಎಲ್ಲರನ್ನೂ ಆಕರ್ಷಿಸುತ್ತದೆ. ತುಂಬಿ ಹರಿವ ನದಿಯಲ್ಲಿ ಸ್ವಚ್ಛಂಧ ಪರಿಸರದಲ್ಲಿ, ನೆರಳು ಬೆಳಕಿನ ಕಿರಣಗಳ ನಡುವೆ ಸ್ವತಂತ್ರವಾಗಿ ವಿಹರಿಸುವ ಆನೆಗಳ ಹಿಂಡನ್ನು ನೋಡಲು ಇಲ್ಲಿ ಮಾತ್ರ ಸಾಧ್ಯ. ಅಲ್ಲಿ ಆನೆಗಳ ವೀಕ್ಷಣಾಲಯಗಳಿವೆ. ನದಿದಾಟಲು ದೋಣಿಗಳಿವೆ. ಬಲು ಹತ್ತಿರದಿಂದ ಆನೆಗಳನ್ನು ಮಾತನಾಡಿಸಬಹುದು. ತಿನ್ನಲೂ ಕೊಡಬಹುದು. ಇಂಥಹ "ಆನೆಮನೆ", 'ಪ್ರಜ್ಞಾ ಚೌಟ'. ಇವರ ಜೀವನ ಸಂಗಾತಿ, ಫಿಲಿಪ್ ಗೌಟಿಯಾರ್ (ಫ್ರೆಂಚ್ ಚಿತ್ರ ನಿರ್ಮಾಪಕರು) ಮತ್ತು ಮಗಳೊಂದಿಗೆ ಆನೆಗಳನ್ನು ಸಂರಕ್ಷಿಸುತ್ತಿರುವ ಪ್ರಜ್ಞಾ 2002ರಲ್ಲಿ 'ಆನೆಮನೆ ಫೌಂಡೇಶನ್' ಸ್ಥಾಪಿಸಿದರು. ಲಂಡನ್‌ನಲ್ಲಿ ಶಿಕ್ಷಣ ಮುಗಿಸಿ, ಹಿಂತಿರುಗಿದ ಇವರು ಕರ್ನಾಟಕ, ಕೇರಳ, ಬಿಹಾರ, ಅಸ್ಸಾಂಗಳಲ್ಲಿ, ಆದಿವಾಸಿಗಳ ಕುರಿತು ಅಧ್ಯಯನ ನಡೆಸಿದರು. ತದನಂತರ ದೇಶ ವಿದೇಶಗಳಿಗೆ ತೆರಳಿ, ಉನ್ನತ ಅಧ್ಯಯನ ಕೈಗೊಂಡರು. ಈ ಸಂದರ್ಭದಲ್ಲಿ, ಜನರು, ಆನೆಗಳನ್ನು ದುರಾಸೆಗಾಗಿ, ಲಾಭಕ್ಕಾಗಿ ದುರ್ಬಳಕೆ ಮಾಡುವುದನ್ನು ವೀಕ್ಷಿಸಿದರು. ಆಗಲೇ ಅವರು ಪಣತೊಟ್ಟು, ಭಾರತಕ್ಕೆ ಹಿಂತಿರುಗಿದ ನಂತರ, ಸರ್ಕಾರದ ಅನುಮತಿಯೊಂದಿಗೆ ದುಬಾರೆಯಲ್ಲಿ 'ಆನೆಮನೆ' ಸಜ್ಜುಗೊಳಿಸಿದರು. ಇಂದು ಅಲ್ಲಿ ಏಳಕ್ಕೂ ಮಿಕ್ಕ ಆನೆಗಳು, ಸರ್ವ ಸ್ವತಂತ್ರವಾಗಿ ನಿರ್ಭಯವಾಗಿ ನಡೆದಾಡುತ್ತಿವೆ. ಪ್ರವಾಸಿಗರಿಗೆ ಕಣ್ಮನ ತುಂಬುತ್ತಿವೆ.



ವನ್ಯಮೃಗ ರಕ್ಷಕಿ

ಚಾಮರಾಜ ನಗರದ ಗುಂಡ್ಲುಪೇಟೆಯಲ್ಲಿ ಮಂಗಲಾ ಗ್ರಾಮದಲ್ಲಿ 'ಮರಿಯಮ್ಮ ಚಾರಿಟೆಬಲ್ ಟ್ರಸ್ಟ್ ಮೂಲಕ ವನ್ಯ ಜೀವಿಗಳ ರಕ್ಷಣೆಯಲ್ಲಿ ತೊಡಗಿದ್ದಾರೆ. ಸುನೀತಾ ಧೈರ್ಯಂ ಬಂಡೀಪುರ ಅಭಯಾರಣ್ಯದಲ್ಲಿನ ವನ್ಯಮೃಗಗಳ ಸಂರಕ್ಷಣೆಯಲ್ಲಿ ಅನೇಕ ವರ್ಷಗಳಿಂದ ತೊಡಗಿದ್ದಾರೆ. ಇವರು ವನ್ಯಜೀವಿಗಳ ಪ್ರಾಣವನ್ನು ಕಾಪಾಡಲು ವಿಭಿನ್ನವಾಗಿ ಕಾರ್ಯರೂಪಕ್ಕಿಳಿದಿದ್ದಾರೆ. ಅದೇನೆಂದರೆ ವನ್ಯಮೃಗಗಳಿಂದ ದಾಳಿಗೊಳಗಾದವರಿಗೆ ಕೂಡಲೇ ಚಿಕಿತ್ಸೆ ನೀಡಿ ಗುಣಮುಖರನ್ನಾಗಿಸುವುದು ಹಾಗೂ ದಾಳಿಗೊಳಗಾದವರು ಮೃತರಾದರೆ ಅವರ ಕುಟುಂಬಕ್ಕೆ ಕೂಡಲೇ ಪರಿಹಾರ ಒದಗಿಸುವುದರಲ್ಲಿ ಇವರು ನಿರತರಾಗಿದ್ದಾರೆ. ಇದಕ್ಕೆ ಕಾರಣವೆಂದರೆ ಜನರು ದಾಳಿಗೊಳಗಾದ ಕೂಡಲೇ ಸಿಟ್ಟಿನಿಂದ ವನ್ಯಜೀವಿಗಳನ್ನು ಕೊಂದು ಹಾಕುವುದೇ ಹೆಚ್ಚು. ಆದ್ದರಿಂದ ಪರೋಕ್ಷವಾಗಿ ಇವರು ಈ ರೀತಿ ಪ್ರಾಣಿಗಳನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ನೆರವಾಗುತ್ತಿದ್ದಾರೆ. ಇದಕ್ಕಾಗಿ ವೈದ್ಯಕೀಯ ದತ್ತಿಗಳು ಇವರಿಗೆ ಕೈಜೋಡಿಸಿವೆ. ನಾಯಿಗಳಿಂದ ರೇಬೀಸ್ ರೋಗ ಹರಡದಂತೆ ರೋಗ ನಿರೋಧಕ ಲಸಿಕೆಯನ್ನು ಹಾಕಿಸುವ ಕ್ರಮಗಳನ್ನೂ ಮಾಡುತ್ತಿದ್ದಾರೆ.



ಮುಳ್ಳು ಮತ್ತು ಮೃಗ ಪಾಲಕಿ

ಪಶ್ಚಿಮ ಘಟ್ಟಗಳ ಕಾಡಿನಲ್ಲಿ ಬೆಳೆಯುತ್ತಿರುವ ಚದರಂಗಿ ಮುಳ್ಳು ಗಿಡಗಳಿಂದ ವನ್ಯಮೃಗಗಳಿಗೆ ಆಗುತ್ತಿರುವ ತೊಂದರೆಗಳ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಆಯೇಷಾ ಪ್ರಸಾದ್. ಅರಣ್ಯ ಪರಿಸರ ವಿಜ್ಞಾನಿಯಾಗಿರುವ ಆಯೇಷಾ ನೀಲಗಿರಿ ಅರಣ್ಯದಲ್ಲಿ ಅಧ್ಯಯನ ನಡೆಸುತ್ತಿದ್ದ ವೇಳೆ ವನ್ಯಜೀವಿಗಳ ರಕ್ಷಣೆಗೆ ಅಡ್ಡಿಯಾಗುತ್ತಿರುವ ಹಲವಾರು ಅಂಶಗಳ ಜೊತೆಗೆ ಲಂಟಾನಾದಿಂದ ಆಗುತ್ತಿರುವ ತೊಂದರೆಯು ಬೆಳಕಿಗೆ ಬಂದವು. ಈ ಸಮಸ್ಯೆಗೆ "ನಿರ್ವಹಣಾ ಪ್ರೋಟೋಕಾಲ್" ಎಂಬ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಅಲ್ಪಾವಧಿಯಲ್ಲಿ ವಿಮಲವಾಗಿ ಹರಡಿಕೊಳ್ಳುವ ಲಂಟಾನವನ್ನು ಸಂಪೂರ್ಣವಾಗಿ ನಾಶಪಡಿಸುವ ಬದಲು ಅದರಿಂದಲೇ ಇಂಧನವನ್ನು ತಯಾರಿಸುವ ಬಗ್ಗೆ ಇವರು ಕಾರ್ಯಶೀಲರಾದರು. ಇದರಿಂದಾಗಿ ವನ್ಯಮೃಗಗಳ ರಕ್ಷಣೆಯ ಜೊತೆಗೇ ಅರಣ್ಯ ವಾಸಿಗಳ ಜೀವನೋಪಾಯದ ಉದ್ಯೋಗವನ್ನೂ ದೊರಕಿಸಿಕೊಡುವುದೇ ಇವರ ಯೋಜನೆಯಾಗಿದೆ.



ಸಂಘರ್ಷ ಕೇಂದ್ರದ ಮೂಲಕ ಜೀವಿಗಳ ಸಂರಕ್ಷಣೆ

ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಪದವಿಗಳನ್ನು ಪಡೆದು ಬಂದ ಕೃತಿ ಕಾರಂತ್‌ಗೆ ಭಾರತದಲ್ಲಿನ ಬಹುದೊಡ್ಡ ಸಮಸ್ಯೆಯಾದ "ಅರಣ್ಯ ಪ್ರದೇಶಗಳ ಒತ್ತುವರಿಯನ್ನು ಹೇಗೆ ತಡೆಗಟ್ಟಬೇಕೆಂಬ" ಬಗ್ಗೆ ಚಿಂತೆ ಹತ್ತಿತ್ತು. ಕಡಲ ತೀರದ ಭಾರ್ಗವ ಶಿವರಾಮ ಕಾರಂತರ ಮೊಮ್ಮಗಳು, ಪರಿಸರ ತಜ್ಞ ಉಲ್ಲಾಸ್ ಕಾರಂತರ ಮಗಳಾದ ಕೃತಿಗೆ ಹುಟ್ಟಿನಿಂದಲೇ ಬಂದ ಪರಿಸರ ರಕ್ಷಣೆಯ ಆಸಕ್ತಿ, ಅವಳನ್ನು ಫ್ಲೋರಿಡಾ ವಿವಿಯಿಂದ ಪದವಿ, ಯೇಲ್ ವಿವಿಯಿಂದ ಸ್ನಾತಕೋತ್ತರ ಪದವಿ ಮತ್ತು ಡ್ಯೂಕ್ ವಿವಿಯ ಡಾಕ್ಟೋರೇಟ್ ಪದವಿಯನ್ನು ಪಡೆಯಲು ಪ್ರೇರೇಪಿಸಿತು. ಸ್ವತಃ ಸಜ್ಜುಗೊಂಡ ಈಕೆ, 2015ರಲ್ಲಿ 'ವೈಲ್ಡ್ ಸೇವ್'ಯನ್ನು ಆರಂಭಿಸಿದರು. ಇವರು ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯವನ್ನೇ ಕಾರ್ಯಕ್ಷೇತ್ರವಾಗಿಸಿಕೊಂಡಿದ್ದಾರೆ. ಇಲ್ಲಿನ ಮನುಷ್ಯರು ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷವನ್ನು ಶಮನ ಮಾಡುತ್ತ, ಸಂಘ ಜೀವನಕ್ಕೆ ಬುನಾದಿ ಹಾಕುವ ಮತ್ತು ಅರಣ್ಯಗಳನ್ನು ಪೋಷಿಸುವ ಯೋಜನೆ ಇದಾಗಿದೆ. ಈ ಕೇಂದ್ರವನ್ನು ಅಲ್ಲಿನ 600 ಗ್ರಾಮಗಳಿಗೆ ವಿಸ್ತರಿಸಿದ್ದು, 1000ಕ್ಕೂ ಮಿಕ್ಕ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಸಂಕಲ್ಪವಿಟ್ಟುಕೊಂಡಿದ್ದಾರೆ.




ಮಾನವ ಪ್ರಾಣಿ ಸಂಘರ್ಷದ ಪರ್ಯಾಯ ಶೋಧಕಿ

ಅರಣ್ಯದ ಬಳಿಯ ಗ್ರಾಮಗಳಲ್ಲಿ ವಾಸಿಸುವ ಗ್ರಾಮಸ್ಥರು, ಹಲವು ಕಾರಣಗಳಿಂದ, ನಿತ್ಯ ಕಾಡುಪ್ರಾಣಿಗಳನ್ನು ಎದುರಿಸುವ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಅದರಲ್ಲಿ ಬಹಳ ಪ್ರಮುಖವಾಗಿ, ಗ್ರಾಮಸ್ಥರು ಬೆಳೆದ ಬೆಳೆಗಳು ಕಾಡು ಪ್ರಾಣಿಗಳು ತಿನ್ನುವುದು ಒಂದು ಕಡೆಯಾದರೆ, ಇಡೀ ಜಮೀನು ನಾಶವಾಗುತ್ತಿರುವುದು ಇನ್ನೊಂದು ರೀತಿ ಬಾಧೆಯಾಗುತ್ತಿದೆ. ಜೊತೆಗೆ ಇಂಥಹ ಬೆಳೆಗಳಿಗೆ ಕೃಷಿಕರು ಕ್ರಿಮಿನಾಶಕ ಬಳಸುವುದರಿಂದ ಅದನ್ನು ತಿಂದ ಪ್ರಾಣಿಗಳೂ ಸಾಯುತ್ತಿವೆ. ಈ ಪರಿಸ್ಥಿತಿ ಎರಡಲಗಿನ ಕತ್ತಿಯಂತೆ ಇಬ್ಬರನ್ನೂ ಅಂದರೆ ರೈತರನ್ನೂ ಮತ್ತು ವನ ಪ್ರಾಣಿ ಪಕ್ಷಿ ಸಂಕುಲ ವಿನಾಶಕ್ಕೆ ಕಾರಣವಾಗುತ್ತಿರುವುದನ್ನು ಮನಗಂಡು, ಪರ್ಯಾಯ ಮಾರ್ಗಗಳನ್ನು ಕಂಡುಹಿಡಿದವರೇ 'ಮೈಸೂರಿನ ತನುಜಾ ಹಂಸ ಭಾವಿ' ಅವರಾಗಿದ್ದಾರೆ. ಮಹಾರಾಣಿ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವಾಗಲೇ, ಪ್ರಾಣಿಪಕ್ಷಿಗಳ ಕುರಿತಾಗಿ ಆಸಕ್ತಿಯನ್ನು ಹೆಚ್ಚಿಸಿಕೊಂಡ ತನುಜಾ ಅವರು ಅದರಲ್ಲಿ ಹೆಚ್ಚಿನ ಅಧ್ಯಯನ ಕೈಗೊಂಡರು. ಅಂದಿನಿಂದಲೂ ಕಾಡಂಚಿನ ಗ್ರಾಮಗಳಿಗೆ ತೆರಳಿ ಜನರಿಗೆ ಪ್ರಾಣಿ ಪಕ್ಷಿಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಾ ಬಂದರು. ಅವುಗಳನ್ನು ಅರಿತು ನಡೆದರೆ ಅವುಗಳಿಂದ ನಮಗೆ ಅಪಾಯವಿಲ್ಲವೆಂಬುದನ್ನು ತೋರಿಸಿಕೊಟ್ಟರು. ಬಂಡೀಪುರ ನಾಗರಹೊಳೆಯಂಥಹ ಅರಣ್ಯದಂಚನ್ನು ಕಾರ್ಯಕ್ಷೇತ್ರ ಮಾಡಿಕೊಂಡಿದ್ದಾರೆ. ಇದರೊಂದಿಗೆ ಕಾಡಂಚಿನ ರೈತರು ಪ್ರಾಣಿ ಪಕ್ಷಿಗಳು ತಿನ್ನುವ ಬೆಳೆಗಳನ್ನು ಬೆಳೆಯದೆ, ಪರ್ಯಾಯ ಬೆಳೆ ಬೆಳೆಯಲು ಸೂಚಿಸುತ್ತಿದ್ದಾರೆ. ಬಹಳ ಪ್ರಮುಖವಾಗಿ 'ರಾಜಮಾ ಚಾವಲ್' ಬೆಳೆಯಲು ರೈತರಿಗೆ ಪ್ರೋತ್ಸಾಹಿಸಿದ್ದಾರೆ. ಪ್ರಾಣಿಗಳು ಇದನ್ನು ತಿನ್ನುವುದೂ ಇಲ್ಲ ಮತ್ತು ಇದಕ್ಕೆ ಯಾವುದೇ ರಾಸಾಯನಿಕ ಬಳಕೆ ಇರುವುದಿಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಇದರಿಂದ ಪ್ರೇರಣೆಗೊಂಡ ರೈತರು, ಬೆಳೆದ ರಾಜಮಾ ಚಾವಲ್‌ನಲ್ಲಿ 50–60 ಕೆ.ಜಿಯನ್ನು ಖರೀದಿಸಿ ತಂದು ನಗರಗಳಲ್ಲಿ ಮಾರುತ್ತಾ, ಆ ಬೆಳೆಗೆ ಮಾರುಕಟ್ಟೆ ಒದಗಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇದಕ್ಕೆ ಜನರ ಸಹಕಾರ, ಬೆಂಬಲ ಬೇಕೆನ್ನುತ್ತಾರೆ ಡಿ.ಎಚ್. ತನುಜಾ ಅವರು.

– ಸಂಗ್ರಹ : ಡಿ. ನಳಿನಾ : ಪತ್ರಕರ್ತೆ ಮತ್ತು ಕವಯಿತ್ರಿ

CELEBRATING WOMEN'S DAY



A Sand sculpture created by sand artist Manas Sahoo, on the eve of International Women's Day in Puri
Courtacy : Deccan Herald - 08.03.2020

KASTURBA

- Usha Dhidhi

continued from the previous edition...

Narayan Desai, the son of Mahadevbhai (Gandhiji's personal secretary) was staying in the same ashram. 15 years old Narayan was learning Ramayana from Ramnarayan Chaudhari. Ba asked Narayan, "Why don't you teach me Ramayana? What you learn in the morning, please teach me in the evening?" Narayan Desai wrote, "70 years old Ba started learning Ramayana from 15 years old Narayan."

Ba and Bapu had spent sixty years together as married couple. Living with Gandhiji was like walking on a sword's edge. In Gandhiji's ever evolving life, new experiments were carried on and Ba would often adapt to it. Whenever she could not accept certain things due to her background or conventions, there would be some temporary bitterness between them. In South Africa, Gandhiji accommodated his office employees in his house. Among them there was a clerk who belonged to the low caste. All those who stayed were given a urine pot to use at night. In the morning those pots were cleaned. Ba, who belonged to the higher caste, found it extremely challenging to clean the urine pot of a person from the low caste. Knowing very well that, if she did not clean it, Bapu would do it, she reluctantly did the work. Bapu realised that she was not doing the task willingly and he angrily said, "I don't tolerate these things in my house." Ba, who could not bear such a bitter talk, said, "Then keep your house as you like, I am leaving the house." Hearing to it, Bapu held her hand and took her to the door. He opened the door to let her out. Then Ba said, "You have crossed all the limits. If someone sees us, it will be embarrassing to both of us." Those words touched Bapu's conscience and he silently closed the door.

When Gandhiji and his family were to leave South Africa and return to India. Many wealthy people gave him gifts made up of gold, silver and diamond. Gandhiji did not want to use it. He wanted to keep all those in a Trust. His dilemma was how to convince Kasturba about it. He had already used Kasturba's personal jewellery, when he went to England. Kasturba argued, "You never allowed me to wear my jewellery. That is ok. What about our future daughter-in-laws? We should have some provision for them." One of those gift items contained a diamond necklace gifted to Ba. Mentioning about it, Ba said, "You have no right on the necklace that has been gifted to me." Listening to this, Gandhiji said, "Did you receive that necklace for your service or that of mine?" Ba replied, "My service is the integral part of the service that you have rendered. Along with you day and night, I did labour, was that not a service? What about the care and attention that I gave to all the guests who came to our house or stayed in the house? Did you not make me serve them in spite of my difference?" later, Ba accepted Bapu's point of view, but definitely gave a piece thought to Bapu.



As per the Indian tradition, during the wedding, two stars known as Vasishtha and Arundhati are shown to the bride and the bridegroom. Arundhati means a wife who doesn't create obstacles in the path of her husband's progress. Wife is supposed to progress in conformity with that of her husband. Speaking about Kasturba, once Gandhiji said, "She never stopped me in my efforts to lead a pure life. And it was due to this, that in spite of having a substantial disparity in our intelligence and strength, our life together was happy, contented and ever evolving."

Once, few untouchables, whom Gandhiji dearly called as Harijans (meaning God's people) wanted to observe fasting in the ashram. While permitting them to do so, Bapu asked them to choose a suitable room in the ashram. They chose Ba's room. Bapu asked Ba's permission. With some agitation Ba said, "They are your sons, why don't you let them use your room?" Gandhiji said smilingly, "If they are my sons, it makes them your sons too." Listening to that Ba became speechless. Immediately, she vacated her room and gave it to those people. Those men were not very clean and orderly. Ba, who was so insistent on cleanliness, silently bore with it. Not only that, occasionally she inquired about their fasting and health.

to be continued ....

ಉಪ್ಪಿನ ಸತ್ಯಾಗ್ರಹದೊಳಗಿನ ಸತ್ಯಾಗ್ರಹ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)

("ಮಹಿಳೆಯರೂ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಬಹುದೆಂದು, ಈ ಕೂಡಲೇ ಗಾಂಧಿ ಅವರೂ ಮಹಿಳೆಯರಿಗೆ ಕರೆಕೊಡಬೇಕೆಂದೂ, ಕಮಲಾ ಅವರು ಸಂದೇಶಗಳನ್ನು ಹೊತ್ತು ಸಾಗಬೇಕೆಂದು" ನಿರ್ಣಯವಾಯಿತು.)

"ಎಲ್ಲರೂ ಸ್ವತಂತ್ರರು, ಯಾರ್ಯಾರು ಈ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಿದ್ಧರಿರುವರೋ, ಅವರೆಲ್ಲರೂ ಭಾಗಿಗಳಾಗಬಹುದು. ನನ್ನಿಂದ ಒಂದು ಕರೆಯನ್ನು ಅಪೇಕ್ಷಿಸಿದಂತೆ, ನಾನು ಮಾಡಿದ್ದೇನೆ" ಎಂದು ಗಾಂಧೀಜಿ ಅವರು ಬರೆದರು. ಅದನ್ನು ಕೊಂಡ್ಯೊಯ್ದ ಕಮಲಾದೇವಿ, ಕಾರ್ಯಕರ್ತೆಯರನ್ನು ಸತ್ಯಾಗ್ರಹಕ್ಕೆ ಸಜ್ಜುಗೊಳಿಸಿದರು. ಬಾಂಬೆಯಲ್ಲಿ ಈಕೆ ಆವಂತಿಕಾಬಾಯಿ ಗೋಖಲೆ ಅವರೊಂದಿಗೆ ಸೇರಿ, ಉಪ್ಪುಕರ ವಿರೋಧಿಸಿ, ಸತ್ಯಾಗ್ರಹ ನಡೆಸಿದರು. ಹೀಗೆ ಅವರು ಉಪ್ಪು ಕರ ವಿರೋಧಿಸಿದ ಮೊದಲ ಮಹಿಳೆಯರಾದರು.

ಬಾಂಬೆಯ ಚೌಪಾಟಿಯಲ್ಲಿ ಸತ್ಯಾಗ್ರಹ ಮುಂಜಾನೆಯಿಂದ 1500 ಸತ್ಯಾಗ್ರಹಿಗಳೊಂದಿಗೆ ನಾಲ್ಕು ಮುಖ್ಯ ವಿಭಾಗಗಳಿಂದ ಪಾದಯಾತ್ರೆಯೊಂದಿಗೆ ಆರಂಭವಾಯಿತು. ಬಂಗ್ಲೆ, ಮಹಡಿಗಳಿಂದ ಜನರು ಇವರಿಗೆ ಹೂಮಳೆಗೆರೆದರು. ಸುಗಂಧ, ಶ್ರೀಗಂಧಗಳನ್ನು ಚಿಮುಕಿಸಿದರು. ರಾಷ್ಟ್ರಧ್ವಜ ಹಾರಿಸುತ್ತಾ, ದೇಶಭಕ್ತಿ ಗೀತೆ ಹಾಡುತ್ತಾ, ಘೋಷಣೆಗಳನ್ನು ಮೊಳಗಿಸುತ್ತಾ, ಸಾಗಿದ ಮಹಿಳಾ ಸತ್ಯಾಗ್ರಹಿಗಳು, ಚೌಪಾಟಿಯಲ್ಲಿ ಸೇರಿಸುವಷ್ಟರಲ್ಲಿ 50000 ಜನರಾಗಿದ್ದರು. ಅಲ್ಲಿನ ಉಪ್ಪು ಮಿಶ್ರಿತ ಮಣ್ಣನ್ನು ಸಂತೋಷದಿಂದ ಎಲ್ಲೆಡೆ ತೂರಿದರು. ಉಪ್ಪು ನೀರನ್ನು ಎಲ್ಲೆಡೆ ಸಂತೋಷದಿಂದ ಚಿಮುಕಿಸಿದರು. ಉಪ್ಪು ಕಾಯ್ದೆಯನ್ನು ನಾವು ಭಂಗೊಳಸಿದ್ದೇವೆ. "ಇಂಕ್ವಿಲಾಬ್ ಜಿಂದಾಬಾದ್", 'ಮಹಾತ್ಮ ಗಾಂಧಿ ಕೀ ಜೈ" ಎಂಬ ಘೋಷಣೆಗಳು ಮೊಳಗಿದವು. ಹರ್ಷಚಿತ್ತದಿಂದ ಉಪ್ಪು ನೀರನ್ನು ಹಿತ್ತಾಳೆಯ ಪ್ಯಾನ್‌ಗಳಲ್ಲಿ ಕಾಯಿಸಿ, ಉಪ್ಪು ತಯಾರಿಸಿದರು ಇವರ ಸಂತೋಷ ಬಹಳ ಹೊತ್ತು ಇರಲಿಲ್ಲ. ಪೋಲೀಸರು ಲಾಠಿ ಬೀಸಿದರು. ಬೂಟುಕಾಲಿನಿಂದ ಒದ್ದರು, ದೂಕಿದ್ದರು.

ಕಮಲಾದೇವಿ ಮತ್ತವರ ತಂಡ ಬಾಂಬೆ ಹೈಕೋರ್ಟ್‌ಗೆ ತೆರಳಿ, ನಿಷೇಧಿತ ಉಪ್ಪಿನ



ಪ್ಯಾಕೆಟ್‌ಗಳನ್ನು ಬಾರ್ ಅಸೋಸಿಯೇಶನ್, ಗ್ರಂಥಾಲಯ, ಲಾಯರ್ ಕೊಠಡಿಗಳಲ್ಲಿ ಮಾರಾಟ ಮಾಡಿದರು. ನಂತರ ಜೂನ್ 1 ರಂದು ವಾಡ್ಲಾದ ಉಪ್ಪಿನ ಕ್ವಾರಿಗೆ ತೆರಳಿದ 11 ಜನರ ತಂಡ, ಸೆರಗಿನಲ್ಲಿ ಉಪ್ಪನ್ನು ತುಂಬಿಕೊಂಡು ಉಪ್ಪಿನ ತೆರಿಗೆ ಕಾನೂನು ಭಂಗ ಗೊಳಿಸಿದ್ದರು.

ಆಗಸ್ಟ್ ಒಂದರಂದು ತಿಲಕ್ ದಿನಾಚರಣೆಯಂದು, ಕಮಲಾದೇವಿ, ಮದನ ಮೋಹನ ಮಾಳವೀಯ, ಹಂಸ ಮೆಹತಾ, ಮಣಿಬೆನ್ ನಿರ್ಬಂಧಗಳನ್ನು ಉಲ್ಲಂಘಿಸಿ ಉಪ್ಪಿನ ಕ್ವಾರಿಗೆ ನುಗ್ಗಿದ್ದರು. ಇದು ಮರುದಿನ ಪತ್ರಿಕೆಯಲ್ಲಿ ವಿಶೇಷ ಸುದ್ದಿಯಾಗಿತ್ತು.

ಸಬರಮತಿ ಆಶ್ರಮದಲ್ಲಿ, ಸರಳಾದೇವಿ ಸಾರಾಬಾಯಿ ಮತ್ತು ಮೃದುಲಾ ಸಾರಾಬಾಯಿ ಅವರ ನೇತೃತ್ವದಲ್ಲಿ ಮಹಿಳೆಯರಿಗೆ ತರಬೇತಿ ನೀಡಲಾಯಿತು. ಶಿಬಿರಾರ್ಥಿಗಳಿಂದ ಪ್ರತಿಜ್ಞಾ ಸ್ವೀಕಾರ, ಖಾದಿ ಮತ್ತು ಕಸೂತಿ ತರಬೇತಿ ನೀಡಲಾಯಿತು. ಅಹಮದಾಬಾದ್‌ನಲ್ಲಿ ಕಸ್ತೂರಬಾ ಗಾಂಧಿ ಅವರು ಸರಳಾದೇವಿ, ಇಂದುಮತಿ ಸೇಠ್‌ರೊಂದಿಗೆ ಸೇರಿ, ತರಬೇತಿ ಮತ್ತು ಶಿಬಿರಾರ್ಥಿಗಳು ತಯಾರಿಸಿದ ವಸ್ತುಗಳ ಮಾರಾಟದ ಜವಾಬ್ದಾರಿ ನಿರ್ವಹಿಸಿದರು. ನಾರಿ ಸತ್ಯಾಗ್ರಹ ಸಮಿತಿ, ರಾಷ್ಟ್ರೀಯ ಮಹಿಳಾ ಸಂಘ, ನಿಖಿಲ್ ಜತಿಯಾ ನಾರಿ ಸಂಘದ ವತಿಯಿಂದ ಉಪ್ಪಿನ ಸತ್ಯಾಗ್ರಹವನ್ನು ಊರ್ಮಿಳಾದೇವಿ ನೇತೃತ್ವದಲ್ಲಿ 1930ರ ಏಪ್ರಿಲ್ 30ರಲ್ಲಿ ಮಾಡಲಾಯಿತು. ಕಮಲಾದೇವಿ ಅವರು "ಮಹಿಳೆಯರು ಶತಮಾನದ ಪರದಾವನ್ನು ಕಿತ್ತೊಗೆದು ಹೊರಬನ್ನಿ, ಸ್ವಾತಂತ್ರ್ಯ ಉಪ್ಪಿನ ಪ್ಯಾಕೇಟ್‌ಗಳನ್ನು

ಕೊಳ್ಳಿರಿ." ಎಂದು ಕರೆ ನೀಡಿದರು. ನಿಷೇಧಿತ ಉಪ್ಪಿನ ಮಾರಾಟ ಗುಜರಾತ್‌ದಾದ್ಯಂತ ಮಾಡಲಾಯಿತು. ಕಾರ್ಯಕರ್ತರು ಹಾಡುತ್ತಿದ್ದ ಹಾಡು-

ಗುಲಾಮಿನಿ ರಾತ್ರ
ಸ್ವತಂತ್ರಾನೆ ವಾಹನೇ
ಸಪ್ರತೆ ದಂಡೆ ಸಬ್‌ರಸ್ ಸಬ್‌ರಸ್
ದಂಕೋ, ವಾಗ್ಯೋ ಲಡ್‌ವಾಯೋ
ಶೂರ್ ಜಗಾಜೋರೆ

"ಹಿಂದ್ ಯುವ ಜನರು ಸೈನಿಕರಂತೆ ಮುಂದೆ ಬಂದರು. ಲಾಠಿ ಏಟು ದರಸಾನದಲ್ಲಿ, ಪೇಶಾವರದಲ್ಲಿ ಬುಲೆಟ್ಟುಗಳು, ಸೊಲ್ಲಾಪುರದಲ್ಲಿ ವೀರ್ ಗ್ರಾಮದಲ್ಲಿ ದೌರ್ಜನ್ಯ, ಹಗಲೊತ್ತಿನಲ್ಲಿ ಲೂಟಿ, ಮಹಿಳೆಯರ ಮೇಲೆ ಲಾಠಿ ಬೀಸುತ್ತಿದ್ದ ಬ್ರಿಟಿಷರು ನೆತ್ತರನ್ನು ಹೀರುತ್ತಿದ್ದಾರೆ ಯುವಕರೆ ನಿಮ್ಮ ಮನೆಯಲ್ಲಿ ಇದು ಆಗದಂತೆ ಮಾಡಲಾರಿರಾ, ನೀವು ಮನೆಯಲ್ಲಿರಲಾಗದು." ಇಂಥಹ ಹಾಡುಗಳು ಗುಜರಾತ್ ಬೀದಿ, ಹಳ್ಳಿ, ಪಟ್ಟಣಗಳಲ್ಲಿ ಧ್ವನಿಸಲಾರಂಭಿಸಿದರು.ಟಿ. ಪ್ರಕಾಶಂ ಅವರ ನೇತೃತ್ವದಲ್ಲಿ ಮದ್ರಾಸ್, ಬಂಗಾಲದ ಮಿಡ್ನಾಪುರ್, ಚಿತ್ತಗಾಂಗ್ 24 ಪರಗಣಗಳಲ್ಲಿ ಮಹಿಳೆಯರು ಉಪ್ಪು ಸತ್ಯಾಗ್ರಹದಲ್ಲಿ ಭಾಗಿಯಾದರು ಮತ್ತು ಬಂಧನಕ್ಕೊಳಗಾದರು. ಪಂಜಾಬ್, ಲಾಹೋರ್, ಸಿಮ್ಲಾ, ಅಂಬಾಲ, ಜಲಂಧರ್ ಮತ್ತು ಬಿಹಾರದಲ್ಲಿಯೂ ಸತ್ಯಾಗ್ರಹ ನಡೆಸಲಾಯಿತು. ಆಣೆಗೊಂದು ಪ್ಯಾಕೇಟ್‌ನಂತೆ ರಸ್ತೆಗಳಲ್ಲೇ ಉಪ್ಪು ತಯಾರಿಸಿ ಮಾರಾಟ ಮಾಡಿದರು.

ಕರ್ನಾಟಕದಲ್ಲಿ, ಕಮಲಾದೇವಿ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಂಜೇಕರ್, ಗೌರಮ್ಮ, ಬಳ್ಳಾರಿ ಸಿದ್ದಮ್ಮ, ಮುಂತಾದವರು ಈ ಚಳುವಳಿಯನ್ನು ನಡೆಸಿ, ಬಂಧನಕ್ಕೊಳಗಾಗಿದ್ದರು. ದುರ್ಗಾಬಾಯಿ ಅವರು ಒರಿಸ್ಸಾದಲ್ಲಿ ಸಮುದ್ರದ ದಂಡೆಗೆ ತೆರಳುವಾಗ ಬಂದಿಸಲ್ಪಟ್ಟು ವೆಲ್ಲೂರು ಜೈಲಿಗೆ ತಳ್ಳಲ್ಪಟ್ಟರು. ಒರಿಸ್ಸಾದ ಕಟಕ್, ಪುರಿಯಲ್ಲಿಯೂ ರಮಾದೇವಿ, ಮಾಲತಿ, ಅನ್ನಪೂರ್ಣ ಅವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಯಿತು. ಗಾಂಧೀಜಿ ಸಮುದ್ರ ತಟ ತಲುಪಿದಾಗ ಪತ್ರಕರ್ತರೊಡನೆ ಸಂವಾದ ನಡೆಸಿದರು

"ನನ್ನ ವಿಚಾರದಲ್ಲಿ ಇದು ಸ್ವಾತಂತ್ರ್ಯ ಹೋರಾಟದ ಕೊನೆಯ ಅಧ್ಯಾಯ. ದೇವರ ದಯೆಯಿಂದ ಈ ಅಧ್ಯಾಯದ ಮೊದಲ ಭಾಗ ಸುಸೂತ್ರವಾಗಿ ಕೊನೆಗೊಂಡಿದೆ. ಈ ಯಾತ್ರೆಯಲ್ಲಿ ಇಲ್ಲಿಯವರೆಗೆ ಹಸ್ತಕ್ಷೇಪ ಮಾಡದಿರುವ ಸರ್ಕಾರಕ್ಕೆ ಧನ್ಯವಾದಗಳು. ಈ ನಡುವಳಿಕೆ ಸರ್ಕಾರದ ಹೃದಯದ ಬದಲಾವಣೆಯಿಂದ ಎಂದು ನಾನು ನಂಬಲು ಬಯಸಿದೆ. ಆದರೆ ವಿಧಾನ ಸಭೆಯಲ್ಲಿನ ಸಾರ್ವಜನಿಕ ಅಭಿಪ್ರಾಯವನ್ನು ಅವರು ತಿರಸ್ಕರಿಸಿರುವ ರೀತಿಯನ್ನು ನೋಡಿದರೆ, ಈ ಸರ್ಕಾರದಲ್ಲಿ ಯಾವುದೇ ಬದಲಾವಣೆಯಿಲ್ಲವೆಂದು ಸ್ಪಷ್ಟವಾಗುತ್ತದೆ. ಕೇವಲ ಭಾರತದ ಹೃದಯಹೀನ ಶೋಷಣೆಯೇ ಗುರಿಯಾಗಿರುವ ಈ ಸರ್ಕಾರ, ಅಹಿಂಸಾಯುತ ಆಂದೋಲನವನ್ನು ಬಗ್ಗುಬಡೆದರೆ ಉಂಟಾಗುವ ಪ್ರಪಂಚದ ಅಭಿಪ್ರಾಯಕ್ಕೆ ಹೆದರಿ ಈ ಯಾತ್ರೆಯಲ್ಲಿ ಹಸ್ತಕ್ಷೇಪ ಮಾಡಿಲ್ಲವೆಂದೆನಿಸುತ್ತದೆ..... ಆದರೆ ನಾಳೆ ಸಾಮೂಹಿಕವಾಗಿ ಉಪ್ಪಿನ ಕಾನೂನು ಉಲ್ಲಂಘಿತವಾದರೆ ಈ ಸರ್ಕಾರ ಏನು ಮಾಡುತ್ತದೆಂದು ನೋಡೋಣ. ರಾಷ್ಟ್ರೀಯ ಕಾಂಗ್ರೆಸ್ಸಿನ ಗೊತ್ತುವಳಿಗೆ ಅಪಾರ ಜನಪ್ರಿಯ ಪ್ರತಿಕ್ರಿಯೆ ದೊರಕುತ್ತದೆಂದು ನನ್ನ ನಿರೀಕ್ಷೆ."

ಏಪ್ರಿಲ್ 6ರಂದು ಮುಂಜಾನೆಯ ಪ್ರಾರ್ಥನೆಯ ನಂತರ, ಅಲ್ಲಿ ಗಾಂಧೀಜಿಯವರು ಒಂದು ಹಿಡಿಯಷ್ಟು ಮಣ್ಣು ಮತ್ತು ಉಪ್ಪನ್ನು ತೆಗೆದುಕೊಂಡು (ಕೆಲವೆಡೆ ಇದನ್ನು "ಒಂದು ಚಿಟಿಕೆಯಷ್ಟು" ಎಂದು, ಇನ್ನು ಕೆಲವೆಡೆ "ಒಂದು ಕಾಳಿನಷ್ಟು" ಎನ್ನಲಾಗಿದೆ) "ಈ ಮೂಲಕ, ಬ್ರಿಟೀಷ್ ಸಾಮ್ರಾಜ್ಯದ ಅಡಿಪಾಯವನ್ನು ನಾನು ಅಲುಗಾಡಿಸುತ್ತಿದ್ದೇನೆ" ಇನ್ನು ಮುಂದೆ ಎಲ್ಲರೂ ಉಪ್ಪು ತಯಾರಿಸಬಹುದು ಎಂದು ಘೋಷಿಸಿದರು. ನಂತರ ಅವರು ಅದನ್ನು ಸಮುದ್ರದ ನೀರಿನಲ್ಲೆ ಕುದಿಸಿ, ಯಾವ ಭಾರತೀಯನೂ ಅಧಿಕೃತವಾಗಿ ತಯಾರಿಸಲಾಗದಂತಹ ಪದಾರ್ಥವನ್ನು ತಯಾರಿಸಿದರು, ಅದುವೇ - ಉಪ್ಪು. ನಂತರ ನೆರೆದಿದ್ದ ಸಹಸ್ರಾರು ಅನುಯಾಯಿಗಳಿಗೆ "ತಮಗೆ ಎಲ್ಲಿ ಸಾಧ್ಯವೊ ಹಾಗು ಎಲ್ಲಿ ಅನುಕೂಲವೊ," ಅಲ್ಲಿ ಉಪ್ಪನ್ನು ತಯಾರಿಸಲು ಉಪದೇಶಿಸಿದರು. ಜಯಘೋಷಗಳು ಮೊಳಗಿದವು.

ಚಳುವಳಿಯ ಪರಿಣಾಮಗಳು

ಚಳುವಳಿಯ ಪರಿಣಾಮ ದೇಶದಾದ್ಯಂತ ವ್ಯಾಪಿಸಿತು. ಗಾಂಧೀಜಿಯವರಿಂದ ಪ್ರೇರಿತರಾಗಿ ಸಾವಿರಾರು ಜನರು ಸ್ವತ: ಉಪ್ಪನ್ನು ತಯಾರಿಸಿದರು ಹಾಗು ಕಾನೂನು ಬಾಹಿರವಾಗಿ ಉಪ್ಪನ್ನು ಕೊಂಡರು. ಇದರೊಂದಿಗೆ ಇತರ ಬ್ರಿಟಿಷ್ ಸರಕುಗಳನ್ನೂ ಭಾರತೀಯರು ಕೊಳ್ಳುವುದನ್ನು ನಿಲ್ಲಿಸಿದರು. ಕಾನೂನು ಬಾಹಿರವಾಗಿ ಉಪ್ಪನ್ನು ಮಾರಿದ ಹಾಗು ಕೊಂಡ ಸಹಸ್ರಾರು ಜನರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿತು. ಭಾರತದ ಇತರೆಡೆಯೆಲ್ಲ ಈ ಸತ್ಯಾಗ್ರಹ ಹರಡಿತು. ಪೇಶಾವರದಲ್ಲಿ ಗಾಂಧೀಜಿಯವರ ಅನುಯಾಯಿಯಾದ ಗಫರ್ ಖಾನ್ ಅವರ ನೇತೃತ್ವದಲ್ಲಿ "ಕುದಾಯ್ ಕಿತ್ಮತ್ಗಾರ್" ಎಂಬ ಸತ್ಯಾಗ್ರಹಿಗಳ ಗುಂಪು ಈ

ಆಂದೋಲನವನ್ನು ನಡೆಸುತ್ತಿತ್ತು. ಏಪ್ರಿಲ್ 23ರಂದು ಗಫರ್ ಖಾನರ ಬಂಧನವಾದಾಗ ಇದನ್ನು ವಿರೋಧಿಸಿ ನಡೆಸಿದ ಅಹಿಂಸಾತ್ಮಕ ಪ್ರತಿಭಟನೆಯ ಮೇಲೆ ಬ್ರಿಟಿಷ್ ಸೇನೆ ಗುಂಡು ಹಾರಿಸಿತು. ಈ ಘಟನೆಯಲ್ಲಿ ಹಲವು ಸತ್ಯಾಗ್ರಹಿಗಳು ಮೃತರಾದರು. ಕಡೆಗೆ ಮಹಾತ್ಮ ಗಾಂಧಿ ಅವರನ್ನೂ ಬಂಧಿಸುವಂತೆ ಅಂದಿನ ಭಾರತದ ವೈಸರಾಯ್‌ರು ಆದೇಶಿಸಿದರು. ಮೇ 4ರಂದು ದಾಂಡಿಯ ಬಳಿಯ ಒಂದು ಊರಿನಲ್ಲಿ ಮಧ್ಯರಾತ್ರಿಯಲ್ಲಿ 30 ಪೇದೆಗಳ ಪ್ರಬಲ ಪಡೆಯೊಂದಿಗೆ ಬಂದ ಜಿಲ್ಲಾ ನ್ಯಾಯಾಧೀಶರು ನಿದ್ರಾಮಗ್ನರಾಗಿದ್ದ ಗಾಂಧೀಜಿಯವರನ್ನು ಬಂಧಿಸಿದರು. ಭಾರತದಾದ್ಯಂತ ಉಪ್ಪಿನ ಸತ್ಯಾಗ್ರಹವು ಸಹಸ್ರಾರು ಜನರನ್ನು ತನ್ನೆಡೆಗೆ ಸೆಳೆಯಿತು ಹಾಗು ತನ್ಮೂಲಕ ವಿಶ್ವದ ಗಮನವನ್ನು ಭಾರತದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ ಚಳುವಳಿಯತ್ತ ಸೆಳೆಯುವುದರಲ್ಲಿ ಯಶಸ್ವಿಯಾಯಿತು. ಇದಾದ ನಂತರ ಮಹಾತ್ಮಾ ಗಾಂಧಿಯವರನ್ನು ಬಿಡುಗಡೆ ಮಾಡಲಾಯಿತು ಹಾಗು ಅವರು ಭಾರತದ ಸ್ವಾತ್ರಂತ್ಯ ಸಂಗ್ರಾಮದ ಮುಂದಾಳತ್ವವನ್ನು ಮುಂದುವರೆಸಿದರು. ಭಾರತದ ಸ್ವಾತಂತ್ಯ ಸಂಗ್ರಾಮದಲ್ಲಿ ದಾಂಡಿ ಸತ್ಯಾಗ್ರಹವು ಒಂದು ಮಹತ್ವಪೂರ್ಣ ಘಟನೆಯಾಗಿತ್ತು.

ಈ ಸತ್ಯಾಗ್ರಹದಲ್ಲಿ ಮಹಿಳೆ ಪುರುಷರೆಂಬ ಭೇದವಿಲ್ಲದೆ, ವರ್ಗ/ವರ್ಣ/ಜಾತಿ ಮತಭೇದವಿಲ್ಲದೆ ಎಲ್ಲಾ ಜನರು ಭಾಗಿಯಾಗಿದ್ದರು. ಸತ್ಯಾಗ್ರಹದ ನಂತರದ ಪುರ್ನವಿಮರ್ಶಾ ಸಭೆಯಲ್ಲಿ ಕಸ್ತೂರ್‌ಬಾ ಅವರು ಮಾತನಾಡುತ್ತಾ, ಪೋಲೀಸರ ದೌರ್ಜನ್ಯ, ಹಿಂಸೆ, ದಂಡ ವಿಧಿಸಿರುವುದನ್ನು ವಿವರಿಸಿದರು. ಈ ಸತ್ಯಾಗ್ರಹಕ್ಕೆ ನವಜೀವನ, ಹರಿಜನ, ಯಂಗ್ ಇಂಡಿಯಾ ಸ್ತ್ರೀ ಸಂಪದ ಕೇಸರಿ ಪತ್ರಿಕೆಗಳು, ಅನಿಬೆಸೆಂಟ್ ಅವರ ಆತ್ಮಕಥೆ, ಪ್ರೇಮ್‌ಚಂದ್, ಶರಶ್ಚಂದ್ರ ಚಟರ್ಜಿ, ಸರಸ್ವತಿ ಚಂದ್ರ, ಬಂಕಿಮಚಂದ್ರ ಚಟರ್ಜಿ ಅವರ ಕತೆ ಕಾದಂಬರಿಗಳು, ಅಸ್ಸಾಂ ಸಾಹಿತ್ಯ, ಜನರಿಗೆ, ಮಾಹಿತಿ, ಚಳುವಳಿಯ ಆಸಕ್ತಿ, ದೇಶಪ್ರೇಮ ಧೈರ್ಯಸ್ಥೈರ್ಯಗಳನ್ನು ಒಡಮೂಡಿಸಿದವು.

ಹೀಗೆ ದೇಶದಾದ್ಯಂತ ನಡೆದ ಚಳುವಳಿಯಿಂದಾಗಿ ಬ್ರಿಟಿಷ್ ಸರ್ಕಾರ, ಗಾಂಧೀಜಿ ಅವರನ್ನು ಮೇ ತಿಂಗಳಲ್ಲಿ ಬಂಧಿಸಿತು. ಮತ್ತು ಬ್ರಿಟಿಷ್ ಸರ್ಕಾರ ಭಾರತಕ್ಕೆ ಸ್ವರಾಜ್ಯ ಕೊಡುವ ಕಡೆ, ತೀವ್ರವಾಗಿ ಆಲೋಚಿಸಲಾರಂಭಿಸಿದರು.



ಅರವಿಂದರ ಶಿಸ್ತು, ಗಾಂಧಿ ಭೇಟಿಗೆ ಕುತ್ತು


ಮಹರ್ಷಿ ಅರವಿಂದರು ಸ್ವಾತಂತ್ರ್ಯ ಹೋರಾಟಗಾರರಾಗಿ, ತತ್ವಜ್ಞಾನಿಯಾಗಿ ಕವಿಯಾಗಿ, ಗುರುವಾಗಿ, ಮಹಾನ್ ಯೋಗಿಯಾಗಿ ಪ್ರಸಿದ್ಧಲಾಗಿದ್ದರು. ಕೇವಲ ಮಾನವನಾಗಿದ್ದರೆ ಸಾಲದು, ಅತಿಮಾನವರಾಗಲು ಪ್ರಯತ್ನಿಸಬೇಕು ಎಂದು ಹೇಳುತ್ತಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಸೆರೆಮನೆ ವಾಸವನ್ನೂ ಅನುಭವಿಸಿದರು. ಕರ್ಮಯೋಗಿ ಮತ್ತು ಧರ್ಮ ಎಂಬ ಪತ್ರಿಕೆಗಳನ್ನು ಪ್ರಕಟಿಸಿದರು. ಅಪ್ರತಿಮ ಬರಹಗಾರರೂ ಮತ್ತು ಚಿಂತಕರೂ ಆದ ಅರವಿಂದರು ಸಾವಿತ್ರಿ, ಲೈಫ್ ಡಿವೈನ್, ಗೀತೆಯ ಮೇಲಿನ ಪ್ರಬಂಧಗಳು, ವೇದ ರಹಸ್ಯ ಮುಂತಾದ ಶ್ರೇಷ್ಟ ಕೃತಿಗಳನ್ನು ನೀಡಿದ್ದಾರೆ. ಕೊನೆವರೆಗೂ ಪಾಂಡಿಚೇರಿಯಲ್ಲಿ ನೆಲಸಿ ಆಧ್ಯಾತ್ಮಿಕ ಜೀವನ ಸಾಗಿಸಿ ಜಗತ್ ಪ್ರಸಿದ್ಧರಾಗಿದ್ದಾರೆ. ಪಾಶ್ಚಾತ್ಯ ವಿದ್ಯಾಭ್ಯಾಸ ಮಾಡಿದ್ದರೂ ಅವರ ಮನದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಅಪಾರ ಗೌರವವಿತ್ತು. ಭಾರತ ಸರ್ಕಾರದಲ್ಲಿ ಸೇವೆ ಸಲ್ಲಿಸಲು ಉನ್ನತ ಹುದ್ದೆ ದೊರೆಯಿತಾದರೂ ಅವರ ಮನಸ್ಸು ಬ್ರಿಟಿಷ್ ಸರ್ಕಾರದಲ್ಲಿ ಸೇವೆ ಸಲ್ಲಿಸಲು ಇಷ್ಟ ಪಡಲಿಲ್ಲ. ಹೀಗಾಗಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ನಿರ್ಧಾರ ಮಾಡಿದರು. ಕೊನೆಗೆ ಐಹಿಕ ಸುಖ ಸಂತೋಷಗಳನ್ನು ಬದಿಗಿಟ್ಟು ಮಹರ್ಷಿಗಳಂತೆ ಕೊನೆಯವರೆಗೆ ಜೀವಿಸಿದ್ದರು. ಗಾಂಧೀ ಅವರಿಗೆ ಅರವಿಂದರ ಬಗ್ಗೆ ತುಂಬಾ ಗೌರವಾದರಗಳಿದ್ದವು ಅವರ ಸಾಧನೆಗಳ ಬಗ್ಗೆ ಮೆಚ್ಚುಗೆ ಸಹ ಇತ್ತು. ಹೀಗಾಗಿ ಅವರೊಮ್ಮೆ 1931ರಲ್ಲಿ ಪಾಂಡಿಚೇರಿಗೆ ಬಂದು ಅರವಿಂದರನ್ನು ಭೇಟಿಯಾಗಲು ಬಯಸಿದರು. ಗುಜರಾತಿನಿಂದ ಬಂದು ಆಶ್ರಮದಲ್ಲಿ ನೆಲೆಸಿದ್ದ ಜನರ ಬಗ್ಗೆ ಚರ್ಚಿಸಬೇಕೆಂಬ ಆಶಯ ಗಾಂಧೀಜಿ ಅವರದು. ಆಗಿನ ಕಾಲದಲ್ಲಿ ಗಾಂಧೀಜಿ ಅವರನ್ನು ಕಾಣಲು, ಮಾತನಾಡಲು ದೇಶವಿದೇಶಗಳ ಜನ ಹಾತೊರೆಯುತ್ತಿದ್ದರೆ, ಅರವಿಂದರು ಮಾತ್ರ ಗಾಂಧೀಜಿ ಅವರನ್ನು ಭೇಟಿ ಮಾಡಲು ನಿರಾಕರಿಸಿದರು. ಏಕೆಂದರೆ ಅವರು ಮೂರು ವರ್ಷಕ್ಕೆ ಒಮ್ಮೆ ಮಾತ್ರ ಸಾರ್ವಜನಿಕರಿಗೆ ದರ್ಶನ ನೀಡುತ್ತಿದ್ದರು.

ಹೀಗಾಗಿ ಗಾಂಧೀಜಿ ಅವರನ್ನು ಭೇಟಿಯಾಗಲು ಸಾಧ್ಯವಿಲ್ಲವೆಂದು ಪತ್ರ ಸಹ ಬರೆದರು. ಆದರೂ ಗಾಂಧೀಜಿ ಅವರು ಬೇಸರಿಸದೆ, ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಅವರ ಭೇಟಿಯಾಗಿ ಅವಕಾಶ ನೀಡಬೇಕೆಂದು ಪತ್ರ ಬರೆದರು. ಅಲ್ಲದೆ ಪಾಂಡಿಚೇರಿಯವರೆಗೂ ಬಂದು ಭೇಟಿಗಾಗಿ ಕಾದರು. ಆದರೆ ಅರವಿಂದರು ಗಾಂಧೀಜಿ ಅವರನ್ನು ಭೇಟಿ ಮಾಡಲೇ ಇಲ್ಲ. ಇದು ಅರವಿಂದರ ಶಿಸ್ತಿಗೆ ಒಂದು ನಿದರ್ಶನವಾಗಿದೆ.

ಪ್ರೊ. ಎಂ.ಎನ್. ಸುಂದರ ರಾಜ್, ಶಿವಮೊಗ್ಗ,
ಸೌಜನ್ಯ : ಕನ್ನಡಪ್ರಭ ದಿ.12.01.2013

ಕನ್ನಡ ಪ್ರೇಮಿ, ಸಾಹಿತಿ ಮತ್ತು ದಿಟ್ಟ ಪತ್ರಕರ್ತ
ನಾಡೋಜ ಪಾಟೀಲ ಪುಟ್ಟಪ್ಪ ಅವರ ಸ್ಮರಣಾರ್ಥ

(ಅವರ ಕನ್ನಡ ಭಾಷಾಭಿವೃದ್ಧಿ ಬಗ್ಗೆ ಬರೆದ ಪತ್ರವನ್ನು ನಿಮಗಾಗಿ ಪ್ರಕಟಿಸಿದೆ)



ಭಾಷೆ ಬೆಳೆಯಲು ಎಲ್ಲರಿಗೂ ಕನ್ನಡ ಕಡ್ಡಾಯವಾಗಲಿ

– ಡಾ. ಪಾಟೀಲ ಪುಟ್ಟಪ್ಪ

ಕನ್ನಡ ನನ್ನ ತಾಯಿ, ನಮ್ಮ ತಾಯಿಯನ್ನು ನಾವು ಪ್ರೀತಿಸಬೇಕಲ್ಲವೆ. ಬೇರೆಯವರು ಪ್ರೀತಿಸಬೇಕೆನ್ನುವುದು ತಪ್ಪು. ನಮ್ಮ ಬದುಕೇ ಅವರಿಗೆ ಉಪದೇಶವಾಗಬೇಕು ಅದುವೇ ನಿಜವಾದ ಕನ್ನಡತನ ಎನ್ನುವುದು ಅವರ ಪ್ರಸಿದ್ಧ ಹೇಳಿಕೆ. ಅದರಂತೆ ಅವರು ಬದುಕಿದ್ದಾರೆ.

1956ರಲ್ಲಿ ಭಾಷಾನ್ವಯ ರಾಜ್ಯಗಳು ನಿರ್ಮಾಣಗೊಂಡವು. ರಾಜ್ಯಗಳ ನಿರ್ಮಾಣದ ಉದ್ದೇಶವು, ಆ ರಾಜ್ಯಗಳ ಭಾಷೆಗಳು ಬೆಳೆಯಬೇಕು. ಅಲ್ಲಿಯ ಜನರು ಸಂಪದಭಿವೃದ್ಧಿ ಸಾಧಿಸಿ, ಸುಖ ಜೀವನ ಪಡೆಯಬೇಕು ಎನ್ನುವುದೇ ಆಗಿದ್ದಿತು. ಭಾಷೆ ಬೆಳೆಯಬೇಕು ಎನ್ನುವ ಉದ್ದೇಶ ನೆರವೇರಿಲ್ಲ. ಈ ಭಾಷಾ ರಾಜ್ಯಗಳಲ್ಲಿರುವ ಬೇರೆ ಭಾಷೆಗಳ ಜನರು ಸ್ವಲ್ಪ ಸಮಯದ ನಂತರ ಅಲ್ಲಿಯ ಜನರ ಭಾಷೆಯೊಂದಿಗೆ ಅವು ಕೂಡಿ ಹೋಗಬೇಕೆನ್ನುವ ಇಚ್ಛೆಯನ್ನು ರಾಜ್ಯ ಪುನರ್ಘಟನಾ ಆಯೋಗದವರು ಹೊಂದಿದ್ದರು. ಆ ಆಸೆ, ಮಹಾರಾಷ್ಟ್ರದಲ್ಲಿ, ತಮಿಳುನಾಡಿನಲ್ಲಿ ಅದು ಆಸೆಯಾಗಿ ಉಳಿದಿಲ್ಲ. ಮಹಾರಾಷ್ಟ್ರ ಹಾಗೂ ತಮಿಳುನಾಡುಗಳಲ್ಲಿ ಯಾರೇ ಇದ್ದರೂ ಅವರಿಗೆ ರಾಜ್ಯದ ಭಾಷೆ ಬರಲೇಬೇಕು. ಕರ್ನಾಟಕದಲ್ಲಿರುವ ಬೇರೆ ಜನರಿಗೆ ರಾಜ್ಯದ ಭಾಷೆಯಾದ ಕನ್ನಡ ಬೇಕಾಗಿಲ್ಲ. ಕನ್ನಡಿಗರಲ್ಲಿ ಅದರಲ್ಲಿಯೂ ವಿಶೇಷ ಓದಿದ ಜನರಲ್ಲಿ ಕನ್ನಡ ಭಾಷೆಯ ಬಗೆಗಿನ ಪ್ರೀತಿ ಲೋಪವಾಗತೊಡಗಿದೆ. ಅವರನ್ನೆಲ್ಲ ಇಂಗ್ಲಿಷ್ ಮೋಹ ಆವರಿಸಿಕೊಂಡಿದೆ. ಸರ್ಕಾರವು ಕನ್ನಡದ ಬಗೆಗೆ ಒತ್ತು ಕೊಡುವುದಕ್ಕೆ ಬದಲಾಗಿ, ತಾನೇ ಇಂಗ್ಲಿಷ್ ಶಾಲೆಗಳನ್ನು ತೆರೆಯಲು ಮುಂದಾಗಿದೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಪ್ರಾಥಮಿಕ ವರ್ಗಗಳಲ್ಲಿ ಕನ್ನಡವನ್ನು ತರುವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಿಲ್ಲ. ರಾಜ್ಯ ಸರ್ಕಾರದ ಭಾಷಾ ನೀತಿಯನ್ನು ಬೇರೆಯವರು ಅದರಲ್ಲಿಯೂ ವಿಶೇಷವಾಗಿ ಆಂಗ್ಲ ಮಾಧ್ಯಮದವರು ನಿರ್ದೇಶಿಸುವಂತಿರುತ್ತದೆ.

ವರ್ಷ ವರ್ಷಕ್ಕೆ ಕನ್ನಡವು ಬಲಶಾಲಿಯಾಗದೇ ದುರ್ಬಲವಾಗುತ್ತ ನಡೆದಿದೆ. ಕನ್ನಡ ಶಾಲೆಗಳು ರಾಜ್ಯದಲ್ಲಿ ಅಲ್ಲಲ್ಲಿ ಮುಚ್ಚುತ್ತಿರುವುದು ಸರ್ಕಾರಕ್ಕೆ ಕನ್ನಡದ ಬಗೆಗಿರುವ ನಿಷ್ಠೆಯನ್ನು ತೋರಿಸುತ್ತದೆ. ಮಹಾರಾಷ್ಟ್ರ, ತಮಿಳುನಾಡುಗಳೂ ಕರ್ನಾಟಕದಂತೆ ಭಾಷಾನ್ವಯ ರಾಜ್ಯಗಳು. ಅಲ್ಲಿ ಎಲ್ಲ ಭಾಷೆಯವರಿಗೂ ಅಲ್ಲಿಯ ಭಾಷೆ ಕಡ್ಡಾಯವಾಗಿದೆ. ಇಲ್ಲಿ ಕನ್ನಡದ ಬಗೆಗೆ ಆ ರೀತಿಯ ಒತ್ತಾಯವಿಲ್ಲ. ಕನ್ನಡವನ್ನು ಓದಿದರೆ ಓದಬಹುದು. ಬಿಟ್ಟರೆ ಬಿಡಬಹುದು. ಕನ್ನಡದ ಬಗೆಗೆ ಅಂಥ ಒತ್ತಾಯವೇನೂ ಇಲ್ಲ. ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿರುವವರಿಗೆಲ್ಲ ಮರಾಠಿ ಬೋಧೆ ಕಡ್ಡಾಯವಾಗಿದೆ. 2005ರಲ್ಲಿ ಆ ರಾಜ್ಯದಲ್ಲಿರುವ ಎಲ್ಲರಿಗೂ 10ನೇ ವರ್ಗದವರೆಗೆ ತಮಿಳನ್ನು ಕಡ್ಡಾಯಗೊಳಿಸಲಾಗಿದೆ. ಕೇಂದ್ರೀಯ ವಿದ್ಯಾಲಯಗಳಲ್ಲಿ ಕೂಡ ತಮಿಳು ಕಡ್ಡಾಯವಾಗಿದೆ. ತಮಿಳುನಾಡು ಸರ್ಕಾರದ ಭಾಷಾ ಧೋರಣೆಯನ್ನು ವಿರೋಧಿಸಿ ಅಲ್ಲಿಯ ಕೆಲವರು ಸುಪ್ರಿಂ ಕೋರ್ಟ್‌ಗೆ ಹೋದರು. ಈ ವಿಷಯವು ನ್ಯಾಯಮೂರ್ತಿ ಅರಿಜಿತ ಪಸಾಯತ ಮತ್ತು ನ್ಯಾಯಮೂರ್ತಿ ಜೆ.ಎಂ. ಪಾಚಾಳರ ವಿಭಾಗೀಯ ಪೀಠದ ಎದುರು ಬಂದಿತು. ಆ ನ್ಯಾಯಪೀಠ ಆ ಮೊಕದ್ದಮೆ ಕಿತ್ತು ಹಾಕಿತು. ಈ ಪ್ರಕರಣದಿಂದ ಕರ್ನಾಟಕವು ಪಾಠ ಕಲಿಯಬೇಕು. ಒಂದು ಭಾಷಾನ್ವಯ ರಾಜ್ಯದಲ್ಲಿ ನ್ಯಾಯಬದ್ಧವೆನಿಸಿದ ಭಾಷಾ ಧೋರಣೆ ಇನ್ನೊಂದು ರಾಜ್ಯದಲ್ಲಿ ಅದೇಕೆ ಸ್ವೀಕೃತವಾಗಬಾರದು? ಸರ್ಕಾರದಲ್ಲಿ ಕನ್ನಡ ಭಾಷೆಯ ಬಗೆಗೆ ಬದ್ಧತೆ ಇದ್ದರೆ, ಕನ್ನಡಕ್ಕೆ ಈ ದುರವಸ್ಥೆ ಈ ರಾಜ್ಯದಲ್ಲಿ ಬರುತ್ತಿರಲಿಲ್ಲ. ಕನ್ನಡ ಈ ರಾಜ್ಯದಲ್ಲಿ ಉಳಿಯುವುದೂ, ಅಳಿಯುವುದೂ ಕರ್ನಾಟಕ ಸರ್ಕಾರದ ಭಾಷಾ ಧೋರಣೆಯನ್ನೇ ಅವಲಂಬಿಸಿದೆ. ಕನ್ನಡ ಶಿಕ್ಷಣ ಮಾಧ್ಯಮವಾಗುವುದು ಇಲ್ಲಿಯ ಸರ್ಕಾರದ ಪೌರುಷವನ್ನೇ ಅವಲಂಬಿಸಿದೆ. ಕನ್ನಡವನ್ನು ಬದುಕಿಸಿರಿ. ಅದನ್ನು ಕೊಲ್ಲುವುದಕ್ಕೆ ಹೋಗಬೇಡಿ

–ಸೌಜನ್ಯ : ಪ್ರಜಾವಾಣಿ – ದಿ.20.06.2011

ಅಗಲಿದ ಹಿರಿಯ ಚೇತನಗಳಿಗೆ ನುಡಿನಮನ

(ಡಾ. ಎಂ.ವಿ. ರಾಜಶೇಖರನ್ ಅವರಿಗೆ ನುಡಿನಮನ)

ಅಪರೂಪದ ಗಾಂಧಿವಾದಿ ಎಂ.ವಿ. ರಾಜಶೇಖರನ್

– ಬಸವರಾಜ ಮೇಗಲಕೇರಿ




ಬಸವನಗುಡಿಯ ಎಚ್.ಬಿ. ಸಮಾಜ ರಸ್ತೆಯ ಹತ್ತಿರದಲ್ಲಿದ್ದ ಅವರ ಮನೆಗೆ ಹೋದಾಗಲೆಲ್ಲ, ಎಂ.ವಿ. ರಾಜಶೇಖರನ್ ಗಾಂಧಿ ಕುರಿತು ಗಂಟೆಗಟ್ಟಲೆ ಮಾತನಾಡುತ್ತಿದ್ದರು. "ಸ್ವಾತಂತ್ರ್ಯ ಸಂಗ್ರಾಮಕ್ಕೆ ನಮ್ಮ ನಾಡು ಬಹಳ ದೊಡ್ಡ ಕೊಡುಗೆಯನ್ನೇ ನೀಡಿದೆ. ವಿಧುರಾಶ್ವತ್ಥದಲ್ಲಾದ ಗೋಲಿಬಾರ್‌ಗೆ ಹನ್ನೊಂದು ಜನ ಬಲಿಯಾದರು. ಹಾವೇರಿಯ ಸ್ವಾತಂತ್ರ್ಯ ಹೋರಾಟಗಾರರಾದ ತಂದೆ ಮಗ ಒಟ್ಟಿಗೆ ನೇಣಿಗೇರಿಸಲ್ಪಟ್ಟರು. ಸಂಗೊಳ್ಳಿ ರಾಯಣ್ಣ, ಮೈಲಾರ ಮಹಾದೇವ, ಮಹಾದೇವ ದೇಸಾಯಿ, ಸಿಂಧೂರ ಲಕ್ಷಣ ಒಬ್ಬರೇ ಇಬ್ಬರೆ. ಇವರೆಲ್ಲರೂ ನಮಗೆ ಸ್ಫೂರ್ತಿಯಾಗಿದ್ದರು. ಇದರ ಜೊತೆಗೆ ಬಹಳ ದೊಡ್ಡ ಶಕ್ತಿಯಾಗಿ, ಸ್ಫೂರ್ತಿಯಾಗಿ ಗಾಂಧೀಜಿ ಇದ್ದರು. ಎವರೆಲ್ಲರ ತ್ಯಾಗ ಬಲಿದಾನದ ಫಲ ಇವತ್ತಿನ ಸ್ವಾತಂತ್ರ್ಯ. ಅದು ಎಷ್ಟು ಜನಕ್ಕೆ ಗೊತ್ತಿದೆ." ಎಂದು ವಿಷಾದ ವ್ಯಕ್ತ ಪಡಿಸುತ್ತಿದ್ದರು.

ಕಾಂಗ್ರೆಸ್‌ನ ಹಿರಿಯ ರಾಜಕಾರಣಿ, ಕೇಂದ್ರದ ಮಾಜಿ ಮಂತ್ರಿ ಎಂ.ವಿ. ರಾಜಶೇಖರನ್ ನಿಧನರಾಗಿದ್ದಾರೆ. 92 ವರ್ಷಗಳ ತುಂಬು ಜೀವನ ಕಂಡ ರಾಜಶೇಖರನ್, ಗಾಂಧಿ ಕಾಲದ ಕೊನೆಯ ಕೊಂಡಿಯಂತಿದ್ದ ಅಪರೂಪದ ರಾಜಕಾರಣಿ.

ಇಂದಿರಾಗಾಂಧಿ, ಪಿ.ವಿ. ನರಸಿಂಹರಾವ್, ಪ್ರಣವ್ ಮುಖರ್ಜಿ, ಮನಮಹೋನ್ ಸಿಂಗ್, ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ದೇವರಾಜ ಅರಸು, ವೀರೇಂದ್ರ ಪಾಟೀಲ್, ಎಸ್.ಎಂ. ಕೃಷ್ಣರಂತಹ ನಾಯಕರೊಂದಿಗೆ ಒಡನಾಡಿದವರು. ಲೋಕಸಭೆ, ರಾಜ್ಯಸಭೆ ಮತ್ತು ವಿಧಾನ ಪರಿಷತ್ ಸದಸ್ಯರಾಗಿದ್ದವರು. ಅತ್ಯುತ್ತಮ ಸಂಸದೀಯ ಪಟುವಾಗಿ ಗುರುತಿಸಿಕೊಂಡಿದ್ದವರು. ಮನಮೋಹನ್ ಸಿಂಗ್ ಸರ್ಕಾರದಲ್ಲಿ ಕೇಂದ್ರ ಯೋಜನೆ ಮತ್ತು ಅಂಕಿ ಅಂಶ ಖ್ಯಾತಿ ರಾಜ್ಯ ಸಚಿವರಾಗಿ ಹೇಳಿಕೊಳ್ಳುವಂತಹ ಕೆಲಸಗಳನ್ನೇನು ಮಾಡದಿದ್ದರೂ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ, ಸ್ಥಾನಕ್ಕೆ ಚ್ಯುತಿ ತರದೆ, ಕೈಬಾಯಿ ಶುದ್ಧವಾಗಿಟ್ಟುಕೊಂಡ ಪ್ರಾಮಾಣಿಕರು.

ಅದಕ್ಕೆ ಕಾರಣ ಗಾಂಧಿ ಎಂ.ವಿ. ರಾಜಶೇಖರನ್ ಕರ್ನಾಟಕದ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ಬಹುಸಂಖ್ಯಾತರಾದ ಲಿಂಗಾಯತ ಜಾತಿಯಲ್ಲಿ ಹುಟ್ಟಿದರೂ, ಬಹಳ ದೊಡ್ಡ ಜಮೀನ್ದಾರರ ಕುಟಂಬದಿಂದ ಬಂದಿದ್ದರೂ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಅವರ ಅಳಿಯ ಎಂಬ ಹೆಗ್ಗಳಿಕೆಯಿದ್ದರೂ, 1960ರಿಂದ ಇಲ್ಲಿಯವರೆಗೆ ರಾಜಕೀಯ ರಂಗದಲ್ಲಿದ್ದು ಕೇಂದ್ರ ಮಂತ್ರಿ ಮಂಡಲ ಸೇರಿ ಹಲವಾರು ಮಹತ್ವದ ಹುದ್ದೆಗಳನ್ನು ಅಲಂಕರಿಸಿದರೂ ಪ್ರಾಮಾಣಿಕತೆ, ಸರಳತೆ, ಸಜ್ಜನಿಕೆಗಳನ್ನು ಬಿಟ್ಟುಕೊಡದವರು. ಆ ಕಾರಣದಿಂದಾಗಿಯೇ ಇವತ್ತಿನ ನವರಂಗಿ ರಾಜಕಾರಣದಿಂದ ದೂರವಾಗಿದ್ದ ಪಕ್ಷದ ಕಾರ್ಯಕ್ರಮಗಳಿಗಷ್ಟೇ ಸೀಮಿತರಾಗಿದ್ದರು. ಕಾಲದ ಹೊಡೆತಕ್ಕೆ ಸಿಕ್ಕಿ ಮೂಲೆಗುಂಪಾಗಿದ್ದರು. ಪಕ್ಷದಲ್ಲಿ ಇದ್ದೂ ಇಲ್ಲದಂತಿದ್ದರು.

ದಿ.12.9.1928ರಲ್ಲಿ ಕನಕಪುರ ತಾಲ್ಲೂಕಿನ ಮರಳವಾಡಿಯಲ್ಲಿ ಜನಿಸಿದ ಎಂ.ವಿ. ರಾಜಶೇಖರನ್ ಕನಕಪುರದ ಕರಿಯಪ್ಪ ಅವರ ರೂರಲ್ ಎಜುಕೇಷನ್ ಸಂಸ್ಥೆಯಲ್ಲಿ ಓದುತ್ತಿರುವಾಗಲೇ 16ನೇ ವಯಸ್ಸಿನಲ್ಲಿಯೇ ಗಾಂಧಿ ನೋಡಲು, ಅವರ ಭಾಷಣ ಕೇಳಲು ಮದ್ರಾಸಿಗೆ ಹೋಗಿದ್ದರು. ಗಾಂಧಿ ಅವರ ಮಾತು, ಮಾನವೀಯತೆ, ಸರಳ-ಸಜ್ಜನಿಕೆಯನ್ನು ಖುದ್ದಾಗಿ ಕಂಡು ಕರಗಿಹೋಗಿದ್ದರು. ಅವರ 'ಮಾಡು ಇಲ್ಲವೇ ಮಡಿ' ಘೋಷವಾಕ್ಯಕ್ಕೆ ಕಟ್ಟುಬಿದ್ದು, ಹೋರಾಟದ ಹುಚ್ಚಿಗೆ ಬಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ



ಮಾಜಿ ಪ್ರಧಾನಿ ಲಾಲ್ ಬಹುದ್ದೂರ್ ಶಾಸ್ತ್ರಿ (ಅಕ್ಟೋಬರ್ 2, 1904 - ಜನವರಿ 11, 1966) 'ಜೈ ಜವಾನ್ ಜೈ ಕಿಸಾನ್ ಘೋಷಣೆಯ ಹರಿಕಾರರು, ಪ್ರಧಾನಿಯಾಗಿದ್ದ ಅಲ್ಪಾವಧಿಯಲ್ಲೇ ಭಾರತ ರಾಜಕಾರಣದ ಮೇಲೆ ಛಾಪು ಮೂಡಿಸಿದ ನಾಯಕರು. 1965ರಲ್ಲಿ ಅಂದಿನ ಪ್ರಧಾನಿ ಲಾಲ್ ಬಹುದ್ದೂರ್ ಶಾಸ್ತ್ರಿ ಅವರು ಶರಾವತಿಯಲ್ಲಿನ ವಿದ್ಯುಜ್ಜನಕಗಳನ್ನು ಉದ್ಘಾಟಿಸಲು ಆಗಮಿಸಿದ್ದಾಗ ತೆಗೆದ ಚಿತ್ರವಿದು. ಈ ಚಿತ್ರ ಎರಡು ಶಕ್ತಿಗಳನ್ನು ಒಂದೇ ಚೌಕಟ್ಟಿನಲ್ಲಿ ಸೆರೆಹಿಡಿದಂತಿದೆ.

ಭಾಗಿಯಾಗಿದ್ದರು. ಮುಂದುವರೆದು ಮೈಸೂರು ಚಲೋ ಚಳವಳಿಯಲ್ಲೂ ಭಾಗವಹಿಸಿ ಜೈಲುವಾಸಿಯಾಗಿದ್ದರು.

ಮರಳವಾಡಿ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದವರಾದ್ದರಿಂದ, ಬಡತನ, ಕೃಷಿ ಕಷ್ಟಗಳು ಮತ್ತು ಜಾತಿ ತಾರತಮ್ಯಗಳನ್ನು ಖುದ್ದಾಗಿ ಕಂಡಿದ್ದರು. "ನನಗೆ ಕೃಷಿ, ಹಳ್ಳಿ, ರೈತರನ್ನು ಕಂಡರೆ ಪ್ರೀತಿ ಹೆಚ್ಚು. ರೈತ ಆಕಾಶ ನೋಡುತ್ತಾ ವ್ಯವಸಾಯ ಮಾಡುತ್ತಾನೆ. ಅವನ ಅದೃಷ್ಟ ಚೆನ್ನಾಗಿದ್ದರೆ ಮಳೆ ಆಗಬಹುದು, ಇಲ್ಲದಿದ್ದರೆ ಬಿತ್ತಿದ ಬೀಜ ಬೂದಿಯಾಗಬಹುದು. ಒಳ್ಳೆಯ ಬೆಳೆ ಬಂದ ನಂತರವೂ ಅದರ ಪೂರ್ಣ ಲಾಭ ಆತನಿಕೆ ದೊರಕದಿರಬಹುದು. ಅವನ ಲಾಭವನ್ನು ಮಧ್ಯವರ್ತಿಗಳು ನುಂಗಿಹಾಕಬಹುದು. ಒಟ್ಟಾರೆ ಭಾರತೀಯ ರೈತ ಅಸಹಾಯಕ ಸ್ಥಿತಿಯಲ್ಲಿದ್ದಾನೆ. ದೇಶಕ್ಕೆ ಅನ್ನ ಹಾಕುವ ರೈತ ಇವತ್ತು ಕಷ್ಟದಲ್ಲಿದ್ದಾನೆ. ಆ ಕಾರಣಕ್ಕಾಗಿಯೇ ಶಾಸಕನಾಗಿ, ಸಂಸದನಾಗಿ, ಕೇಂದ್ರ ಮಂತ್ರಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತಾಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನನ್ನ ಶಕ್ತಿಮೀರಿ ಸೇವೆ ಸಲ್ಲಿಸಿದೆ. ಹತ್ತಾರು ದೇಶ ಸುತ್ತಿ ನೂರಾರು ಪ್ರೌಢ ಪ್ರಬಂಧ ಮಂಡಿಸಿದೆ. ಅದಕ್ಕೂ ಗಾಂಧಿಯೇ ಕಾರಣ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂದಿ, ಸರ್ದಾರ್ ವಲ್ಲಭಬಾಯಿ ಪಟೇಲ್, ಡಾ. ಬಾಬು ರಾಜೇಂದ್ರ ಪ್ರಸಾದ್ ಸಹ ರೈತ ಸಂಘಟನೆಗೆ ಮುಂದಾಗಿದ್ದರು. ಗ್ರಾಮೀಣ ಆರ್ಥಿಕತೆಯಲ್ಲಿ ಬಲಪಡಿಸುವುದು ಅವರ ಮುಖ್ಯ ಗುರಿಯಾಗಿತ್ತು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಅಪಾರವಾದ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲವಿದೆ.

ಪಾರಂಪರಿಕ ವೃತ್ತಿವಂತ ಕುಶಲಕರ್ಮಿಗಳಿದ್ದಾರೆ, ಇವುಗಳನ್ನು ನಾವು ಸರಿಯಾಗಿ ಬಳಸಿಕೊಂಡು ಗ್ರಾಮೀಣ ಪ್ರದೇಶದ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಬೇಕು. ಕೃಷಿಯ ಜೊತೆಗೆ ಗುಡಿ ಕೈಗಾರಿಕೆ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಕುರಿ ಕೋಳಿ, ಅಣಬೆ ಬೇಸಾಯದ ಬಗೆಗೆ ನಮ್ಮ ರೈತರಿಗೆ ತಿಳುವಳಿಕೆ ನೀಡಬೇಕು. ಮಹಾತ್ಮ ಗಾಂಧಿ ಅವರು ಹೇಳಿದಂತೆ ಯಂತ್ರಗಳ ಬಳಕೆ ಕಡಿಮೆ ಮಾಡಿ ಯಥೇಚ್ಛವಾಗಿರುವ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಬೇಕು ಆದರೆ ಅಂದುಕೊಂಡಂತೆ ಆಗಲಿಲ್ಲ. ಸ್ವಾತಂತ್ರ್ಯಾ ನಂತರ ಕೂಡ ನಾವು ನಮ್ಮ ಆರ್ಥಿಕ ಕ್ಷೇತ್ರವನ್ನು ಸ್ವಾವಲಂಬಿಯನ್ನಾಗಿ ಮಾಡಲಾಗಲಿಲ್ಲ. ಇದೇ ಇಂದಿನ ಎಲ್ಲಾ ಸಮಸ್ಯೆಗಳಿಗೂ ಮೂಲ. ನಮ್ಮ ಆರ್ಥಿಕ ದೃಷ್ಟಿಯ ಚಿಂತನೆ ಕೇವಲ ನಗರಗಳಿಗೆ ಮಾತ್ರ ಸೀಮಿತವಾಗಿದೆ. ನಗರಗಳ ಆಕರ್ಷಣೆಯ ಬದುಕಿನ ಮುಂದೆ ಗ್ರಾಮೀಣ ಬದುಕು ಬರಡು ಎನಿಸಿದೆ." ಎಂದು ನಿಟ್ಟುಸಿರು ಬಿಟ್ಟಿದ್ದರು.

ಈ ಬಗ್ಗೆ ಕೇಳಿದರೆ, 'ನಾನು ಯಾವುದೇ ಮಹತ್ವಾಕಾಂಕ್ಷೆ ಇಟ್ಟುಕೊಂಡು ರಾಜಕೀಯ ಕ್ಷೇತ್ರಕ್ಕೆ ಬಂದವನಲ್ಲ. ನನಗೆ ರಾಜಕೀಯಕ್ಕಿಂತ ಗ್ರಾಮೀಣಾಭಿವೃದ್ಧಿಯೇ ಬಹಳ ಮುಖ್ಯವಾದುದು. ಗ್ರಾಮೀಣ ಜನತೆಯಲ್ಲಿ ಜಾಗೃತಿ ಮೂಡಿ, ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಬದಲಾವಣೆಯಾದರೆ, ನಾನು ನಿರಾಳ' ಎನ್ನುವ ಎಂ.ವಿ. ರಾಜಶೇಖರನ್, ಗಾಂಧಿಯವರ ಜೀವನ ಮೌಲ್ಯಗಳನ್ನು ಬದುಕಿನೊಂದಿಗೆ ಬೆರೆಸಿಕೊಂಡು ಬದುಕಿದ ಅಪರೂಪದ ಮನುಷ್ಯ. ಅವರ ಅಗಲಿಕೆಯಿಂದ ಗಾಂಧಿ ಕಾಲದ ಕಾಂಗ್ರೆಸ್, ತತ್ವಾದರ್ಶಗಳ ರಾಜಕಾರಣ, ಸ್ವಾರ್ಥರಹಿತ ಸೇವಾ ಮನೋಭಾವ, ಜನಪರ ನಿಲುವುಗಳೂ ಕಣ್ಮರೆಯಾದಂತಾಗಿದೆ.



Martin Luther King Jr.

(born Michael King Jr.; January 15, 1929 – April 4, 1968) He was an American Christian minister and activist who became the most visible spokesperson and leader in the Civil Rights Movement from 1955 until his assassination in 1968. King is best known for advancing civil rights through nonviolence and civil disobedience, inspired by his Christian beliefs and the nonviolent activism of Mahatma Gandhi.

King led the 1955 Montgomery bus boycott and later became the first president of the Southern Christian Leadership Conference (SCLC). As president of the SCLC, he then led an unsuccessful 1962 struggle against segregation in Albany, Georgia, and helped organize the nonviolent 1963 protests in Birmingham, Alabama. He helped organize the 1963 March on Washington, where he delivered his famous "I Have a Dream" speech on the steps of the Lincoln Memorial.

On October 14, 1964, King won the Nobel Peace Prize for combating racial inequality through nonviolent resistance. In 1965, he helped organize the Selma to Montgomery marches. In his final years, he expanded his focus to include opposition towards poverty and the Vietnam War. FBI Director J. Edgar Hoover considered him a radical and made him an object of the FBI's COINTELPRO from 1963 on. FBI agents investigated him for possible communist ties, recorded his extramarital liaisons and reported on them to government officials, and, in 1964, mailed King a threatening anonymous letter, which he interpreted as an attempt to make him commit suicide. Martin Luther King Jr. Day was established as a holiday in cities and states throughout the United States beginning in 1971; the holiday was enacted at the federal level by legislation signed by President Ronald Reagan in 1986. Hundreds of streets in the U.S. have been renamed in his honor, and a county in Washington was rededicated for him. The Martin Luther King Jr. Memorial on the National Mall in Washington, D.C., was dedicated in 2011.

- Collection by Dr. Ramalingeshwara (Sisira) Lecturer



ಪ್ರೊ.ಕೆ.ಎಸ್.ನಿಸಾರ್ ಅಹಮದ್

(5 ಫೆಬ್ರುವರಿ 1936 – 3 ಮೇ 2020)

ಇವರ ಪೂರ್ಣ ಹೆಸರು 'ಕೊಕ್ಕರೆ ಹೊಸಳ್ಳಿ ಶೇಖಹೈದರ ನಿಸಾರ್ ಅಹಮದ್'. ಅವರ ಕವನ ಇವರ 'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಎಂಬ ಕವನವು ಅವರನ್ನು 'ನಿತ್ಯೋತ್ಸವ ಕವಿ'ಯೆಂದೂ ಜನಮನ್ನಣೆಗಳಿಸಲು ಕಾರಣವಾಯಿತು.

ನಿಸಾರ್ ಅಹಮದ್ ಅವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಫೆಬ್ರುವರಿ 5,1936ರಲ್ಲಿ ಜನಿಸಿದರು. 1959ರಲ್ಲಿ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1994ರವರೆಗೆ ವಿವಿಧ ಸರಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾದರು.

ನಿಸಾರ್ ಅಹಮದ್ ಅವರ ಸಾಹಿತ್ಯಾಸಕ್ತಿ 10ನೇ ವಯಸ್ಸಿನಲ್ಲೇ ಆರಂಭವಾಗಿತ್ತು. 'ಜಲಪಾತ'ದ ಬಗ್ಗೆ ಬರೆದ ಕವನ ಕೈಬರಹದ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಅವರು ಇಲ್ಲಿಯವರೆಗೆ (2018) 21 ಕವನ ಸಂಕಲನಗಳು, 14 ವೈಚಾರಿಕ ಕೃತಿಗಳು, 5 ಮಕ್ಕಳ ಸಾಹಿತ್ಯ ಕೃತಿಗಳು, 5 ಅನುವಾದ ಕೃತಿಗಳು, 2 ಅನುವಾದ ನಾಟಕಗಳು ಮತ್ತು 13 ಸಂಪಾದನಾ ಗ್ರಂಥಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ "ಮನಸು ಗಾಂಧಿಬಜಾರು" ಹಾಗು ನಿತ್ಯೋತ್ಸವ ಇವು ಪ್ರಸಿದ್ಧ ಕವನ ಸಂಕಲನಗಳಾಗಿವೆ. .

1978ರಲ್ಲಿ ಇವರ ಮೊದಲ ಭಾವಗೀತೆಗಳ ಧ್ವನಿಮುದ್ರಿಕೆ ನಿತ್ಯೋತ್ಸವ ಕನ್ನಡ ಲಘುಸಂಗೀತ (ಸುಗಮ ಸಂಗೀತ) ಕ್ಷೇತ್ರದಲ್ಲಿ ಅಪಾರ ಯಶಸ್ಸು ಪಡೆಯಿತು. ಇದುವರೆಗೂ (2018) 13 ಧ್ವನಿಸುರುಳಿಗಳ ಮೂಲಕ ಅವರು ರಚಿಸಿದ ಕವನಗಳು, ಗೀತೆಗಳು ಸಂಗೀತದೊಂದಿಗೆ ಕನ್ನಡಿಗರ ಮನಸೂರೆಗೊಂಡಿವೆ. ಕುರಿಗಳು ಸಾರ್ ಕುರಿಗಳು, ರಾಜಕೀಯ ವಿಡಂಬನೆ ಕವನ, ಭಾರತವು ನಮ್ಮ ದೇಶ (ಸರ್ ಮೊಹಮದ್ ಇಕ್ಬಾಲ್ ಅವರ ಸಾರೆ ಜಹಾಂ ಸೆ ಅಚ್ಚಾ ಕವನದ ಕನ್ನಡ ಭಾಷಾಂತರ) ಮತ್ತು ಬೆಣ್ಣೆ ಕದ್ದ ನಮ್ಮ ಕೃಷ್ಣ ಕವನ ಕವಿಯ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

ಇವರಿಗೆ 2006ರ ಮಾಸ್ತಿ ಪ್ರಶಸ್ತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಗೊರೂರು, ಅನಕೃ ಪ್ರಶಸ್ತಿ, ಕೆಂಪೇಗೌಡ ಮತ್ತು ಪಂಪ ಪ್ರಶಸ್ತಿ, 1981ರ ರಾಜ್ಯೋತ್ಸವ ಪ್ರಶಸ್ತಿ, 2003ರ ನಾಡೋಜ ಪ್ರಶಸ್ತಿ, 2006ರ ಅರಸು ಪ್ರಶಸ್ತಿ ಮತ್ತು 2006 ಡಿಸೆಂಬರಿನಲ್ಲಿ ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಸಂದಿವೆ. ಭಾರತ ಸರ್ಕಾರದ ಪದ್ಮಶ್ರೀ ಗೌರವ, ಕರ್ನಾಟಕ ವಿ.ವಿ.ಯ ಗೌರವ ಡಾಕ್ಟರೆಟ್‌ಗಳನ್ನು ಪ್ರಧಾನ ಮಾಡಲಾಗಿದೆ.



ಡಾ. ಅಂಬೇಡ್ಕರ್‌ಗೆ ಉಟೋಪಚಾರ ಮಾಡಿದ್ದ ಪ್ರೀತಿಯ ಮುನ್ನಿ ಇನ್ನಿಲ್ಲ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರೀತಿಯ ಮುನ್ನಿ (ಜಗನ್ ಬೀ ಪಟೇಲ್ 108 ವರ್ಷ) ಅವರು ವಯೋಸಹಜ ಅನಾರೋಗ್ಯದಿಂದ ಚಿಕ್ಕೋಡಿ ತಾಲ್ಲೂಕಿನ ಕರೋಶಿ ಗ್ರಾಮದಲ್ಲಿ ದಿ.02.06.2020ರಂದು ಕೊನೆಯುಸಿರೆಳೆದಿದ್ದಾರೆ. 1927ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಚಿಕ್ಕೋಡಿಗೆ ಆಗಮಿಸಿದ್ದರು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಔರವಾಡ ಗ್ರಾಮದ ದೇವಸ್ಥಾನದ ಜಮೀನು ವಿವಾದ ಕೈಗೆತ್ತಿಕೊಂಡಿದ್ದ ಅಂಬೇಡ್ಕರ್, ಚಿಕ್ಕೋಡಿಯ ಕರೋಶಿ ಗ್ರಾಮದಲ್ಲಿ 9 ದಿನ ತಂಗಿದ್ದರು. ಈ ವೇಳೆ ಅವರಿಗಾಗಿ ಜಗನ್ ಬೀ ಪ್ರತಿದಿನ ಊಟೋಪಚಾರದ ವ್ಯವಸ್ಥೆ ಮಾಡಿದ್ದರು. ಡಾ. ಅಂಬೇಡ್ಕರ್ ಇವರನ್ನು ಪ್ರೀತಿಯಿಂದ ಮುನ್ನಿ ಎಂದು ಕರೆಯುತ್ತಿದ್ದರು. ದೇವಸ್ಥಾನದ ಇನಾಂ ಜಮೀನು ಬಾಬ್ತು, ಇವರ ತಾತನ ಜಮೀನು ವಿವಾದಕ್ಕಾಗಿ ಅಂದಿನ ಬಾಂಬೆ ಹೈಕೋರ್ಟಿನಲ್ಲಿ ವಕೀಲರಾಗಿದ್ದ ಡಾ. ಅಂಬೇಡ್ಕರ್ ಅವರು ಚಿಕ್ಕೋಡಿ ನ್ಯಾಯಾಲಯದಲ್ಲಿ ಇವರ ಕುಟುಂಬ ವ್ಯಾಜ್ಯಕ್ಕಾಗಿ ಚಿಕ್ಕೋಡಿಗೆ ಬರುತ್ತಿದ್ದರು. 108 ವರ್ಷದ ಅಪರೂಪದ ಅಜ್ಜಿಗೆ ಭಾವಪೂರ್ಣ ಶ್ರದ್ಧಾಂಜಲಿ

ಕಾವ್ಯ ಗುರು ನಿಸಾರ್ ಅವರಿಗೆ ಸಲಾಂ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ)

ಮನಸು ಗಾಂಧಿ ಬಜಾರಿನಲ್ಲಿ
ಸಂಜೆ ಐದರ ಮಳೆಯಲ್ಲಿ
ಬಜ್ಜಿ ಬೋಂಡದ ನೆನಪಿನಲ್ಲಿ
ಗುಂಡಪ್ಪ, ಮಾಸ್ತಿ... ಇನ್ನಿತರೆ ..
ನಿಮ್ಮವರೆ .. ಮತ್ತೆ
ಮತ್ತೆ ಕಾಯುತ್ತಿದ್ದಾರಲ್ಲ
ಬರಲಿಲ್ಲ ಇನ್ನೂ ಯಾಕೆ ನಮ್ಮ ನಿಸಾರ್
ಅಲ್ಲಾನು ಕೂಗುವ ಹೊತ್ತು
ಬರುವುದು ತಡವಾಗಿಲಿಕ್ಕುಂಟು ಎಂದು

ಎರಡು ಸಾವಿರದ ಏಳರಲ್ಲಿ
ಸಿಹಿಮೊಗ್ಗೆಯ ಹಚ್ಚ ಹಸಿರ ಮಂಟಪದಲ್ಲಿ
ಊರ ಹಾದಿಯ ತುಂಬೆಲ್ಲ
ಹಾರ ತುರಾಯಿ ಶಾಲು ಸನ್ಮಾನಗಳು
ನೂರಾರು ಕಲಾ ಪ್ರಪಂಚದ
ಸಾರೋಟಿನ ಮೆರವಣಿಗೆಯಲ್ಲಿ
ಧುಮ್ಮಿಕ್ಕಿ ಹರಿದ ಜೋಗದ ಜಲಪಾತ
ಅದ ನೋಡಿ ಲಕ್ಷ ಲಕ್ಷ ಮಂದಿ
ಕಣ್ತುಂಬಿಕೊಂಡ ಕ್ಷಣ
ಮರೆಯಲಾಗದ ಮಹನೀಯರು ನೀವು

ಎಪ್ಪತ್ತಮೂರರ
ಅಖಿಲ ಭಾರತ ಸಾಹಿತ್ಯ ಸಮ್ಮೇಳನ
ಕುಮಾರಸ್ವಾಮಿ–ಯಡ್ಯೂರಪ್ಪರ
ಆಳ್ವಿಕೆಯ ಸರ್ಕಾರ
ಚಂಪಾ– ಮಂಜುನಾಥರ
ನೇತೃತ್ವದ ಮಾತು ಮಂಥನದಲ್ಲಿ
ತಮ್ಮದೇ ಘನ ಸರ್ವಾಧ್ಯಕ್ಷತೆಯಲ್ಲಿ
ಯಶ ಕಂಡು ಶೃಂಗಾರ ಕಾವ್ಯವಾದದ್ದು
ನಿಸಾರ್ ಜಿ ಮರೆಯಲಾದೀತು ಹೇಗೆ

ಹಿಂದು ಇಸ್ಲಾಂ ಕ್ರೈಸ್ತರನು ಓದಿಕೊಂಡಿರಿ
ಅರಿತುಕೊಂಡಿರಿ ಅಲ್ಲಾನನು
ಕೂಗಿ ಕರೆದಿರಿ
ಕೃಷ್ಣನನೂ ಬೆಣ್ಣೆ ಕದ್ದನೆಂದಿರಿ
ಯೇಸುವಿನ ಜನರ ಕ್ಷಮಿಸಿಬಿಡಿ ಎಂದಿರಿ
ತಪ್ಪು ಮಾಡದವರಿಲ್ಲ
ಇದು ಕಾಲಗರ್ಭದ ಕೂಟ
ಈ ಜಗ ಮಾನವತೆಯ ಶ್ರೀಕಾರ

ಭೂ ಅಗಲ ಬಾನಗಲ
ಸಸ್ಯ ಕಾಶಿ ಭೋರ್ಗರೆವ
ಜಲಪಾತವನು ಕಾವ್ಯರಸಧಾರೆ ಮಾಡಿ
ಸಂಗೀತದ ರಸದೌತಣವನು
ಕನ್ನಡಿಗರ ಹೃನ್ಮನವ ತಣಿಸಿದಿರಿ
ಮರೆಯಲಾದೀತು ಹೇಗೆ
ಕಾವ್ಯ ಗುರು ನಿಸಾರರೆ

ಗುರುವಾಗಿ ರಾಜ್ಯದ ಮೂಲೆ
ಮೂಲೆಯಲಿ ಸಾವಿರಾರು
ಶಿಷ್ಯರನು ತಯಾರು ಮಾಡಿದಿರಿ
ನಿಸಾರ್ ಅಹ್ಮದರೆ
ನೀವಿಲ್ಲದೆ ಕರುನಾಡು ಬಡವಾಗಿದೆ
ಜಾತಿ ಮತ ಧರ್ಮಗಳ
ಗಡಿ ದಾಟಿದಿರಿ
ನೀವು ಬರೆದ ಕಾವ್ಯ
ಅಶರೀರವಾಣಿಯಾಗಿ
ಅಮರವಾಗಿದೆ
ಮರೆಯಲಾದೀತು
ಹೇಗೆ ನಿಸಾರ್ ಅಹ್ಮದರೆಂಬ
ಕಾವ್ಯ ಗುರುವೆ
ಶರಣು ನೂರು ತಮಗೆ

Dig inside. Inside is the fountain of Good and it will forever flow, if you forever dig.
- Marcus Aurelius

The glory is not in never failing, But in rising every time you fall
- Mark Ortman


THE NEW

CORONA VIRUS

Middle East Respiratory Syndrome- Coronavirus (MERS-COV)

MANY PEOPLE WONDER ABOUT THE NEW CORONA VIRUS,

What is it?



Corona is a large group of viruses, which can infect both humans and animals with cold related diseases. The intensity of the infection ranges from common cold to acute respiratory syndrome.

However, the new strain of coronavirus, which causes MERS, is a novel virus to humans. So far, the information related to the disease, its signs, modes of transmission and even the sources of infection is very limited.


Ministry of Health, in cooperation with WHO and international experts, are working on finding out more about this virus.

IS THERE A TREATMENT FOR THE NEW CORONA VIRUS?

There is no treatment until now. Supportive medical care is provided to help relieve the acuteness of the symptoms and control complications.


Un-known

IS THERE A VACCINE FOR THE NEW CORONA VIRUS?




So far, there is no vaccine.

WHAT ARE THE SIGNS AND SYMPTOMS OF THE NEW CORONA VIRUS INFECTION?




In advanced cases, the patient can have very serious complications, which can lead to death, such as:



HOW THE NEW CORONA VIRUS DOES TRANSMIT BETWEEN PEOPLE?

It is believed that the New Corona Virus transmits like other Corona viruses and Flu, which transmits through:



ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಡಾ. ವೂಡೇ ಪಿ. ಕೃಷ್ಣ

ಶಾಂತಿಯುತ ಚಳುವಳಿಯ ನೇತೃತ್ವ ವಹಿಸುವ ಮೂಲಕ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದಂಥ ಮಹಾತ್ಮಾ ಗಾಂಧೀಜಿ ಅವರು ಭಾರತದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಸುಧಾರಿಸುವ ಬಗ್ಗೆ ಯಾವಾಗಲೂ ಒತ್ತು ಕೊಟ್ಟು ಮಾತನಾಡುತ್ತಿದ್ದರು. "ರಾಜಕೀಯ ಸ್ವಾತಂತ್ರ್ಯಕ್ಕಿಂತ ನೈರ್ಮಲ್ಯೀಕರಣ ಹೆಚ್ಚು ಮಹತ್ವದ್ದು" ಎಂದು ಅವರು ಹೇಳುತ್ತಿದ್ದರು.

ಉತ್ತಮ ನೈರ್ಮಲ್ಯೀಕರಣ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯ ಸೋಂಕು ನಿವಾರಣೆಯಿಂದ ಹಿಡಿದು, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ತ್ಯತ್ಥ್ಯವನ್ನು ಸುಧಾರಿಸಲು ಹಾಗು ನಿರ್ವಹಿಸಲು ನೈರ್ಮಲ್ಯೀಕರಣದ ಪಾತ್ರ ಮಹತ್ವದ್ದಾಗಿದೆ. ಸುರಕ್ಷಿತ ನೈರ್ಮಲ್ಯೀಕರಣದ ಕೊರತೆ ಅತಿಸಾರಕ್ಕೆ ಕಾರಣವಾಗಬಹುದು. ಬಡ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅತಿಸಾರವು ಬಹಳ ದೊಡ್ಡ ಸಾರ್ವಜನಿಕ ಆರೋಗ್ಯದ ಸಮಸ್ಯೆಯಾಗಿದೆ ಏಕೆಂದರೆ, ಇಂತಹ ದೇಶಗಳಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಅನಾರೋಗ್ಯಕ್ಕೆ ಮತ್ತು ಸಾವಿಗೆ ಅತಿಸಾರ ಅತಿದೊಡ್ಡ ಕಾರಣವಾಗಿದೆ.

ಸೂಕ್ತ ನೈರ್ಮಲ್ಯದ ಕೊರತೆಯು ಉಷ್ಣವಲಯದ ಹಲವು ನಿರ್ಲಕ್ಷಿತ ಕಾಯಿಲೆಗಳನ್ನು ನಮಗೆ ಕೊಡುಗೆಯಾಗಿ ನೀಡುತ್ತದೆ. ಜೊತೆಗೆ ಅಪೌಷ್ಟಿಕತೆಯಂತಹ ಗಂಭೀರ ಪರಿಣಾಮವನ್ನೂ ಉಂಟುಮಾಡಬಲ್ಲದು ಸೂಕ್ತ ನೈರ್ಮಲ್ಯದ ಸೌಲಭ್ಯಗಳ ಕೊರತೆಯು, ಮಾನಸಿಕ ಆತಂಕಕ್ಕೂ ಮುಖ್ಯ ಕಾರಣವಾಗಬಲ್ಲದು. ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ. ಈ ಎಲ್ಲಾ ಕಾರಣಗಳಿಂದಾಗಿ ನೈರ್ಮಲ್ಯವು ಕಾಯಿಲೆಯನ್ನು ತಡೆಗಟ್ಟುವ, ಖಾಸಗಿತನವನ್ನು ಕಾಪಾಡುವ ಮತ್ತು ಗೌರವವನ್ನು ಉಳಿಸುವ ಮೂಲಭೂತ ಹಕ್ಕಾಗಿದೆ.

ನೈರ್ಮಲ್ಯವನ್ನು, "ಮಾನವನ ಮೂತ್ರ ಹಾಗು ಮಲವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ಸೇವೆ ಹಾಗೂ ಸೌಲಭ್ಯಗಳನ್ನು ಪಡೆಯುವ ವಿಧಾನ" ಎಂದು ವ್ಯಾಖ್ಯಾನಿಸಬಹುದು. ಒಂದು ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು, ಮಾನವನ ಮಲವನ್ನು ಮನುಷ್ಯ ಸಂಪರ್ಕದಿಂದ ದೂರವಿರಿಸಿ, ಅದನ್ನು ವಿಲೇವಾರಿ ಮಾಡುವ ಎಲ್ಲ ಹಂತಗಳನ್ನು ಒಳಗೊಂಡಿರುತ್ತದೆ. ಅಂದರೆ ಶೌಚಾಲಯದಿಂದ ಸಂಗ್ರಹಿಸುವುದು, ಸಾಗಿಸುವಿಕೆ, ಸಂಸ್ಕರಣೆ, ಅಂತಿಮ ವಿಲೇವಾರಿ ಅಥವಾ ಪುನರ್‌ಬಳಕೆ. ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು ಈ ಎಲ್ಲಾ ಅಗತ್ಯತೆಗಳನ್ನು ಒಳಗೊಂಡಿರಬೇಕು ಹಾಗೂ ಯಾವುದೇ ರೀತಿಯಲ್ಲಿ ಮಾನವ ಹಕ್ಕುಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು.

"ನಡುವಳಿಕೆಯಲ್ಲಿ ಬದಲಾವಣೆ" ಎಲ್ಲ ನೈರ್ಮಲ್ಯ ಕಾರ್ಯಕ್ರಮಗಳಲ್ಲಿ ಅತಿ ಅಗತ್ಯತೆಯ ಅಂಶವಾಗಿದೆ. ಜೊತೆಗೆ ಸುರಕ್ಷಿತ ನೈರ್ಮಲ್ಯದ ಬಳಕೆ ಹಾಗೂ ಅಳವಡಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಗತಿಯೂ ಆಗಿದೆ. ನೈರ್ಮಲ್ಯಕ್ಕೆ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಸರ್ಕಾರಗಳ ಪಾತ್ರ ಬಹು ದೊಡ್ಡದು. ಸಮನ್ವಯ ಸಾಧಿಸುವುದು ಮತ್ತು ಎಲ್ಲರನ್ನೂ ಒಂದುಗೂಡಿಸುವುದು ಅವುಗಳ ಜವಾಬ್ದಾರಿ. ಜೊತೆಗೆ ಅವು ಸೂಕ್ತ ನಾಯಕತ್ವ ಒದಗಿಸಬೇಕು ಹಾಗೂ ಹಣ ಹೂಡಿಕೆ ಮಾಡಬೇಕು.

"ನೀವು ಎಲ್ಲಿಯವರೆಗೆ ಕಸಬರಿಗೆ ಮತ್ತು ಬುಟ್ಟಿಯನ್ನು ಕೈಯಲ್ಲಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಿಲ್ಲ" ಎಂದು ಗಾಂಧೀಜಿ ಹೇಳಿದ್ದರು.

ಮಾಡೆಲ್ ಸ್ಕೂಲ್‌ಗೆ ಒಮ್ಮೆ ಗಾಂಧೀಜಿ ಅವರು ಭೇಟಿ ಕೊಟ್ಟಿದ್ದರು. ಆ ಸಮಯದಲ್ಲಿ ಅವರು ಅಲ್ಲಿನ ಶಿಕ್ಷಕರಿಗೆ ಹೀಗೆ ಹೇಳಿದ್ದರು. "ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಮಾತ್ರ ಸಾಕಾಗುವುದಿಲ್ಲ. ಜೊತೆಗೆ ಅವರನ್ನು ಅಡುಗೆ ಮಾಡುವವರು ಹಾಗೂ ಕಸ ಗುಡಿಸುವವರನಾಗಿ ಸಹ ಮಾಡಬೇಕು."

ವಿದ್ಯಾರ್ಥಿಗಳಿಗೆ ಅವರ ಉಪದೇಶ ಹೀಗಿತ್ತು. "ನೀವೇ ಸ್ವಂತ ಕಸಗುಡಿಸುವವರಾದರೆ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಡಬಹುದು. ವಿಕ್ಟೋರಿಯಾ ಕ್ರಾಸ್ ಗೆಲ್ಲುವುದಕ್ಕಿಂತ ಹೆಚ್ಚು ಧೈರ್ಯ, ಒಬ್ಬ ಪರಿಣಿತ ಕಸ ಗುಡಿಸುವವನಿಗೆ ಬೇಕು."

ಭಾರತದ ನಾಲ್ಕು ನಗರಗಳಲ್ಲಿ ಸರದಿ ಪ್ರಕಾರ ನಡೆಯುವ ತ್ರೈವಾರ್ಷಿಕ ಹಬ್ಬವಾದ ಕುಂಭ ಮೇಳಕ್ಕೆ ಗಾಂಧೀಜಿ ಅವರು 1915ರಲ್ಲಿ ಭೇಟಿ ನೀಡಿದ್ದರು. ಆ ವರ್ಷ ಕುಂಭ ಮೇಳವು ಭಾರತದ ಉತ್ತರದ ಗಂಗಾನದಿಯ ದಡದಲ್ಲಿರುವ ಹಾಗೂ ಹಿಂದೂಗಳ ಪವಿತ್ರ ನಗರವಾದ ಹರಿದ್ವಾರದಲ್ಲಿ ಆಯೋಜನೆಗೊಂಡಿತ್ತು. ಅಲ್ಲಿ ಲಕ್ಷಗಟ್ಟಲೆ ಭಕ್ತರು ತಮ್ಮ ಪಾಪ ಕಳೆಯಲು ಪವಿತ್ರ ನದಿಯಲ್ಲಿ ಮುಳುಗೇಳುತ್ತಿರುವುದನ್ನು ಕಂಡ ಗಾಂಧೀಜಿ ಅವರು ನಂತರದಲ್ಲಿ 'Young India' ಅವರ ಇಂಗ್ಲೀಷ್ ವಾರಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ. "ನಾನು ತುಂಬಾ ನಂಬಿಕೆ ಹಾಗೂ ಗೌರವದಿಂದ ಕುಂಭ ಮೇಳಕ್ಕೆ ಹೋಗಿದ್ದೆ, ಅಲ್ಲಿ ನನಗೆ ಗಂಗೆಯ ಪವಿತ್ರತೆ ಮತ್ತು ಹಿಮಾಲಯದ ಭವ್ಯತೆಯ ಅರಿವಾಯಿತು. ಆದರೆ ಆ ಪವಿತ್ರ ಜಾಗದಲ್ಲಿ ಮಾನವರು ಮಾಡುತ್ತಿರುವುದು ನನಗೆ ಯಾವ ದೃಷ್ಟಿಯಿಂದಲೂ ಪ್ರೇರಕವಾಗಿ ಕಾಣಲಿಲ್ಲ. ನನ್ನ ದುರಾದೃಷ್ಟಕ್ಕೆ ನನಗೆ ಅಲ್ಲಿ ದೈಹಿಕ ಅಶುಚಿತ್ವವಷ್ಟೇ ಕಂಡಿತು. ವಿಚಾರಹೀನ, ನಿರ್ಲಕ್ಷ ಮನಸ್ಸಿನ ಸ್ತ್ರೀ ಪುರುಷರು, ನಿಶ್ಯಬ್ದದಿಂದ ಕೂತು ದೇವರನ್ನು ಕಾಣುವ ಬದಲು, ಯಾವುದೋ ಕಾರ್ಯಗಳಲ್ಲಿ ತೊಡಗಿದ್ದರು. ಅವರು ಧರ್ಮ, ವಿಜ್ಞಾನ ಮತ್ತು ನೈರ್ಮಲ್ಯದ ಕಾನೂನನ್ನು ಉಲ್ಲಂಘಿಸುತ್ತಿದ್ದರು."

ಭಾರತ ಸರ್ಕಾರಕ್ಕೆ ಗಂಗೆಯನ್ನು ಶುಚಿಗೊಳಿಸುವುದು ಪ್ರಸಕ್ತ ವರ್ಷಗಳಲ್ಲಿ ರಾಷ್ಟ್ರೀಯ ಮಹತ್ವದ ವಿಚಾರವಾಗಿದೆ. 1925ರಲ್ಲಿ ಗಾಂಧೀಜಿ ಅವರು 'ನವಜೀವನ' ವಾರಪತ್ರಿಕೆಯಲ್ಲಿ (ಈ ವಾರಪತ್ರಿಕೆಗೆ 1919ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) ಶೌಚಾಲಯದಲ್ಲಿ ಶುಚಿತ್ವದ ಮಹತ್ವದ ಬಗ್ಗೆ ಹೀಗೆ ಬರೆಯುತ್ತಾರೆ.: "ನಮ್ಮ ಮನೆಯ ಹಾಲ್‌ನಷ್ಟೇ ನಮ್ಮ ಶೌಚಾಲಯ ಸಹ ಶುಚಿಯಾಗಿರಬೇಕು ಎನ್ನುವುದನ್ನು ನಾನು 35 ವರ್ಷಗಳ ಹಿಂದೆಯೇ ಕಲಿತಿದ್ದೆ. ಇದನ್ನು ನಾನು ಪಶ್ಚಿಮದವರನ್ನು ನೋಡಿ ಕಲಿತಿದ್ದು."

"ನಮ್ಮ ಬಹಳಷ್ಟು ರೋಗಗಳಿಗೆ ಕಾರಣ ನಮ್ಮ ಶೌಚಾಲಯದ ಅಶುಚಿತ್ವ ಮತ್ತು ಮಲವನ್ನು ಎಲ್ಲೆಂದರಲ್ಲಿ ಬಿಸಾಡುವುದು ಪರಿಪಾಠ. ಆದ್ದರಿಂದ ನಾನು, ಶೌಚದ ವಿಷಯದಲ್ಲಿ ಸ್ವಚ್ಛ ಪರಿಸರದ ಅಗತ್ಯತೆಯನು ಮತ್ತು ಶುಚಿಯಾದ ವಸ್ತುಗಳ ಬಳಕೆಯ ಅವಶ್ಯಕತೆಯನ್ನು ನಂಬುತ್ತೇನೆ.

ಪಶ್ಚಿಮ ಬಂಗಾಳ ರಾಜ್ಯದ, ಬರ್ಭುಮ್ ಎನ್ನುವ ಹಳ್ಳಿಯಲ್ಲಿ ವಾಸಿಸುವ ವ್ಯಕ್ತಿಯೊಬ್ಬನಿಂದ 1937ರಲ್ಲಿ ಗಾಂಧೀಜಿ ಅವರಿಗೆ ಪತ್ರವೊಂದು ಬಂದಿತ್ತು. "ಮಾದರಿ ಗ್ರಾಮದ ಪರಿಕಲ್ಪನೆಯನ್ನು ತಾವು ಹೇಗೆ ಗ್ರಹಿಸುತ್ತೀರಿ ಹಾಗೂ ತಮ್ಮ ಪ್ರಕಾರ ಭಾರತದ ಹಳ್ಳಿಗಳನ್ನು ಯಾವ ಸಮಸ್ಯೆಗಳು ಕಾಡುತ್ತಿವೆ?" ಎಂದು ಆ ಪತ್ರ ಬರೆದವನು ಕೇಳಿದ್ದ.

ಆ ಪತ್ರಕ್ಕೆ ಗಾಂಧೀಜಿ ಅವರು 'ಹರಿಜನ' ವಾರಪತ್ರಿಕೆಯ 1937ರ ಸಂಚಿಕೆಯೊಂದರಲ್ಲಿ ಈ ರೀತಿ ಉತ್ತರ ನೀಡಿದ್ದರು. (ಈ ಪತ್ರಿಕೆಗೆ 1930ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) "ಯಾವ ಗ್ರಾಮ ಪರಿಪೂರ್ಣ ನೈರ್ಮಲ್ಯವನ್ನು ಹೊಂದಿರುತ್ತದೆಯೋ, ಅದೇ ಮಾದರಿ ಗ್ರಾಮ. ಹಳ್ಳಿಯ ಜನ ಮೊಟ್ಟಮೊದಲು ತಮ್ಮಲ್ಲಿಯ ನೈರ್ಮಲ್ಯ ಸಮಸ್ಯೆಯನ್ನು ಪರಿಹರಿಸಲು ಕೆಲಸ ಮಾಡಬೇಕು.

ಅವರು ಬರೆಯುತ್ತಾರೆ; "ಒಬ್ಬ ಹಳ್ಳಿಯವನು ಸ್ವಯಂ ಪ್ರೇರಿತ ನೈರ್ಮಲ್ಯ ಕಾರ್ಮಿಕರಾದರೆ, ಆಗ ಆತ ರಾತ್ರಿ ಮಣ್ಣನ್ನು ಸಂಗ್ರಹಿಸಿ ಅದನ್ನು ಗೊಬ್ಬರವಾಗಿ ಪರಿವರ್ತಿಸಲು ಹಾಗೂ ಹಳ್ಳಿಯ ರಸ್ತೆಗಳನ್ನು ಗುಡಿಸಲು ಆರಂಭಿಸುತ್ತಾನೆ. ಆತನು ಹಳ್ಳಿಯ ಜನರಿಗೆ ದೈನಂದಿನ ಚಟುವಟಿಕೆಗಳನ್ನು ಹೇಗೆ ಮಾಡಬೇಕು, ನೈರ್ಮಲ್ಯದ ಮಹತ್ವ ಹಾಗೂ ನೈರ್ಮಲ್ಯವನ್ನು ನಿರ್ಲಕ್ಷಿಸುವುದರಿಂದ ಆಗುವ ಅಪಾಯದ ಬಗ್ಗೆ ಎಚ್ಚರಿಸುತ್ತಾನೆ. ಯಾರು ಕೇಳಲಿ ಬಿಡಲಿ, ಆ ಕೆಲಸಗಾರ ತನ್ನ ಕಾರ್ಯ ಮುಂದುವರಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ.

ಅಧಿಕಾರಿಗಳ ಬಂಗಲೆಗಳಲ್ಲಿ ಎಷ್ಟು ನೈರ್ಮಲ್ಯ ಇರುತ್ತದೆಯೋ ಅಷ್ಟೇ ಪ್ರಮಾಣದ ನೈರ್ಮಲ್ಯ ಆ ಬಂಗಲೆಯ ಪಕ್ಕದಲ್ಲಿರುವ ಕೆಲಸಗಾರರ ಮನೆಗಳಲ್ಲೂ ಇರಬೇಕು ಎಂದು ಗಾಂಧೀಜಿ ಅವರು 1946ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ತಮ್ಮ ಭಾಷಣವೊಂದರಲ್ಲಿ ಹೇಳಿದ್ದರು. "ದುಃಖದಾಯಕ ವಿಷಯವೆಂದರೆ ವೈಸ್‌ರಾಯ್ ಅವರ ಮನೆಯಲ್ಲಿ ದುಡಿಯುವ ಕೆಲಸಗಾರರು ಮತ್ತು ಕಸಗುಡಿಸುವವರ ವಸತಿ ಸಮುಚ್ಛಯವು ಅತ್ಯಂತ ಕೊಳಕಾಗಿದೆ. ಅಧಿಕಾರಿಗಳ ಸೇವಕರ ಮನೆಗಳೂ ಸ್ವಚ್ಛ ಮತ್ತು ಶಿಸ್ತಿನಿಂದ ಕೂಡಿರುವ ದೃಶ್ಯ ಮಾತ್ರ ನನಗೆ ತೃಪ್ತಿ ಕೊಡಲು ಸಾಧ್ಯ' ಎಂದು ಅವರು ನುಡಿದಿದ್ದರು.

ಮುಂದುವರೆಯುವುದು.....

ಆರೋಗ್ಯದಾಯಕ ಮತ್ತು ಸಂತೋಷದಾಯಕ ಜೀವನ ಸೂತ್ರಗಳು

– ಡಾ॥ ವಸುಂಧರಾ ಭೂಪತಿ

ಆರೋಗ್ಯ – ಚಿಂತನೆ ಲೇಖನದ ಮುಂದುವರಿದ ಭಾಗ

- ಬದುಕನ್ನು ಒಚಿದು ಕಲೆಯನ್ನಾಗ ರೂಪಿಸಿಕೊಂಡಲ್ಲಿ ಆನಂದದ ಅರಮನೆ ನಮ್ಮದಾಗುವುದು
- ಆಹಾರ, ವ್ಯಾಯಾಮ, ಮಾನಸಿಕ ಒತ್ತಡ ನಿಭಾಯಿಸುವಿಕೆ ಇವು ಆರೋಗ್ಯಕರ ಜೀವನದ ಮೂರು ಸ್ತಂಭಗಳು
- ನಾವು ಮಾಡುವ ಪ್ರತಿಯೊಂದು ಕೆಲಸವನ್ನು ಇಷ್ಟವಿಟ್ಟು ಮಾಡೋಣ, ಕಷ್ಟಪಟ್ಟು ಮಾಢುವುದು ಬೇಡ
- ಹಿತವಾದ, ಮಿತವಾದ ಆಯಾ ಋತುಮಾನಕ್ಕನುಗುಣವಾದ ಆಹಾರ ಕ್ರಮವಿರಲಿ
- ಆಹಾರದಲ್ಲಿ ಸೊಪ್ಪು, ತರಕಾರಿ ಅಭ್ಯಾಸಗಳು ಯಥೇಚ್ಚವಾಗಿರಲಿ
- ಸಿಹಿ, ಹುಳಿ, ಉಪ್ಪು, ಖಾರ, ಒಗರು ಈ ರುಚಿಗಳನ್ನು ಒಳಗೊಂಡ ಆಹಾರ ಸೇವಿಸಿದಲ್ಲಿ ದೇಹದಲ್ಲಿ ರೋಗನಿರೋಧಕ ಶಕ್ತಿ ಚೆನ್ನಾಗಿರುತ್ತದೆ.
- ರಾಸಾಯನಿಕ ಅಂಶಗಳನ್ನು ಒಳಗೊಂಡಿರುವ ಆಹಾರ ಪದಾರ್ಥಗಳಿಂದ ದೂರವಿರಿ
- ಬಿಳಿ ವಿಷ ಮತ್ತು ನಿಧಾನ ವಿಷಗಳಾದ ಉಪ್ಪು, ಸಕ್ಕರೆ ಮತ್ತು ಮೈದಾ ಬಳಸುವುದರಲ್ಲಿ ಜಿಪುಣರಾಗೋಣ (ಮಿತಿ ಹಾಕಿಕೊಳ್ಳೋಣ)
- ಸಕ್ಕರೆಗೆ ಬದಲು ಬೆಲ್ಲ ಬಳಸಿ
- ನಾರಿನಂಶವಿರುವ ಆಹಾರ ಪದಾರ್ಥಗಳನ್ನು ಹೆಚ್ಚು ಸೇವಿಸಿ
- ರಾತ್ರಿ ಹೊತ್ತು ಬೇಗ ಊಟಮಾಡುವ ಅಭ್ಯಾಸ ರೂಢಿಸಿಕೊಳ್ಳಿ
- ಕಾಫಿ, ಟೀ ಅಥವಾ ತಂಪು ಪಾನೀಯಗಳ ಸೇವನೆಯಲ್ಲಿ ಮಿತಿ ಹಾಕಿಕೊಳ್ಳಿ
- ದಿನಕ್ಕೆ ಮೂರು ಲೀಟರ್ ನೀರು ಅಗತ್ಯವಾಗಿ ಕುಡಿಯಿರಿ
- ರಾತ್ರಿ ಮಲಗುವ ಮುಂಚೆ ಒಂದು ಲೋಟ ಬಿಸಿನೀರು ಕುಡಿದಲ್ಲಿ ಮಲಬದ್ಧತೆಯ ಸಮಸ್ಯೆ ಬಾಧಿಸಲಾರದು
- ಊಟ ಮಾಡುವಾಗ ನಿಧಾನವಾಗಿ ಅಗಿದು ತಿನ್ನುವುದನ್ನು ರೂಢಿಸಿಕೊಳ್ಳಿ
- ದಿನಕ್ಕೆ ಒಂದು ಗಂಟೆ ನಡಿಗೆ ಅಥವ ಅರ್ಧ ಗಂಟೆ ವ್ಯಾಯಾಮ ಅಥವಾ ಯೋಗಾಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಿ
- ಕನಿಷ್ಠ ವಾರಕ್ಕೆ ಐದು ದಿನವಾದರೂ ನಡಿಗೆ, ವ್ಯಾಯಾಮ ಅಥವಾ ಯೋಗಾಭ್ಯಾಸ ಇರಲಿ
- 6 ರಿಂದ 8 ಗಂಟೆ ನಿದ್ರೆ ಅವಶ್ಯಕ
- ನಿದ್ರೆ ಮಾತ್ರೆಗೆ ಮೊರೆಹೋಗದೆ, ರಾತ್ರಿ ಕೊಳಲಿನ ಸಂಗೀತ ಆಲಿಸಿದಲ್ಲಿ ನಿದ್ರೆ ತಾನಾಗಿಯೇ ಬರುತ್ತದೆ
- ರೋಗನಿರೋಧಕ ಶಕ್ತಿ ಹಿಗ್ಗಿಸುವ ವಿಟಮಿನ್ ಸಿ ಹೆಚ್ಚಾಗಿರುವ ನೆಲ್ಲಿಕಾಯಿ ಆಹಾರದಲ್ಲಿ ಹೆಚ್ಚು ಬಳಸಿ
- ಜೇನುತುಪ್ಪ ದಿನನಿತ್ಯದ ಆಹಾರದಲ್ಲಿ ಬಳಸುತ್ತಿದ್ದಲ್ಲಿ ಕಬ್ಬಿಣಾಂಶ, ಸುಣ್ಣದಾಂಶದ ಕೊರತೆ ಕಾಡದು
- ಧೂಮಪಾನ, ಮದ್ಯಪಾನ ಮತ್ತು ಮಾದಕ ದ್ರವ್ಯಗಳಿಂದ ದೂರವಿರಿ
- ದಪ್ಪಗಿದ್ದಲ್ಲಿ ತೂಕ ಕಡಿಮೆ ಮಾಡಿಕೊಳ್ಳುವತ್ತ ಯೋಚಿಸಿ. ನಿಮಗೆ ನೀವೇ ಆಹಾರದಲ್ಲಿ ಮಿತಿ, ವ್ಯಾಯಾಮ ಅನುಸರಿಸಿ ತೂಕ ತಗ್ಗಿಸಿಕೊಂಡು ಆರೋಗ್ಯಕರ ಜೀವನ ನಡೆಸಿ
- ದೈಹಿಕ ಸ್ವಚ್ಛತೆ, ಮನೆಯೊಳಗಿನ ಮತ್ತು ಹೊರಗಿನ ಪರಿಸರದ ಸ್ವಚ್ಛತೆಯ ಕಡೆಗೆ ಗಮನಹರಿಸಿ
- ಎಲ್ಲರನ್ನು ಪ್ರೀತಿಸುವ, ಕಾಳಜಿ ವಹಿಸುವ ಮನೋಭಾವ ನೆಮ್ಮದಿ ತಂದುಕೊಡುತ್ತದೆ.
- ಸಮಯದ ಪರಿಪಾಲನೆ, ಬದುಕಿನಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು
- ಪ್ರೀತಿ, ವಿಶ್ವಾಸ ಬದುಕಿನ ಮೂಲಮಂತ್ರವಾಗಿರಲಿ
- ಆಸೆಯಿರಲಿ ದುರಾಸೆ ಬೇಡ
- ಸಾಹಿತ್ಯ, ಸಂಗೀತ, ಕ್ರೀಡೆ ಮುಂತಾದ ಯಾವುದಾದರೊಂದು ಹವ್ಯಾಸ ಬೆಳೆಸಿಕೊಳ್ಳಿ
- ನಿರೀಕ್ಷೆಗಳನ್ನು ಕಡಿಮೆ ಮಾಡಿಕೊಳ್ಳಿ
- ಇತರರ ಏಳಿಗೆಯನ್ನು ಕಂಡು ಸಂತೋಷಪಡುವ ಮನೋಭಾವ ಇರಲಿ
- ನಗುಮುಖ, ಸ್ನೇಹದ ನಡವಳಿಕೆ, ಆತ್ಮವಿಶ್ವಾಸ ಬೆಳೆಸಿಕೊಂಡಲ್ಲಿ ಸುಂದರ ವ್ಯಕ್ತಿಯಾಗಲು ಸಾಧ್ಯ
- ಅಂತರಂಗದ ಸೌಂಧರ್ಯ ಹೆಚ್ಚಿಸಿಕೊಳ್ಳಿ
- ಪ್ರಜ್ಞಾವಂತಿಕೆ ಹೆಚ್ಚಿಸಿಕೊಳ್ಳೋಣ
- ವಯಸ್ಸಾಗುವಿಕೆ ಅನಿವಾರ್ಯ, ಅದನ್ನು ಬಂದಾಗ ಸ್ವೀಕರಿಸಿ ಸಂತೋಷ ಮತ್ತು ನೆಮ್ಮದಿಯ ಜೀವನ ನಡೆಸಬೇಕು
- ನಾವು ಆರೋಗ್ಯವಾಗಿದ್ದು, ಕುಟುಂಬದವರ ಅರೋಗ್ಯ ರಕ್ಷಣೆಯ ಕಡೆಗೆ ಗಮನಹರಿಸಿ ಪರಸ್ಪರ ಪ್ರೀತಿ, ಗೌರವ ನೀಡುತ್ತ, ಎಲ್ಲರೊಂದಿಗೆ ಸ್ನೇಹ, ಸೌಹಾರ್ಧತೆಯೊಂದಿಗೆ ಕೂಡಿ ಬಾಳೋಣ.

ಪ್ರಕೃತಿ ಚಿಕಿತ್ಸೆ ಫಲಿತಗಳು

ಡಾ. ಸಂದೀಪ್
'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

"I have unshakable faith in Nature Cure. It is safe and soothening"

"ನಿಸರ್ಗ ಚಿಕಿತ್ಸೆಯ ಮೇಲೆ ನನಗೆ ಅಪಾರವಾದ ನಂಬಿಕೆ ಇದೆ. ಇದೊಂದು ಸುಶಿಕ್ಷಿತ ಮತ್ತು ಮೃದುತ್ವವನ್ನು ಹೊಂದಿದ ಚಿಕಿತ್ಸಾ ಪದ್ಧತಿಯಾಗಿದೆ"

– ಮೋ.ಕ. ಗಾಂಧಿ

ಗಾಂಧೀಜಿ ಅವರ ಎರಡನೇ ಮಗ ಮಣಿಲಾಲ್ ಹತ್ತು ವರ್ಷವಾಗಿದ್ದಾಗ ಒಮ್ಮೆ ವಿಪರೀತ ಜ್ವರ ಬಂದಿತ್ತು. ಅದು ವಿಷಮಜ್ವರ (ಟೈಫಾಯಿಡ್) ಎಂದು ವೈದ್ಯರು ಗುರುತಿಸಿದರು. ಅದರ ಜೊತೆಗೆ ನ್ಯುಮೋನಿಯಾ ಸಹ ಇದೆ ಎಂದು ಕಂಡುಬಂದಿತು. ಆಗ ಇಂಗ್ಲೀಷ್ ಔಷಧಿಗಳಲ್ಲಿ ಅತೀ ದೃಢೀಕೃತ ಔಷಧಿಗಳೂ ಸಹ ಈ ಎರಡೂ ಕಾಯಿಲೆಗಳಿಗೆ ಲಭ್ಯವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗಾಂಧೀಜಿ ಅವರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಆ ಸಮಯದಲ್ಲಿ ಬಾಂಬೆಯ ಚೌಪಾಟಿ ಹತ್ತಿರದ ಗುರುಗಾಂವದಲ್ಲಿ ಮನೆ ಮಾಡಿದ್ದರು. ಮಣಿಲಾಲನಿಗೆ ಚಿಕಿತ್ಸೆ ಮಾಡಲು ಒಬ್ಬ ಪಾರ್ಸಿ ಡಾಕ್ಟರರು ಬಂದರು. ಪರೀಕ್ಷಿಸಿ ಈ ಕಾಯಿಲೆಗೆ ಔಷಧಿಗಿಂತ ದಿನಕ್ಕೆರಡು ಮೊಟ್ಟೆ ಕೋಳಿ ಮರಿಯ ಸಾರು ಕೊಡಬೇಕು, ಜ್ವರ, ಕೆಮ್ಮಿಗೆ ಮಾತ್ರ ಔಷಧಿ ಕೊಡಬೇಕಾಗುತ್ತದೆ ಎಂದರು.

ಈ ಸಲಹೆಗೆ ಗಾಂಧೀಜಿ ಅವರು ಸಮ್ಮತಿಸಲಿಲ್ಲ. ಮನೆಯಲ್ಲಿ ಶಾಖಾಹಾರ ಪದ್ಧತಿ ಇದ್ದು ಮಗನಿಗೆ ಮಾಂಸಹಾರ ಏಕೆ ಕೊಡಬೇಕು? ಎಂದು ಆಲೋಚಿಸಿದರು ನಿಸರ್ಗ ಚಿಕಿತ್ಸೆಯ ಮೇಲೆ ಬಲವಾದ ನಂಬಿಕೆ ಇರುವುದರಿಂದ ನಿಸರ್ಗ ಚಿಕಿತ್ಸೆಯನ್ನೇ ಮಾಡುವುದೇ ಸರಿ ಬೇರೆ ಯಾವುದೇ ಔಷದೋಪಚಾರ ಬೇಡ ಎಂದು ನಿರ್ಣಯಿಸಿದರು. ದೇಹದಲ್ಲಿ ಕೊಳೆ ಇರುವವರೆಗೂ ಈ ರೋಗ ತಪ್ಪಿದ್ದಲ್ಲ. ಕೊಳೆ ಶುದ್ಧಿ ಮಾಡುವುದೇ ಕರ್ತವ್ಯ ಎಂದು ಸ್ವಾನುಭವದ ಚಿಕಿತ್ಸೆಯನ್ನೇ ಪ್ರಾರಂಭಿಸಿದರು. ಗಾಂಧೀಜಿ ಅವರು ವೈದ್ಯರಲ್ಲಿ "ಶರೀರ ಮತ್ತು ರಕ್ತ ಮತ್ತು ನಾಡಿ ಪರೀಕ್ಷೆ ನೀವು ಮಾಡಿ ಏಕೆಂದರೆ ಅದು ನನಗೆ ಗೊತ್ತಿಲ್ಲ. ಚಿಕಿತ್ಸೆಯ ವಿಚಾರ ನನಗೆ ಬಿಡಿ ಎಂದರು. ವೈದ್ಯರು ಇದಕ್ಕೆ ಸಮ್ಮತಿಸಿದರು.

ಆರಂಭದ ದಿನವೇ ಮಣಿಲಾಲ್‌ರಿಗೆ ಎನಿಮಾ ಕೊಟ್ಟರು. ತಣ್ಣೀರಿನ ಎದೆ ಪಟ್ಟಿ, ದಿನಕ್ಕೆ ಮೂರು ಸಲ ಹಾಕಿದರು. ಕಿತ್ತಳೆ ಹಣ್ಣಿನ ರಸ ಕೊಟ್ಟರು. ಸಾಕಷ್ಟು ಸಲ ನೀರು ಕುಡಿಯಲಿಕ್ಕೆ ಹೇಳಿದರು. ಹೀಗೆಯೇ ನಿರಂತರ ಚಿಕಿತ್ಸೆ ನಡದೇ ಇತ್ತು. ಜ್ವರ 104 ಡಿಗ್ರಿಗೆ ತಲುಪಿತ್ತು. ಎರಡನೇ ದಿವಸ ಇಡೀ ರಾತ್ರಿ ಗಾಂಧೀಜಿ ಮಣಿಲಾಲನ ಜೊತೆ ಇದ್ದು ಚಿಕಿತ್ಸೆ ನೀಡಿದ್ದರು. ಪ್ರತಿ ಅರ್ಧ ಗಂಟೆಗೆ ತಣ್ಣೀರಿನ ಪಟ್ಟಿಯನ್ನು ಹಣೆಗೆ ಹಾಕುತ್ತಿದ್ದರು. ಡಾ. ಲೂಯಿಸ್ ಅವರ ಪ್ರಕಾರ ದಿನಕ್ಕೆರಡು ಸಲ 3 ನಿಮಿಷದ ತಣ್ಣೀರು ಸ್ನಾನ, ತಣ್ಣೀರಿನ ಸ್ಪಾಂಜ್ ಬಾತ್, ಒದ್ದೆ ಬಟ್ಟೆಯಿಂದ ದೇಹವನ್ನು ಒರೆಸುವುದು, ಚಿಕಿತ್ಸೆ ನಡದೇ ಇತ್ತು. ಆದರೆ ಜ್ವರ ಸಹಜ ಸ್ಥಿತಿಗೆ ಬರುತ್ತಿಲ್ಲ. ಕೊನೆಯ ಅಸ್ತ್ರವೆಂಬಂತೆ ಬೆಳಿಗ್ಗೆ ಪೂರ್ಣ ಒದ್ದೆ ಬಟ್ಟೆಯನ್ನು ದೇಹದ ಸುತ್ತಲೂ ಸುತ್ತಿದರು. ಅದರ ಮೇಲೆ ಎರಡು ಕಂಬಳಿ ಹೊದಿಸಿದರು. ಇದಕ್ಕೆ ಪೂರ್ಣ ಒದ್ದೆ ಬಟ್ಟೆ ಚಿಕಿತ್ಸೆ. ಪುಲ್ ಬೆಡ್‌ಶೀಟ್ ಪ್ಯಾಕ್ ಎಂದು ಕರೆಯುತ್ತಾರೆ. ಇದು 45 ನಿಮಿಷದ ಚಿಕಿತ್ಸೆ, ಕಸ್ತೂರಬಾ ಅವರಿಗೆ ಮಣಿಲಾಲನೊಂದಿಗೆ ಇರಲು ಹೇಳಿ ಚೌಪಾಟಿ ಬೀಚ್‌ಗೆ ವಾಯು ವಿಹಾರಕ್ಕೆ ಹೊರಟರು. ಅಲ್ಲಿ ತಿರುಗಾಡುವಾಗಲೂ ಸಹ ಮಣಿಲಾಲನದೇ ಚಿಂತೆ. ಇದೊಂದು 'ಧರ್ಮಸಂಕಟ' ಎಂದುಕೊಳ್ಳುತ್ತಿದ್ದರು. ಪ್ರಯೋಗದ ಹೆಸರಿನಲ್ಲಿ ಮಕ್ಕಳನ್ನು ಬಲಿ ತೆಗೆದುಕೊಳ್ಳುವ ಹುಚ್ಚ ಅಂತಾ ಜನ ಅನ್ನುವುದಿಲ್ಲವೇ? ಪಕ್ಕದಲ್ಲಿಯೇ ಇದ್ದ ನನ್ನ ಅಣ್ಣ ಏನು ಹೇಳಬಹುದು. ಕಸ್ತೂರಬಾ

ಸಿಟ್ಟಾಗಬಹುದೇ? ಬೇರೆ ವೈದ್ಯರಿಗೆ ತೋರಿಸೋಣವೆ? ಹೀಗೆಲ್ಲಾ ಯೋಚಿಸುತ್ತ ಮನೆಗೆ ಹಿಂದುರಿಗಿದರು. ಒದ್ದೆ ಬಟ್ಟೆಯಲ್ಲಿ ಮಲಗಿದ್ದ ಮಣಿಲಾಲ, "ಬಾಪು ಬೇಗ ಬನ್ನಿ, ಪಟ್ಟಿಯೊಳಗಿನ ಬೇಗೆ ತಡೆಯಲಾಗುತ್ತಿಲ್ಲ. ಇದನ್ನು ಮೊದಲು ತೆಗೆದು ಬಿಡಿ" ಎಂದನು. ಬೆವರು ಬರುತ್ತಿದೆಯಾ ಮಗ ಎಂದು ಕೇಳಿದರು. "ಹೌದು ಬಾಪು ವಿಪರೀತ ಬೆವರುತ್ತಿದೆ" ಎಂದ ಮಣಿಲಾಲ. ಆಗ ಗಾಂಧೀಜಿ ಅವನ ಹಣೆ ಮುಟ್ಟಿ ನೋಡಿ, 'ಬೆವರು ನೀರು ಹರಿಯುವಂತೆ ಸೋರುತ್ತಿದೆ. ಜ್ವರದ ಬಾದೆ ಇಲ್ಲ' ಎಂದರು. ಬಾಪುಗೆ ಬಹಳ ಖುಷಿಯಾಯಿತು. 'ಜ್ವರ ಸಾಮಾನ್ಯ ಸ್ಥಿತಿಗೆ ಬಂದಿದೆ. ಅಬ್ಬಾ! ದೇವರೇ ನನ್ನ ಮೇಲೆ ಕರುಣೆ ತೋರಿದ್ದಾರೆ, ಎಲ್ಲರಿಗೂ ಉತ್ತರಿಸಲು ಸಾಧ್ಯವಾಯಿತು. ಈಗ ಧರ್ಮಸಂಕಟದಿಂದ ಪಾರಾದೆ', ಎಂದು ಉದ್ಗಾರ ತೆಗೆದರು.

ಮಣಿಲಾಲನ ಜ್ವರವು ಸಹಜ ಸ್ಥಿತಿಗೆ ಬಂದ ಮೇಲೆ, ಮುಂದಿನ ನಲ್ವತ್ತು ದಿನಗಳ ವರೆಗೆ ಹಣ್ಣಿನ ರಸ, ನೀರು, ಹಾಲು ಬಿಟ್ಟು ಮತ್ತೇನನ್ನು ನೀಡುತ್ತಿರಲಿಲ್ಲ. ಇದಾದ ನಂತರ ಆರೋಗ್ಯ ಸಹಜ ಸ್ಥಿತಿಗೆ ಮರಳಿದ್ದನ್ನು ಆತ್ಮಕಥನದಲ್ಲಿ ಗಾಂಧಿ ಅವರು ಬರೆದಿದ್ದಾರೆ.

ಗಾಂಧೀಜಿ ಅವರ ಈ ಪ್ರಯೋಗಗಳಿಂದ ನಾವು ಕಲಿಯಬೇಕಾಗಿದ್ದೇನೆಂದರೆ.

1. ಸರ್ವೇ ರೋಗಾಃ ಮೂಲತಃ ಲಂಘನಂ ಪರವತಾಷ. ಇದರರ್ಥ ಕೊಳೆಯೇ ರೋಗದ ಮೂಲ, ಶರೀರ ಶುದ್ಧಿಯೇ ರೋಗ ನಿವಾರಣೆ.
2. ರೋಗವೇ ದೇಹಕ್ಕೆ ಅಂಟಿದ ಒಂದು ವಿಷ ಅದರ ಜೊತೆಗೆ ಮತ್ತೊಂದು ಔಷಧಿ ವಿಷವನ್ನು ಕೊಡುವುದರಲ್ಲಿ ಅರ್ಥವಿಲ್ಲ. ಆ ವಿಷವನ್ನೇ ಹೊರಹಾಕುವುದೇ ರೋಗದ ನಿರ್ಮೂಲನೆ. ದೇಹವು ದೇಗುಲವಾಗವೇಕೇ ಹೊರತು ವಿಷಗಳ ಮಲಗಳ, ಕೊಳೆಗಳ ತಾಣವಾಗಬಾರದು ಎಂದು ಹೇಳುತ್ತಿದ್ದರು.
3. ಪ್ರಕೃತಿ ಚಿಕಿತ್ಸೆಯೂ ಸೇರಿದಂತೆ ಅವರ ತತ್ವಗಳಲ್ಲಿ ಅವರಿಗೆ ಅಪಾರ ನಂಬಿಕೆ ಇತ್ತು.
4. ಜನರಿಗೆ ಏನು ಹೇಳುತ್ತಿದ್ದರೋ, ಅದನ್ನೇ ಅವರು ಪಾಲಿಸುತ್ತಿದ್ದರು. 'ನುಡಿದಂತೆ ನಡೆದವರು"
5. ಗಾಂಧಿ ಅವರ "ನನ್ನ ಜೀವನವೇ ನನ್ನ ಸಂದೇಶ" ಎಂಬುದು ಪ್ರಯೋಗಾತ್ಮಕತೆಯೇ ಆಗಿದೆ. ಎಂದು ತಿಳಿದುಬರುತ್ತದೆ.

ಆಧಾರ : ಮಹಾತ್ಮಾಜಿ ಅವರ ನನ್ನ ಆತ್ಮಕಥೆ ಅಥವಾ ಸತ್ಯಾನ್ವೇಷಣೆ ಕೃತಿ

World Health Day

The World Health Day is a global health awareness day celebrated every year on 7 April, under the sponsorship of the World Health Organization (WHO), as well as other related organizations.

In 1948, the WHO hold the First World Health Assembly. The Assembly decided to celebrate 7 April of each year, with effect from 1950, as the World Health Day. The World Health Day is held to mark WHO's founding, and is seen as an opportunity by the organization to draw worldwide attention to a subject of major importance to global health each year.The WHO organizes international, regional and local events on the Day related to a particular theme. World Health Day is acknowledged by various governments and non-governmental organizations with interests in public health issues, who also organize activities and highlight their support in media reports, such as the Global Health Council.

World Health Day is one of eight official global health campaigns marked by WHO, along with World Tuberculosis Day, World Immunization Week, World Malaria Day, World No Tobacco Day, World AIDS Day, World Blood Donor Day, and World Hepatitis Day.

Collection : S.M. Shamala : Retd. Teacher and Writer

ಪರಿಸರ ರಕ್ಷಣೆ ಗಾಂಧೀಜಿ ಚಿಂತನೆ

ಜೂನ್ 5, ವಿಶ್ವ ಪರಿಸರ ದಿನಾಚರಣೆ

– ಜಿ. ಬಾಲಕೃಷ್ಣ

ಅಭಿವೃದ್ಧಿ ಸಾಧಿಸುವ ಭರದಲ್ಲಿ ಪರಿಸರ ನಾಶವಾಗುತ್ತಲೇ ಇದೆ. ಹೀಗಾಗಿ ಇವತ್ತು ಪರಿಸರ ಸಂರಕ್ಷನೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಮಹಾತ್ಮ ಗಾಂಧೀಜಿ ಅವರು ಪರಿಸರ ಸಂರಕ್ಷಣೆಯ ಹಾದಿಯಲ್ಲಿ ಇಂದಿಗೂ ಪ್ರಸ್ತುತವಾದವರು. ಪರಿಸರದ ಅನುಕರಣೀಯ, ಅಷ್ಟೇ ಅಲ್ಲ ಸಮಸ್ಯೆಗೆ ಸುಲಭ ಪರಿಹಾರ.

ಇಂದು ವೈಜ್ಞಾನಿಕ ಸಾಧನೆ ಉತ್ತುಂಗದಲ್ಲಿದೆ. ಐವತ್ತು ವರ್ಷಗಳ ಹಿಂದೆ ಊಹಿಸಲೂ ಸಾಧ್ಯವಾಗದಷ್ಟು ಪ್ರಗತಿ ಮತ್ತು ಆಧುನಿಕತೆಯನ್ನು ಸಾಧಿಸುವ ಭರದಲ್ಲಿ ಪರಿಸರವನ್ನು ಸಂಪೂರ್ಣ ಕಡೆಗಣಿಸಿದುದರ ಪರಿಣಾಮವಾಗಿ ಇಂದು ಪರಿಸರ ಸಂರಕ್ಷಣೆ ದೊಡ್ಡ ಸವಾಲಾಗಿದೆ. ವಿಜ್ಞಾನಿಗಳು ಹೇಳುವಂತೆ ಭೂಮಿಯ ಚರಿತ್ರೆಯಲ್ಲಿ ಇದುವರೆಗೆ ಆರು ಸಾರಿ ಭೂಮಿಯ ಜೀವ ಸಂಕುಲಗಳು ನಿರ್ನಾಮವಾದ ಘಟನೆಗಳು ಸಂಭವಿಸಿದೆ. ಆರು ಸಾರಿಯೂ ಜೀವ ಮತ್ತೆ ಪುಟಿದೆದ್ದಿದೆ. ಆದರೆ ಮಾನವನ ದುರಾಸೆ ಮುಂದುವರಿದರೆ ವಿನಾಶದ ನಂತರ ಹಿಂದಿನಂತೆ ಜೀವಸಂಕುಲ ಮತ್ತೆ ಚೇತರಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಪರಿಸರ ಸಂರಕ್ಷಣೆಯ ಹಾದಿಯಲ್ಲಿ ಇಂದಿಗೂ ಪ್ರಸ್ತುತವಾದವರು ಮಹಾತ್ಮ ಗಾಂಧಿ. ಗಾಂಧೀಜಿ ಇಂದಿನ ನಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸಿಕೊಡಬಲ್ಲವರಾಗಿದ್ದಾರೆ. ಗಾಂಧೀಜಿಗೆ ನೈತಿಕ ಬಲವಿತ್ತು. ಅವರು ಬೋಧಿಸುತ್ತಿದ್ದುದನ್ನು ಅವರೇ ಆಚರಿಸುತ್ತಿದ್ದರು. ಅಹಿಂಸೆ ಮತ್ತು ಅಸಹಕಾರದ ಅಸ್ತ್ರಗಳ ತೀರಾ ವೈಯಕ್ತಿಕ ನೈತಿಕತೆಯನ್ನು ಒಂದು ಬಲಿಷ್ಠ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಯನ್ನಾಗಿ ರೂಪಿಸಿದವರು. ಅವರ ಹೋರಾಟಕ್ಕೆ ಸತ್ಯವೇ ಆಧಾರವಾಗಿದೆ. ಗಾಂಧೀಜಿ ಅವರಿಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಅರಿವಿತ್ತು. 1909ರಲ್ಲೇ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಭಾರತಕ್ಕೆ ಪಾಶ್ಚಿಮಾತ್ಯ ನಾಗರಿಕತೆಯನ್ನು ಬರಮಾಡಿಕೊಳ್ಳುವುದೆಂದರೆ 'ಭಸ್ಮಾಸುರ'ನನ್ನು ಆಹ್ವಾನಿಸಿದಂತೆ ಎಂದು ಎಚ್ಚರಿಸಿದ್ದರು. 'ಪಾಶ್ಚಿಮಾತ್ಯ ನಾಗರಿಕತೆ ಕೊಳ್ಳುಬಾಕ ಸಂಸ್ಕೃತಿಯದಾಗಿದ್ದು ಅದನ್ನೇ ಅಭಿವೃದ್ಧಿ ಎಂದುಕೊಂಡಿದೆ. ಪದಶಃ ಅರ್ಥದಲ್ಲಿ ಅದು ನಾಗರಿಕತೆಯೇ ಅಲ್ಲ' ಎಂದಿದ್ದರು. ಇಂಗ್ಲೆಂಡ್‌ನಂತೆ ನಮ್ಮ ದೇಶವೂ ಅಭಿವೃದ್ಧಿಯಾಗುವುದು ಯಾವಾಗ? ಎಂದು ಒಬ್ಬರು ಕೇಳಿದ್ದಕ್ಕೆ, ಇಂಗ್ಲೆಂಡ್ ಅಭಿವೃದ್ಧಿಗೆ ಭೂಮಿಯ ಅರ್ಧ ಸಂಪನ್ಮೂಲಗಳೇ ಬರಿದಾಗಿವೆ. ಭಾರತ ಆ ರೀತಿ ಆಗಬೇಕಾದಲ್ಲಿ ಭೂಮಿಯಂತಹ ಇನ್ನೆಷ್ಟು ಗ್ರಹಗಳು ಬರಿದಾಗಬೇಕೋ ಎಂದಿದ್ದರು ಗಾಂಧೀಜಿ. ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದ ಸಂಪನ್ಮೂಲಗಳನ್ನು ದೋಚಿ ಬ್ರಿಟನ್‌ನ ಮಿಲ್ಲು ಮತ್ತು ಕೈಗಾರಿಕೆಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಅಂತಹ ಅಭಿವೃದ್ಧಿ ಬೇಡವೇ ಬೇಡ. ಮನುಷ್ಯನ ಆಸೆಗೆ ಕೊನೆಯೇ ಇಲ್ಲ. ತನ್ನ ದುರಾಸೆಯನ್ನು ತೃಪ್ತಿಪಡಿಸಿಕೊಳ್ಳಲು ಪಶ್ಚಿಮದ ನಾಗರಿಕತೆ ಪ್ರಕೃತಿಯ ಮೇಲೆ ಮೇಲುಗೈ ಸಾಧಿಸಲು ಯತ್ನಿಸುತ್ತಿದೆ ಎಂದಿದ್ದರು ಗಾಂಧೀಜಿ.

ಸಾರ್ವಕಾಲಿಕ

ಪ್ರತಿಯೊಬ್ಬನ ಅವಶ್ಯಕತೆ ಈಡೇರಿಸುವಷ್ಟು ಭೂಮಿಯಲ್ಲಿದೆ. ಆದರೆ ದುರಾಸೆಯ ಈಡೇರಿಕೆಯಷ್ಟಲ್ಲ ಎಂಬ ಗಾಂಧೀಜಿ ಮಾತು ಈಗಷ್ಟೇ ಪ್ರಸ್ತುತವಲ್ಲ. ಇನ್ನು ಸಾವಿರ ವರ್ಷ ಕಳೆದರೂ ಅಪ್ರಸ್ತುತವಾಗಲಾರದು. ಗಾಂಧೀಜಿ ಮನುಷ್ಯನ ಅವಶ್ಯಕತೆ ಮತ್ತು ಬೇಡಿಕೆಗಳನ್ನು ಪ್ರತ್ಯೇಕವಾಗಿ ನೋಡುತ್ತಿದ್ದರು. ಭೂಮಿಯ ಸಂಪನ್ಮೂಲಗಳು ಈಗಿನವರಿಗೆ ಮಾತ್ರವಲ್ಲ. ಅದರ ಅವಶ್ಯಕತೆಯಿರುವ ಮುಂದಿನ ಪೀಳಿಗೆಯನ್ನು ಗಮನದಲ್ಲಿರಿಸಿಕೊಳ್ಳಬೇಕು ಎನ್ನುತ್ತಿದ್ದರು. ಮಾನವ ದುರಾಸೆಯ ಗುಲಾಮ ಆಗಬಾರದು ಎಂದು ಅವರು ಹೇಳುತ್ತಿದ್ದರು.

ಅಗತ್ಯದಷ್ಟೇ ಬಳಕೆ

ತಮ್ಮ ಆಶ್ರಮಕ್ಕೆ ಪ್ರವೇಶ ಬಯಸುವವರಿಗೆ ಅವರು ಮೊದಲು ಕೇಳುತ್ತಿದ್ದ ಪ್ರಶ್ನೆ, ನಿನ್ನ ಪಾಯಖಾನೆಯನ್ನು ನೀನೇ ಸ್ವಚ್ಛಗೊಳಿಸಬಲ್ಲೆಯಾ? ಅವರು ಸಬರಮತಿ ಆಶ್ರಮದ ಬಳಿಯ ನದಿಯಲ್ಲಿ ಸ್ನಾನ ಮಾಡುವಾಗ ಅವರು ಎಷ್ಟು ಬೇಕೋ ಅಷ್ಟೇ ನೀರನ್ನೇ ಬಳಸುತ್ತಿದ್ದರು.

ನದಿಯಲ್ಲಿ ನೀರು ಉಕ್ಕಿ ಹರಿಯುತ್ತಿದ್ದರೂ ಅವರು ಅದನ್ನು ಅನಾವಶ್ಯಕವಾಗಿ ಬಳಸುತ್ತಿರಲಿಲ್ಲ. ನದಿಯಲ್ಲಿ ಅಷ್ಟು ನೀರಿದ್ದರೂ ಅದನ್ನು ಬೇಕಾದಷ್ಟು ಬಳಸಲು ಏಕೆ ಹಿಂಜರಿಯುತ್ತಿರುವಿರಿ? ಎಂದು ಒಮ್ಮೆ ಕೇಳಿದಾಗ. ನದಿಯಲ್ಲಿ ಹರಿಯುತ್ತಿರುವ ನೀರೆಲ್ಲಾ ನನ್ನದಲ್ಲವಲ್ಲಾ ಎಂದಿದ್ದರು. ಅವರಿದ್ದ ಸಮಯದಲ್ಲಿ ಕಾಗದಕ್ಕಾಗಿ ಕಾಡು ಕಡಿಯುವುದು ಸಮಸ್ಯೆಯೇ ಆಗಿರಲಿಲ್ಲ ಆದರೂ ಅವರಿಗೆ ಯಾರಾದರೂ ಪತ್ರ ಬರೆದಲ್ಲಿ ಬೇರೆ ಕಾಗದ ಬಳಸದೆ ಆ ಪತ್ರದ ಹಿಂದೆಯೇ ಬರೆದು ಉತ್ತರಿಸುತ್ತಿದ್ದರು. ಲಕೋಟೆಗಳನ್ನು ಕತ್ತರಿಸಿ ಅದರ ಹಿಂದಿನ ಖಾಲಿ ಸ್ಥಳದಲ್ಲಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಅವರ ಅನುಯಾಯಿಗಳು ಅದನ್ನು ಅನುಸರಿಸುವಂತೆ ಮಾಡಿದರು.

ಅವರ ಅಹಿಂಸಾಚರಣೆ ಜೀವಿಗಳಿಗೆ ಮಾತ್ರ ಅನ್ವಯಿಸುವಂಥದಲ್ಲ. ಪ್ರಕೃತಿಯಲ್ಲಿನ ನಿರ್ಜೀವ ವಸ್ತುಗಳ ಮೇಲಿನ ದಬ್ಬಾಳಿಕೆಯೂ ಅವರ ದೃಷ್ಟಿಯಲ್ಲಿ ಹಿಂಸೆಯೇ ಆಗಿತ್ತು. ಪ್ರಕೃತಿಯನ್ನು ಧನ್ಯತಾ ಭಾವದಿಂದ ನೋಡಬೇಕೆನ್ನುವುದೇ ಅವರ ಉದ್ಧೇಶವಾಗಿತ್ತು.


ಪರಿಸರ ಸಂರಕ್ಷಣೆಯ ಆಲೋಚನೆ

ಅಭಿವೃದ್ಧಿ ಅಥವಾ ಪರಿಸರದ ಬಗೆಗಿನ ಗಾಂಧೀಜಿ ಆಲೋಚನೆಗಳು ಇಂದಿಗೆ ಅನ್ವಯಿಸಿ ಹೇಳುವುದಾದರೆ, ಅಭಿವೃದ್ಧಿಗಾಗಿ ನವೀಕರಣಗೊಳಿಸಬಹುದಾದ ಸಂಪನ್ಮೂಲಗಳ ಕನಿಷ್ಠ ಬಳಕೆ. ಗಾಂಧೀಜಿಯ ಈ ಆಲೋಚನೆ ಪರಿಸರ ಸಂರಕ್ಷಣೆಯ ಬಗೆಗೆ ಅಲ್ಲದೆ ಪರಿಸರದ ಬಗೆಗಿನ ಧನ್ಯತಾ ಭಾವನೆಯಿಂದಲೇ ಆಗಿದ್ದರೂ ಅದು ಪರಿಸರ ಸಂರಕ್ಷಣೆಯ ಆಲೋಚನೆಯೇ ಆಗಿದೆ.

ಗಾಂಧೀಜಿ ಪರಿಸರದ ಬಗೆಗೆ ಒಮ್ಮೆ ಹೀಗೆ ಹೇಳಿದ್ದರು. 'ನನಗೆ ಪ್ರಕೃತಿಯದಲ್ಲದೆ ಮತ್ತಾವುದರ ಸ್ಫೂರ್ತಿಯೂ ಬೇಡ. ಆಕೆ ನನ್ನನ್ನೆಂದೂ ನಿರಾಶಳನ್ನಾಗಿಸಿಲ್ಲ. ಆಕೆಯಲ್ಲಿ ಎಂಥದೋ ನಿಗೂಢತೆಯಿದೆ. ಅಚ್ಚರಿಯಿದೆ. ಆನಂದ ಪರವಶತೆಗೆ ಕರೆದೊಯ್ಯುವ ಸಾಮರ್ಥ್ಯವಿದೆ ಅದರ ಮುಂದೆ ಮಾನವ ಎಷ್ಟು ಗೌಣ? ಸುಂದರ ತಾರೆಗಳ ಕತ್ತಲ ಆಗಸವನ್ನು ನೋಡುತ್ತಾ ದಣಿಯದೆ ಅದೆಷ್ಟು ಸಾರಿ ಮೈರೆತಿಲ್ಲ! ನನ್ನ ದೃಷ್ಟಿಯಲ್ಲಿ ಕಲೆ ಅತ್ಯುತ್ತಮವಾಗಬೇಕಾದರೆ ಅದೂ ಸಹ ಪ್ರಕೃತಿಯ ಸೌಂಧರ್ಯದಂತೆ ಸಾರ್ವತ್ರಿಕವಾಗಿರಬೇಕು. ಸರಳವಾಗಿರಬೇಕು ಹಾಗೂ ಅಭಿವ್ಯಕ್ತಿಯಲ್ಲಿ ನೇರವಾಗಿರಬೇಕು ಪ್ರಕೃತಿಯ ಭಾಷೆಯಂತೆ ನಾನು ಸೂರ್ಯಾಸ್ತದ ಅದ್ಭುತವನ್ನು ಅಥವಾ ಚಂದ್ರನ ಸೌಂದರ್ಯವನ್ನು ಮೆಚ್ಚಿದಲ್ಲಿ, ನನ್ನ ಆತ್ಮ ಸೃಷ್ಟಿಕರ್ತನ ಆರಾಧನೆಯಲ್ಲಿ ಮೈಮರೆಯುತ್ತದೆ.'

ಮೂಲ ಸಮಸ್ಯೆಗಳಿಗೆ ಪರಿಹಾರ

ಭಾರತದ ಅಭಿವೃದ್ಧಿಯ ಕನಸನ್ನು ಗಾಂಧೀಜಿ ಮತ್ತು ನೆಹರು ಇಬ್ಬರೂ ಹೊಂದಿದ್ದರು. ಆದರೆ ಅದರ ಸಾಕಾರದ ಹಾದಿಯಲ್ಲಿ ತುಂಬ ವ್ಯತ್ಯಾಸವಿತ್ತು. 1945ರಲ್ಲಿ ಗಾಂಧೀಜಿ ಅವರು ನೆಹರೂ ಅವರಿಗೆ ಬರೆದ ಪತ್ರವೊಂದರಲ್ಲಿ ಭಾರತವು ನಿಜವಾದ ಸ್ವಾತಂತ್ರ್ಯವನ್ನು ಮತ್ತು ಆ ಮೂಲಕ ಇಡೀ ಜಗತ್ತು ಸ್ವಾತಂತ್ರ್ಯವನ್ನು ಗಳಿಸಬೇಕಾದರೆ, ಜನರೆಲ್ಲ ಇಂದಲ್ಲ ನಾಳೆ ಗ್ರಾಮಗಳಲ್ಲಿ ಬದುಕಬೇಕಲ್ಲದೆ ಪಟ್ಟಣಗಳಲ್ಲಿ ಅಲ್ಲ. ಗುಡಿಸಲುಗಳಲ್ಲದೆ ಅರಮನೆಗಳಲ್ಲಲ್ಲ ಎಂಬ ಸತ್ಯವನ್ನು ಮನಗಾಣಬೇಕು. ಇದರಲ್ಲಿ ನನಗೆ ಸಂಪೂರ್ಣವಾದ ವಿಶ್ವಾಸವಿದೆ.ಪಟ್ಟಣ ಮತ್ತು ಅರಮನೆಗಳಲ್ಲಿ ಕೋಟ್ಯಾಂತರ ಜನರು ಸಹಬಾಳ್ವೆ,



113 ವರ್ಷದ ಈ ಅಜ್ಜಿ ಕೊರೋನಾ ಮಣಿಸಿದ್ದು ಹೇಗೆ?

ಸ್ಪೇನ್‌ನಲ್ಲಿ ವಾಸವಾಗಿರೋ 113 ವರ್ಷ ವಯಸ್ಸಿನ ಅಜ್ಜಿ ಮರಿಯಾ ಕೊರೋನಾ ಬಂದೂ ಬಚಾವ್ ಆಗಿದ್ದಾಳೆ. ಅಕ್ಕಪಕ್ಕದ ಮನೆಗಳಲ್ಲೆಲ್ಲ ಚಿಕ್ಕ ವಯಸ್ಸಿನವರು ಕೋವಿಡ್ ದಾಳಿಗೆ ಸಾವನ್ನಪ್ಪಿದ್ದಾರೆ. ಆದರೆ ಕೊರೋನಾಕ್ಕೆ ಈಕೆಯನ್ನು ಅಲುಗಾಡಿಸಲಾಗಿಲ್ಲ. ಇದೆಲ್ಲ ಹೇಗೆ ಸಾಧ್ಯವಾಯಿತು. ಅಂದರೆ, ಉತ್ತಮ ಆಯೋಗ್ಯದಿಂದ ಅಂತಾರೆ ಅಜ್ಜಿ. ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಈಕೆ ಹನ್ನೊಂದರ ಬಾಲೆ. ಆಗ ಇವಳಿಗೆ ಸ್ಪಾನಿಷ್ ಫ್ಲೂ ಸೋಂಕು ತಗುಲಿತ್ತು. ಆಗಲೂ ಪ್ರಾಣಾಪಾಯವಾಗದೇ ಉಳಿದುಕೊಂಡಿದ್ದಳು. ಕೊರೋನಾ ಪಾಸಿಟಿವ್ ಬಂದಾಗ ಈಕೆ ಮನೆಯಲ್ಲೇ ಐಸೊಲೇಶನ್ ಮಾಡ್ತೀನಿ ಅಂದಳು ಹಾಗೆ ಈಕೆಯ ರೂಮ್‌ನಲ್ಲೇ ವೈದ್ಯರ ಸಹಕಾರದೊಂದಿಗೆ ಐಸೊಲೇಶನ್ ಮುಗಿಸಿ ನಿರಾಳ ನಗೆ ಬೀರುತ್ತಿದ್ದಾಳೆ. ಆಮೇಲಿನ ಕೊರೋನಾ ಟೆಸ್ಟ್‌ನಲ್ಲಿ ರಿಸಲ್ಟ್ ನೆಗಟಿವ್ ಬಂದಿದೆ.

ನೆಮ್ಮದಿಯಿಂದ ಬದುಕಲಾರರು. ಅಲ್ಲಿ ಹಿಂಸೆ ಮತ್ತು ಅಸತ್ಯದ ಆಚರಣೆ ಬಿಟ್ಟರೆ ಅವರಿಗೆ ಅನ್ಯಮಾರ್ಗವಿಲ್ಲ. ಸತ್ಯ ಮತ್ತು ಅಹಿಂಸೆಗಳಲ್ಲದಿದ್ದರೆ ಮನುಕುಲದ ವಿನಾಶ ಖಂಡಿತ. ಗ್ರಾಮೀಣ ಬದುಕಿನ ಸರಳತೆಯಲ್ಲಿ ಸತ್ಯ ಮತ್ತು ಅಹಿಂಸೆಗಳ ಸಾಕ್ಷಾತ್ಕಾರ ಸಾಧ್ಯ. ಅಂಥ ಸರಳತೆಯನ್ನು ಚರಕ ಮತ್ತು ಅದು ಪ್ರತಿನಿಧಿಸುವ ಎಲ್ಲ ಅಂಶಗಳಲ್ಲಿಯೂ ಕಾಣಬಹುದು. ಜಗತ್ತು ಇಂದು ಅಡ್ಡದಾರಿ ಹಿಡಿದಿದ್ದರೆ ನಾವು ಧೃತಿಗೆಡಬಾರದು. ಭಾರತವು ಸಹ ಜ್ವಾಲೆಯ ಕುಡಿಗೆ ಆಕರ್ಷಿತವಾಗಿ ಅದನ್ನು ಸುತ್ತುತ್ತಾ ತನ್ನನ್ನೇ ಸುಟ್ಟುಕೊಳ್ಳುವ ಪತಂಗದ ರೀತಿಯಲ್ಲಿ ಅದೇ ದಾರಿಯನ್ನು ಹಿಡಿಯಬಹುದು ಆದರೆ, ಅಂಥ ದುರಂತದಿಂದ ಭಾರತವನ್ನು ಆ ಮೂಲಕ ಇಡೀ ಜಗತ್ತನ್ನು ರಕ್ಷಿಸಲು ನನ್ನ ಕೊನೆಯುಸಿರಿನವರೆಗೂ ಪ್ರಯತ್ನಿಸುವುದು ನನ್ನ ಕರ್ತವ್ಯ. ನನ್ನ ಮಾತಿನ ಸಾರಾಂಶವಿಷ್ಟೆ. ಮಾನವ ತನ್ನ ನಿಜ ಅಗತ್ಯಗಳಿಗೆ ತೃಪ್ತಿಪಟ್ಟು ಸ್ವಾವಲಂಬಿಯಾಗಬೇಕು. ಅಂಥ ನಿಯಂತ್ರಣವಿಲ್ಲದಿದ್ದರೆ ಆತ ತನ್ನನ್ನು ತಾನು ರಕ್ಷಿಕೊಳ್ಳಲಾರ. ಎಂದು ಬರೆದಿದ್ದರು. ಇದು ಅಭಿವೃದ್ಧಿ ಕುರಿತ ಗಾಂಧೀಜಿಯ ಹಾದಿ.

ನೆಹರೂ ಕಂಡಿದ್ದ ಹಾದಿ

ಆ ಪತ್ರಕ್ಕೆ ಉತ್ತರವಾಗಿ ನೆಹರೂ 'ಇಂಥ ಸಮಾಜದ ಸಾಕ್ಷಾತ್ಕಾರದ ವಿಧಾನ ಮತ್ತು ಅದು ಒಳಗೊಳ್ಳಬೇಕಿರುವ ವಿಷಯಗಳು ಯಾವುವು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಒಂದು ಗ್ರಾಮವು ಸತ್ಯ ಮತ್ತು ಅಹಿಂಸೆಗಳನ್ನೆ ಒಳಗೊಂಡಿರಬೇಕು ಎಂಬುದು ನನಗೆ ಅರ್ಥವಾಗದು. ಸಾಮಾನ್ಯ ಅಭಿಪ್ರಾಯವೆಂದರೆ, ಒಂದು ಗ್ರಾಮ ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿದೆ. ಒಂದು ಹಿಂದುಳಿದ ಪರಿಸರದಿಂದ ಯಾವುದೇ ಪ್ರಗತಿ ಸಾಧನೆ ಅಸಾಧ್ಯ. ಸಂಕುಚಿತ ಮನೋಭಾವನೆಯ ಜನರು ಹೆಚ್ಚು ಸುಳ್ಳರೂ ಹಿಂಸಾವಾದಿಗಳೂ ಆಗಿರುವ ಸಾಧ್ಯತೆಯಿದೆ. ಆಹಾರ, ಉಡುಪು, ವಸತಿ, ಶಿಕ್ಷಣ ನೈರ್ಮಲ್ಯ ಇತ್ಯಾದಿಗಳನ್ನು ಒದಗಿಸುವ ಗುರಿಗಳನ್ನು ನಾವು ಹಮ್ಮಿಕೊಳ್ಳಬೇಕು. ಈ ಉದ್ದೇಶದಿಂದ ಅವುಗಳನ್ನು ತ್ವರಿತಗತಿಯಲ್ಲಿ ನಿರ್ದಿಷ್ಟವಾಗಿ ಸಾಧಿಸುವ ಹಾದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಆಧುನಿಕ ಸಾರಿಗೆ ವಿಧಾನಗಳು ಮತ್ತು ಇತರೆ ಆಧುನಿಕ ಅಭಿವೃದ್ಧಿಗಳು ನಿರಂತರವಾಗಿ ಬೆಳೆಯ ಬೇಕು. ಇವುಗಳನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ. ಇವೆಲ್ಲ ಬಡ ಗ್ರಾಮುಗಳ ಚೌಕಟ್ಟಿನಲ್ಲಿ ಹೇಗೆ ಹೊಂದಿಕೊಳ್ಳುತ್ತವೆ? ಬೃಹತ್ ಅಥವಾ ಲಘು ಉದ್ದಿಮೆಗಳನ್ನು ಸಾಧ್ಯವಾದಷ್ಟು ವಿಕೇಂದ್ರೀಕರಿಸಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ ವಿದ್ಯುತ್‌ನಿಂದ ಇದು ಸಾಧ್ಯ. ಎರಡು ಬಗೆಯ ಅರ್ಥವ್ಯವಸ್ಥೆಗಳಿದ್ದರೆ, ಒಂದನ್ನೊಂದು ಮೆಟ್ಟನಿಲ್ಲಬಹುದು ಅಥವಾ ಎರಡರ ನಡುವೆ ಸಂಘರ್ಷ ಸಾಧ್ಯ ಇದು ನೆಹರೂ ಕಂಡಿದ್ದ ಹಾದಿ.

ಕೈಗಾರಿಕೀಕರಣದ ಬಗ್ಗೆ ಗಾಂಧೀಜಿ, 'ಅದು ಮನುಕುಲಕ್ಕೇ ಶಾಪವಾಗುತ್ತದೆನ್ನುವ ಹೆದರಿಕೆ ನನಗಿದೆ. ಕೈಗಾರಿಕೀಕರಣ ವ್ಯಕ್ತಿಯೊಬ್ಬನ ದೋಚುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ವಿದೇಶಿ ಮಾರುಕಟ್ಟೆಯನ್ನು ಮತ್ತು ಸ್ಪರ್ಧಿಗಳಲ್ಲದಿರುವುದನ್ನು ಅವಲಂಭಿಸಿರುತ್ತದೆ. ಯಂತ್ರಗಳ ಕುರಿತಾಗಿ ನನ್ನ ಆಕ್ಷೇಪಕ್ಕೆ ಕಾರಣ ಈ ರಾಷ್ಟ್ರಗಳು ಇತರರನ್ನು ದೋಚುತ್ತಿರುವುದು ಯಂತ್ರಗಳಿಂದಾಗಿಯೇ. ಈ ದಿನ, ಬೆರಳಣಿಕೆಯಷ್ಟು ಜನ. ಲಕ್ಷಾಂತರ ಜನರ ಮೇಲೆ ಸವಾರಿ ಮಾಡಲು ಈ ಯಂತ್ರಗಳು ಸಹಾಯ ಮಾಡುತ್ತಿವೆ. ಇದರ ಹಿಂದೆ ಇರುವುದು ದುರಾಸೆಯೇ ಹೊರತು ಶ್ರಮ ಉಳಿಸುವ ಅಥವಾ ಶ್ರಮ ಕಡಿಮೆ ಮಾಡುವ ಉದಾತ್ತ ಮನೋಭವವಲ್ಲ. ಎಂದಿದ್ದರು. ಆದರೆ ಅವರು ಎಂದಿಗೂ ಯಂತ್ರ ಅಥವಾ ವಿಜ್ಞಾನ ವಿರೋಧಿಯಾಗಿರಲಿಲ್ಲ. ಆದರೆ ಅವರು ಎಂದಿಗೂ ಯಂತ್ರ ಅಥವಾ ವಿಜ್ಞಾ ವಿರೋಧಿಯಾಗಿರಲಿಲ್ಲ. ಆದರೆ ಅವು ಜನರ ಶೋಷಣೆಯ ಮಾಧ್ಯಮಗಳಾಗಿರಬಾರದು ಎನ್ನುತ್ತಿದ್ದರು.

ಅವರಿಗೆ ಪ್ರಕೃತಿ ಮತ್ತು ಮನುಕುಲ ಎರಡರ ಬಗೆಗೂ ಕಾಳಜಿಯಿತ್ತು. ಅವುಗಳ ಉನ್ನತಿಗೆ ಅವರು ಪ್ರೀತಿ ಪ್ರೇಮದ, ಶಾಂತಿಯ ಹಾಗೂ ಸಹಕಾರದ ಹಾದಿ ಆರಿಸಿದರು. ಏಕೆಂದರೆ ದ್ವೇಷ ಯುದ್ಧಗಳಿಗಿಂತ ಅವೇ ಹೆಚ್ಚು ಸುಸ್ಥಿರವಾದುವು 'ಮನುಕುಲವನ್ನು ಆಳುತ್ತಿರುವುದು ಪ್ರೀತಿಯ ನಿಯಮ. ಅದೇ ಹಿಂಸೆ ದ್ವೇಷಗಳೇ ರಾರಾಜಿಸಿದ್ದಿದ್ದರೆ ನಾವೆಂದೋ ಸಂಪೂರ್ಣ ನಿರ್ನಾಮವಾಗಿಬಿಡಬೇಕಿತ್ತು. ಆದರೂ ನಾಗರಿಕವೆಂದು ಕರೆಯುವ ಮನುಷ್ಯರು ಹಾಗೂ ದೇಶಗಳು ಸಮಾಜದ ತಳಹದಿಯೇ ಹಿಂಸೆಯೆನ್ನುವಂತೆ ನಡೆದುಕೊಳ್ಳುತ್ತಿರುವುದು ತೀರಾ ದುರಂತ ಎಂಬ ಆತಂಕ ವ್ಯಕ್ತಪಡಿಸಿದ್ದರು.

ಸೌಜನ್ಯ : ಪ್ರಜಾವಾಣಿ ದಿ. 04.06.2006



ಬೀದಿ ದೀಪದ ಕಥೆ

– ವಿ. ಹೇಮಂತಕುಮಾರ

ನಮ್ಮೂರು ಹಳ್ಳಿ ಇರಲಿ, ದಿಲ್ಲಿ ಇರಲಿ ನಮ್ಮೂರಿನಲ್ಲಿ ಬೀದಿ ದೀಪಗಳು ಇದ್ದೇ ಇರುತ್ತಲ್ಲವೇ ಈ ಬೀದಿ ದೀಪಗಳು ಬರಲುಕಾರಣನಾದ ಮಹಾಪುರುಷನ ಬಗ್ಗೆ ನಾವು ಎಂದಾದರೂ ಚಿಂತಿಸಿದ್ದೇವೆಯೇ? ಅವರು ಯಾರು ಗೊತ್ತೇ? ಅಮೆರಿಕದ ಫಿಲಿಡೆಲ್ಫಿಯಾದ ಬೆನ್ ಫ್ರಾಂಕ್ಲಿನ್ ಎಂಬುವರು. ಅವರೊಬ್ಬ ಪತ್ರಕರ್ತ, ಬರಹಗಾರ, ವಿಜ್ಞಾನಿ ಸಂಶೋಧಕ ಬಹುಮುಖ ಪ್ರತಿಭೆಯವರಾಗಿದ್ದ ಅವರು ತಮ್ಮ ಮನೆಯ ಮುಂದಿನ ರಸ್ತೆಗಳೆಲ್ಲ ರಾತ್ರಿಯ ಹೊತ್ತು ಕತ್ತಲೆಯಿಂದ ಕೂಡಿರುತ್ತಿದ್ದುದನ್ನು ಗಮನಿಸಿದರು. ಇದರ ಬಗ್ಗೆ ಏನಾದರೂ ಮಾಡಬೇಕೆಂದು ಪ್ರಾಂಕ್ಲಿನ್ ಅವರಿಗೆ ಅನಿಸಿತು. ಅವರು ನಗರ ಸಭೆಯವರಿಗೆ ಅರ್ಜಿ ಬರೆಯಲಿಲ್ಲ. ನಾಗರಿಕರಿಗೆ ಬುದ್ಧಿ ಹೇಳಲು ಹೋಗಲಿಲ್ಲ. ಅದರ ಬದಲು ಒಂದು ರಾತ್ರಿ ತಮ್ಮ ಮನೆಯ ಮುಂದೆ ಒಂದು ಉದ್ದನೆಯ ಕಬ್ಬಿಣದ ಕಂಬಿ ನೆಟ್ಟು ಲಾಟೀನನ್ನು ಹಚ್ಚಿದರು. ಅಂದಿನಿಂದ ಪ್ರತಿಸಂಜೆ ಲಾಟೀನನ್ನು ಕೆಳಗಿಳಿಸಿ ಹೊಸ ಬತ್ತಿಯನ್ನಿಟ್ಟು, ಎಣ್ಣೆ ತುಂಬಿಸಿ ದೀಪ ಹೊತ್ತಿಸಿ ಮತ್ತೆ ಕಂಬಕ್ಕೆ ಲಾಟೀನನ್ನು ಏರಿಸುತ್ತಿದ್ದರು.

ಮೊದಲು ಕೆಲವು ದಿನ ಅವರ ಸುತ್ತಮುತ್ತಲಿನವರಿಗೆ ಪ್ರಾಂಕ್ಲಿನ್ ಅವರ ಅಭ್ಯಾಸ ಹುಚ್ಚುತನವಾಗಿ ಕಾಣಿಸುತ್ತಿತ್ತು. ಆದರೆ ಲಾಟೀನಿನ ಬೆಳಕಿರುತ್ತಿದ್ದುದರಿಂದ ಜನ ಅವರ ಮನೆಯ ಮುಂದೆ ನಿರಾತಂಕವಾಗಿ ನಡೆದು ಹೋಗುತ್ತಿದ್ದರು. ಭರವಸೆ ಮೂಡಿಸುವ, ಸ್ನೇಹಮಯ ವಾತಾವರಣವಿರುತ್ತಿತ್ತು. ಕೆಲವೇ ದಿನಗಳಲ್ಲಿ ಅವರ ನೆರೆಹೊರೆಯವರು ತಮ್ಮ ಮನೆಯ ಮುಂದೆಯೂ ಲಾಟೀನು ಹಚ್ಚಿಡಲು ಪ್ರಾರಂಭಿಸಿದರು. ಇಡೀ ಬೀದಿ ಬೆಳಕಿನಿಂದ ಕೂಡಿರುತ್ತಿತ್ತು. ಇದನ್ನು ಗಮನಿಸಿದ ಉಳಿದ ಬೀದಿಯವರೂ ಒಬ್ಬೊಬ್ಬರಾಗಿ ಇವರನ್ನು ಅನುಸರಿಸತೊಡಗಿದರು. ಕೆಲವೇ ದಿನಗಳಲ್ಲಿ ಲಾಟೀನ್ ಚಳವಳಿ ಬೀದಿ ಬೀದಿಗೆ ಹಬ್ಬಿತು. ರಾತ್ರಿಯ ಹೊತ್ತು ಇಡೀ ಫಿಲಿಡೆಲ್ಫಿಯಾದ ನಗರಗಳು ಬೆಳಕಿನಿಂದ ಕಂಗೊಳಿಸುತ್ತಿದ್ದವು. ನಿಧಾನವಾಗಿ ಉಳಿದ ನಗರಗಳಿಗೂ ಇದು ಹಬ್ಬಿತು. ಮುಂದೆ ನಗರ ಸಭೆಗಳ ಕಾರ್ಯಕ್ರಮ ಪಟ್ಟಿಯಲ್ಲಿ ಬೀದಿ ದೀಪಗಳು ಸೇರಿಕೊಂಡಿವೆ. ಒಬ್ಬ ಪ್ರಜ್ಞಾವಂತ ನಾಗರಿಕ ಪ್ರಾರಂಭಿಸಿದ ಸುಸಂಪ್ರದಾಯದಿಂದ ಇಡೀ ರಾಷ್ಟ್ರದಲ್ಲಿ ಬೀದಿ ದೀಪ ಹಚ್ಚುವ ಪದ್ಧತಿ ಪ್ರಾರಂಭವಾಯಿತು. ಪ್ರಾಂಕ್ಲಿನ್ ತಮ್ಮ 84ನೇ ವಯಸ್ಸಿನಲ್ಲಿ 1790ನೇ ಇಸವಿಯಲ್ಲಿ ತೀರಿಕೊಂಡವರಾದರೂ ಇಂದಿಗೂ ಅವರು ಜನಮನದಲ್ಲಿ ಉಳಿದಿದ್ದಾರೆ.

ಸೌಜನ್ಯ : ಸುಧಾ, 20 ಜೂನ್ 2019

ಸಂಗ್ರಹ : ಪ್ರಶಾಂತ್ ವಿಜಯಪುರ –

ಕರೋನಾ ಮುಕ್ತ ಜೀವನ ಮತ್ತು ಸಮಾಜದ ಮಾರ್ಗ ತೋರಿಸುವ ಬಾಪು ಪ್ರಪಂಚ ಸಂಚಿಕೆಗೆ ಆತ್ಮೀಯ ಶುಭಾಶಯಗಳು

ಸದಾನಂದ

ಸದಸ್ಯರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

A knock on the door shortly after 3 am woek Laura Wine. She was needed at the hospital immediately. After dressing, she moved quickly along the path towards the lights of the Lassa Mission Hosipital, where she was head of obstetrics. As Laura walked, she realized that a recently developed pain in her back was much worse.

Lassa, a village of thatched-roof mud huts with some 1,000 inhabitants, is typical of the remote towns in north-east Nigeria. Lying at the foot of the mountains that separate Nigeria from the Cameroons, it is practically inaccessible for half the year when the rains come.

Here, in the 1920's, the church of the Bretheren had built a 'mission to serve the Hausa, Fulant, Margi, Higi and other tribes.

Soon after dawn, a baby was born to a villager, and Laura Wine returned to her house to rest. As 65 she had reitred as a nurse in America, and had since spent four years in the Nigerian bush. She usually moved with a springhtlines which belied her age. Now, however, the nagging pain in her back slowed her down.

To the surprise of her friends, she did not attend church that morning of Sunday, January 19, 1969. But afterwards, John and Esther Hamer he was the only doctor at the mission station were relieved to see walking towards their house for her usual Sunday meal with them,

Halfway through dinner, word came that a tribeswoman had jusy delivered a baby beside a dusty road leading to Lassa. Laura rose from the table, but the pain in her back forced her down into her chain again. Esther insisted on taking the assignment, and urged her friend to go home. Uncharacteristically, Laura agreed.

By evening, Laura felt somewhat better and nearly everyone, including herself, attributed the trouble to a touch of arthritis. Next morning, she went to the short wave radio in the hospital office to take her regular turn monitoring and reporting the bulletins from the various mission stations of the Church of the Brethern scattered throughout the busth in north-east Nigeria. But her voice was noticeably weaker as the annunciated the usual: "Brethern Lassa, calling Brethern Jos. Over to Jos... Later, she mentioned to Esther Hamer that she had a sore throat. Dr hamer took a look, but saw nothing abnormal.

On Tuesday morning, Dr Hamer checked her again. Far back in her throat and on the inside of her cheeks wer grooups of yellowish ulcers surrounded by haloes. Her temperature was just under 38 degrees centigrade (100 F.) Dr Hamer prescribed procaine penicillin and chloroquine, an antimalarial drug.

By Wednesday, January 22, there was no improvement, and Hamer decided to get to the root of the illness. He took a blood smear, plus urine and stool specimens. A high white blood count would be evidence of bacterial infection. Instead, the count was low, a condition known as leucopaenia, which occurs in many diseases. The urine test was likewise inconclusive. The low volume, however, was disturbing, and Dr. Hamer urged Laura to drink as much fluid as she could.

That evening, her temperature nudged up to 38.5 degrees centigrade (more than 101F.), and a small, purpleblue mark appeared on her left arm. John Hamer was baffled.

On Friday morning, he got up before dawn and pored through a back file of medical journals. As the sun came up, he began to think moe and more about the possibility of an unusually stubborn virus. By noon, Laura's speech was extremely difficult to understand. There seemed to be a kidney collapse; her urine output had dwindled to almost nothing. She could barely swallow; her mouth was dry and caked.

Dr Hamer decided to move her to a better-equipped hospital at Jos as fast as possible. But Jos was 640 km away over terrible roads, and so he arranged to

have her flown out by small plane from Mubi, 80 kilometers away.

They set off early on Saturday morning in the mission Land Rover. Dr Hamer would drive, while Esther attended Laura in the back of the car. Laura was now having extreme difficulty in breathing. As they moved her to the Land Rover, she convulsed, and her skin sudden ly turned blue. Not enough oxygen was getting to the blood. Quickly Dr Hamer brought an oxygen mask to her face, and she recovered. As they lifted her into the car, she went into convulsions again, and once more the oxygen mask was put to her face. There now appeared to be signs of cardiac failure.

John Hamer drove as fast as he dared, trying to dodge the enormous pot-holes. But, at any speed, it was impossible to keep the Land Rover from pitching and yawing over the rough road. Esther and her patient were tossed around in the back seat.

The Land Rover pulled into the Mubi airstrip at 11 o'clock, and soon Laura was a loft. She was conscious, but unable to speak. There was practically no oxygen left in the bottle, and little could be done in the crowded cockpit it she convulsed again.

As the plane bearing Laura approached Jos, a bed for her in the Bingham Memorial Hospital was being prepared by Dr Jeanette Troup, then the only full-time hospital doctor. Dr Jeanette, as she was called, met the plane and brought Laura to the hospital, administering oxygen all the way.

Once they were at the hospital, laboratory tests were begun immediately. The signs now suggested massive internal haemorrhaging

Esther Hamer was beside her the next morning when Laura stirred restively in her bed. Sunday services had begun, and the hymn "A Mighty Fortress Is Our God" sounded across the courtyard.

A wan smile appeared on Laura's face. Without opening her cyes, she said to Esther: "Oh, I'm so glad the hymns are in English today!"Then, realizing that in distant Lassa the services were always in Hausa or Margi, she asked, "But where am I?"

She convulsed again that after- noon. There was no more urine out put. She suffered from shock, and by 9.30 p.m. she was dead. On Monday afternoon, she was buried in a remote mission compound.

The effect of her death was ultimately to be far different from that of countless others who have died serving in foreign lands. Laura Wine's death would soon reach from Africa across the Atlantic to the United States in a series of mys terious and frightening incidents.

DEADLY PUZZLE

CHARLOTTE Shaw, a nurse in fortis, worked at the Bingham Memorial Hospital in Jos. The morning of Laura Wine's arrival she had been in her garden cutting bouquet of roses to take to the hospital with her that evening. Reaching high for a particularly striking she pricked her finger on a thorn. She went back to her house, washed the wound off and dabbed it with antiseptic. It soon clotted, and she promptly forgot about it.

Courtacy : Reader's Digest - January, 1976

To be continued...

ಉತ್ತಮ ಗುಣಮಟ್ಟದ ಫೆಕ್ಸ್ ಬ್ಯಾನರ್, ಸೈನ್ ಬೋರ್ಡ

ಜಾಹಿರಾತು ಪಲಕಗಳು ಔಟ್ ಡೋರ್ ಜಾಹಿರಾತು ಫಲಕಗಳು

ಎಲ್ಲಾ ತರದ ಜಾಹಿರಾತು ಸೌಲಭ್ಯಗಳಿಗೆ ಸಂಪರ್ಕಿಸಿ : "ಆಡ್ ಪ್ರಿಂಟ್ಸ್"

ಬಾಪು ಪ್ರಪಂಚ ಸಂಚಿಕೆಗೆ ಶುಭಹಾರೈಕೆಗಳು



ಶ್ರೀಯುತ ನಂದೀಶ್

ಸದಸ್ಯರು, ಕರ್ನಾಟಕ ಗಾಂಧಿ ಸ್ಮಾರಕ ನಿದಿ

. Ad Prints

709, 73rd Cross, 6th Block, Rajajinagar

Bangalore - 560 010.

Ph : 080-42092445, 9845379333


ನವ ಭಾರತ ನಿರ್ಮಾಪಕರು

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಕೈಗಾರಿಕೆ ಹಾಗೂ ಕಾರ್ಮಿಕರು

(ಏಪ್ರಿಲ್ 14, 1891 – 6 ಡಿಸೆಂಬರ್ 1956)

ಇಂದಿರಾ ಕೃಷ್ಣಪ್ಪ



ಪ್ರಜೆಗಳ ಆರ್ಥಿಕ ಯೋಗಕ್ಷೇಮದ ಮೇಲೆ ಸಾಮಾಜಿಕ ಧಾರ್ಮಿಕ ತಾರತಮ್ಯ ಹಾಗೂ ಪ್ರತ್ಯೇಕೀಕರಣಗಳು ದುಡಿಯುವ ವರ್ಗದವರ ಮೇಲೆ ಉಂಟು ಮಾಡುವ ದುಷ್ಪರಿಣಾಮಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ ಜಗತ್ತಿನ ಕೆಲವೇ ಆರ್ಥಿಕ ಚಿಂತಕರಲ್ಲಿ ಅಂಬೇಡ್ಕರ್ ಅವರು ಪ್ರಮುಖರಾಗಿದ್ದಾರೆ. ಜನರಲ್ಲಿನ ಪ್ರತ್ಯೇಕೀಕರಣದ ನೀತಿ, ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಶತಮಾನದಿಂದ ರೂಢಿಯಲ್ಲಿರುವ ಈ ಶ್ರೇಣೀಕರಣ, ಚಲನೆ ರಹಿತ ವೃತ್ತಿ, "ಸ್ವಾವಲಂಬನೆ ರಹಿತ, ಸಮಾನತೆ ರಹಿತ ಬಡಜನರನ್ನು" ಸೃಷ್ಟಿಸಿದೆ. ಇದರಿಂದ ಬಡತನ, ನಿರುದ್ಯೋಗ, ಅರೆಉದ್ಯೋಗಗಳಿಂದ ಅಭಿವೃದ್ಧಿ ಪೂರ್ಣ ಪ್ರಮಾಣದಾಗಿರುವುದಿಲ್ಲ ಎಂದರು. ಪುರಾತನ ರೋಮನ್ನಲ್ಲಿದ್ದ ಗುಲಾಮಿತನ ಹಾಗೂ ಭಾರತೀಯ ಗುಲಾಮಿತನಕ್ಕೂ ತುಲನಾತ್ಮಕ ಅಧ್ಯಯನ ನಡೆಸಿದರು. ಇವೆರಡನ್ನು ದಲಿತ ಕಾರ್ಮಿಕರ ಸ್ಥಿತಿ, ಗುಲಾಮಗಿರಿಗಿಂತ ಕೀಳಾಗಿರುವುದನ್ನೂ ಮತ್ತು ಕ್ರೂರವಾಗಿರುವುದನ್ನು ಸಮಾಜದ ಮುಂದೆ ಅನಾವರಣ ಮಾಡಿದರು.

- ದಲಿತ ಕೃಷಿಭೂಮಿ ಹೊಂದುವಂತೆಯೇ ಇಲ್ಲ. ಕೆಲವುಕಡೆ ಉದಾ:– ಪಂಜಾಬ್ ಪ್ರಾಂತ್ಯದಲ್ಲಿ, ಭೂಮಿ ಒಕ್ಕಲೆಬ್ಬಿಸುವ ಕಾಯಿದೆ ಇದ್ದು, ಅದು ಯಾವ್ಯಾವ ಜಾತಿಗಳು ಭೂಮಿಯನ್ನು ಖರೀದಿಸಬಹುದೆಂದು, ಒಂದು ಪಟ್ಟಿಯನ್ನೇ ಹೊಂದಿದೆ. ಈ ಪಟ್ಟಿಯಲ್ಲಿ ಅಸ್ಪೃಶ್ಯರ ಹೆಸರಿಲ್ಲ. ಆದ್ದರಿಂದ ಅವರು, ಭೂಮಾಲೀಕರು, ಎಸೆಯುವಷ್ಟು ಕೂಲಿಗೆ ಕೆಲಸ ಮಾಡಬೇಕು.



- ಅವರ ಕೂಲಿ, ಬಹಳಷ್ಟು ಕಡೆ ದವಸಧಾನ್ಯದ ರೂಪದಲ್ಲಿ ಕೊಡಲಾಗುತ್ತಿತ್ತು. ಉತ್ತರ ಪ್ರದೇಶದ ಕೆಲವು ಕಡೆ ಇದಕ್ಕೆ "ಗೋಬರಾಹ" ಎನ್ನುವರು ಅರ್ಥ ಹಕ್ಕಿನ ಧಾನ್ಯ ಅಥವ ಪ್ರಾಣಿಯೊಂದರ ಸಗಣಿಯಲ್ಲಿರುವ ಧಾನ್ಯ. ಧಾನ್ಯಗಳ ಒಕ್ಕಣೆ ಕಾಲದಲ್ಲಿ ದನಗಳು ತಿನ್ನುವ ಹುಲ್ಲಿನಲ್ಲಿರುವ ಕಾಳುಗಳು ಮರುದಿನ ಸಗಣಿಯಿಂದ ಹೊರಬಂದಾಗ ಅವುಗಳನ್ನು ಬೇರ್ಪಡಿಸಿ, ದಲಿತ ಕಾರ್ಮಿಕರಿಗೆ ಕೂಲಿಯಾಗಿ ನೀಡಲಾಗುತ್ತಿತ್ತೆಂಬ ಅತ್ಯಂತ "ನೀಚ ಕೂಲಿ ವ್ಯವಸ್ಥೆ"ಯನ್ನು ವಿವರಿಸಿದ್ದರು.
- ದಲಿತ ಕಾರ್ಮಿಕರ (ಋತುಮಾನ ಸಂಬಂಧಿತ ಕೃಷಿಕಾರಣದಿಂದ) ಅರೆ ಉದ್ಯೋಗದ ಕಾರಣದಿಂದ, ಮೇಲ್ ಸಮುದಾಯದ ಮನೆಯಲ್ಲಿ ವೈಯಕ್ತಿಕ ಸೇವೆಗಾಗಿ ಬಳಸಿಕೊಳ್ಳುತ್ತಾ "ಜೀತ ಪದ್ಧತಿ"ಯಂಥ ಕ್ರೂರ ಸಾಮಾಜಿಕ ವ್ಯವಸ್ಥೆ ಬೆಳೆದು ಬಂದದ್ದನ್ನು ಮುಂದಿಟ್ಟರು.
- ನಿರುದ್ಯೋಗ – ಅರೆ ನಿರುದ್ಯೋಗ, ಮತ್ತು ಸಾಮ್ರಾಜ್ಯಶಾಹಿತ್ವವನ್ನು ಬ್ರಿಟಿಷರು ಭಾರತದಲ್ಲಿ ಯಾಥಾವತ್ ಮುಂದುವರಿಯುವಂತೆ ಮಾಡಿದ್ದಾರೆ. ಭಾರತದಲ್ಲಿ ವಾಣಿಜ್ಯ ಕೈಗಾರಿಕೆಗಳು ಅಭಿವೃದ್ಧಿ ಹೊಂದದ ವ್ಯವಸ್ಥೆ ರೂಪಿಸಿದ್ದಾರೆ. ಎಂದು ಬ್ರಿಟಿಷರ 100 ವರ್ಷಗಳ ಅವ್ಯವಸ್ಥೆಯ ರಾಜ್ಯಾಡಳಿತದಲ್ಲಿ 21 ಕ್ಷಾಮಗಳು, 2ಕೋಟಿ 15 ಲಕ್ಷ ಜನರ ಸಾವು, ವರ್ಷವಾರು ಅಂಕಿ ಅಂಶಗಳನ್ನು ತೆರೆದಿಟ್ಟು ಭಾರತೀಯರನ್ನು ಬಡತನದ ಕೂಪಕ್ಕೆ ತಳ್ಳಿದೆ ಎಂದರು.



- ಆದ್ದರಿಂದ ದುಂಡು ಮೇಜಿನ ಪರಿಷತ್ತಿನಲ್ಲಿ ಮತ್ತು ಶಾಸಕಾಂಗದ ಎರಡೂ ಸಭೆಗಳಲ್ಲಿ ನಿಮ್ನವರ್ಗದವರ ಪ್ರಾತಿನಿಧ್ಯದೊಂದಿಗೆ, ಅಲ್ಪಸಂಖ್ಯಾತರಿಗೆ, ಭೂ

ಹಿಡುವಳಿದಾರರಿಗೆ, ವಾಣಿಜ್ಯೋದ್ಯಮಿಗಳಿಗೆ ಮತ್ತು ಭಾರತೀಯ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಅಂಬೇಡ್ಕರ್ ಅವರು ವಾದಿಸಿದರು.

ಅಂಬೇಡ್ಕರ್ ಅವರು ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸಂಘಟಿಸಿದರು. ಬಂಡವಾಳಶಾಹಿ ಮತ್ತು ಪುರೋಹಿತಶಾಹಿ ಪದ್ಧತಿಗಳು ಕಾರ್ಮಿಕ ವರ್ಗದ ಶತ್ರುಗಳೆಂದು ಪರಿಭಾವಿಸಿದ್ದರು. ಬಾಂಬೆ ಮತ್ತು ಅಹಮದಾಬಾದ್‌ಗಳ ಗಿರಣಿಗಳಲ್ಲಿ ನಿಮ್ನವರ್ಗದ ಕಾರ್ಮಿಕರನ್ನು ಪ್ರತ್ಯೇಕಿಕರಣ ಮತ್ತು ಅಪಮಾನಕ್ಕೀಡುಮಾಡುವುದನ್ನು ಕಣ್ಣಾರೆ ಕಂಡಿದ್ದರು. ರೈಲ್ವೇ ನಿಮ್ನವರ್ಗದ ಸಮ್ಮೇಳನದಲ್ಲಿ (1938 ಫೆಬ್ರವರಿ 12) ಕೈಗಾರಿಕೆಗಳಲ್ಲಿನ ಅಸ್ಪೃಶ್ಯತೆಯನ್ನು ಎಳೆಎಳೆಯಾಗಿ ತೆರೆದಿಟ್ಟರು. ಗಿರಣಿಗಳಲ್ಲಿ ನಡೆಯುವ ಅಸ್ಪೃಶ್ಯತೆ ಹಾಗೂ ರೈಲ್ವೆಯಲ್ಲಿ ದಲಿತ ಕಾರ್ಮಿಕರು ಜೀವಮಾನವಿಡಿ ಗ್ಯಾಂಗ್‌ಮನ್ ಗಳಾಗಿ ಮಾತ್ರ ಕೆಲಸ ಮಾಡಬೇಕು. ಸ್ಟೇಶನ್ ಮಾಸ್ಟರ್ ಮನೆಯಲ್ಲಿಯೂ ಕೆಲಸ ಮಾಡಬೇಕು. ರೈಲ್ವೆ ಕಾರ್ಖಾನೆಯಲ್ಲಿ ಮೆಕ್ಯಾನಿಕ್, ಮೇಸ್ತ್ರಿ, ಪೋರ್‌ಮನ್, ಚಾರ್ಜ್‌ಮನ್ ಆಗಿ ನಿಮ್ನವರ್ಗದವರ ನೇಮಕಾತಿ ತೀರ ಅತ್ಯಲ್ಪ. ಇಲ್ಲವೇ ಇಲ್ಲ ಅನ್ನುವಷ್ಟರ ಮಟ್ಟಿಗೆ ಕೂಲಿಯಾಗಿ ಜನಿಸಿ ಕೂಲಿಯಾಗಿಯೇ ಬಾಳಬೇಕಾದ ಸ್ಥಿತಿ ಇದೆ. ಸಾರ್ವಜನಿಕ ಹಣಕಾಸಿನಿಂದ ನಡೆಯುವ ಈ ಕೈಗಾರಿಕೆಗಳು ಪ್ರಜೆಗಳಿಗೆ ಮುಕ್ತವಾಗಿ ತೆರದಿರಬೇಕು. ಮತ್ತು ಸಮಾನ ಕಾರ್ಮಿಕ ವ್ಯವಸ್ಥೆ ಇರಬೇಕೆಂದೂ ಒತ್ತಾಯಿಸಿದರು. ಮುಂಬಯಿಯ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ "ಕಾರ್ಮಿಕರ ಕಲ್ಪನೆಯ ಸಮಾನಾವಕಾಶದ ಪ್ರಜಾ ಸರ್ಕಾರ ತರಬೇಕೆಂದು ಕಾರ್ಮಿಕರ ಜೀವನವನ್ನು ನವೀಕರಿಸಲು, ನವಚೈತನ್ಯವನ್ನು ತುಂಬಲು, ಪರಿವರ್ತಿಸಲು ಸದಾ ಸಿದ್ಧರಿರಬೇಕೆಂದು ಕರೆ ನೀಡಿದರು.

ಅವರ ಸ್ವತಂತ್ರ ಕಾರ್ಮಿಕ ಪಕ್ಷ 1937ರಲ್ಲಿ ಮುಂಬೈ ಪ್ರಾಂತ್ಯದ ಚುನಾವಣೆಗಳಲ್ಲಿ ಸ್ಪರ್ಧಿಸಿ, 15 ಸದಸ್ಯರು ವಿಜೇತರಾದರು. 1938ರಲ್ಲಿ ಶಾಸನ ಸಭೆಯಲ್ಲಿ ಕೈಗಾರಿಕಾ ವಿವಾದಗಳ ಮಸೂದೆಯನ್ನು ಬಲವಾಗಿ ವಿರೋಧಿಸಿದರು. "ಕಾರ್ಮಿಕರು ಮುಷ್ಕರ ಹೂಡುವುದನ್ನು ನಿರ್ಬಂಧಿಸುವ ತಿದ್ದುಪಡಿಯನ್ನು ವಿರೋಧಿಸುತ್ತಾ, ಕಾರ್ಮಿಕರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬಾರದು. ಇದು ಅವರ ಅಮೂಲ್ಯವಾದ ಹಕ್ಕು" ಎಂದರು. ಮತ್ತು ಕಾರ್ಮಿಕ ಮುಂದಾಳುಗಳಲ್ಲಿ ಪ್ರಮುಖರಾದ ಡಾಂಗೆ, ರಣದಿವೆ, ಪ್ರಧಾನ್ ಅವರನ್ನೊಳಗೊಂಡಂತೆ ಪ್ರತಿಭಟನೆಯನ್ನು ಆಯೋಜಿಸಿದರು. ಅಲ್ಲಿ ಮಾತನಾಡುತ್ತಾ "ಬಂಡವಾಳಶಾಹಿ ಮತ್ತು ವಸಾಹತುಶಾಹಿ ವಿರುದ್ಧ ಏಕಕಾಲದಲ್ಲಿ ಹೋರಾಟ ನಡೆಸಬೇಕೆಂದರು". ಸಾಮಾಜಿಕ ಭದ್ರತಾ ಕಾಯ್ದೆ, ಕಾರ್ಮಿಕರ ದುಡಿಯುವ ವಾತಾವರಣ, ಸೌಲಭ್ಯಗಳ ಉತ್ತಮಪಡಿಸುವಿಕೆಗೆ ಕಾಯ್ದೆಗಳನ್ನು ರಚಿಸಲು ಕಾರಣರಾದರು. ಡಾ. ಅಂಬೇಡ್ಕರ್ ಅವರನ್ನು ಬ್ರಿಟಿಷ್ ಗೌರ್ನರ್ ಜನರಲ್ ಅವರ ಕಾರ್ಯಕಾರಿ ಸಮಿತಿಗೆ ಕಾರ್ಮಿಕ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. 1942 ರಿಂದ 1946ರ ವರೆಗಿನ ಈ ಅವಧಿಯಲ್ಲಿ ಡಾ. ಅಂಬೇಡ್ಕರ್ ಅವರು ಗಣಿ ಕೈಗಾರಿಕೆ ಮತ್ತು ಕಾರ್ಮಿಕ ಕಾಯ್ದೆಗಳನ್ನು ರೂಪಿಸಿದರು. ಹಲವು ಮಹತ್ತರ ಬದಲಾವಣೆಗೆ ಕಾರಣಕರ್ತರಾದರು. ಕಾರ್ಮಿಕರ ಸಮಸ್ಯೆಗಳೂ ಮತ್ತು ಕೈಗಾರಿಕಾ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು, ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಆಯೋಜಿಸಿದರು. ಉದ್ಯಮಿಗಳು, ಕಾರ್ಮಿಕರು ಮತ್ತು ಸರ್ಕಾರ ಈ ತ್ರಿಪಕ್ಷಗಳು ಸೇರಿ ಕಾರ್ಮಿಕ ಕಲ್ಯಾಣಗಳು ಹಾಗೂ ಸಾಮಾಜಿಕ ನ್ಯಾಯ ಸ್ಥಾಪನೆಗೆ ವೇದಿಕೆಯಾಗುವುದೆಂದು ತಿಳಿಸಿದರು. ಇದೊಂದು ನವೀನ ನೀತಿಯಾಗಿದ್ದು, ಸಮ್ಮೇಲನ ಈ ಕೆಳಕಂಡ ಕಾರ್ಮಿಕ ನೀತಿಯನ್ನು ಒತ್ತಾಯಿಸಿತು.

- ಏಕರೂಪ ಕಾರ್ಮಿಕ ಕಾನೂನು ರಚನೆ
- ಕೈಗಾರಿಕೋದ್ಯಮ ವ್ಯಾಜ್ಯಗಳ ಇತ್ಯರ್ಥಕ್ಕೆ ನ್ಯಾಯ ಮಂಡಳಿ
- ಕಾರ್ಮಿಕರ ವಿಚಾರ ವಿನಿಯಮಕ್ಕೆ ಅಖಿಲ ಭಾರತ ಮಟ್ಟದ ವೇದಿಕೆ.


ನಂತರ 1943ರಲ್ಲಿ (ಸೆಪ್ಟಂಬರ್ 6, 7) 5ನೇ ಕಾರ್ಮಿಕ ಸಮ್ಮೇಳನವನ್ನು ಆಯೋಜಿಸಿದರು. ಅಲ್ಲಿ ಉದ್ಘಾಟನಾ ಭಾಷಣ ಮಾಡುತ್ತಾ "ನಾವೀಗ ಒಂದು ಕಡೆ ಬಂಡವಾಳಶಾಹಿ ಕೈಗಾರಿಕೋದ್ಯಮ, ಇನ್ನೊಂದುಕಡೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ. ಎರಡು ವಿರೋಧಾಭಾಸಗಳ ನಡುವೆ ಇದ್ದೇವೆ. ರಾಜಕೀಯದಲ್ಲಿ ಸಮಾನತೆ, ಆರ್ಥಿಕತೆಯಲ್ಲಿ ಅಸಮಾನತೆ. ಇದು ನಮ್ಮ ಆರ್ಥಿಕ ವಿಧಿನಿಯಮ, ನಮ್ಮ ರಾಜಕೀಯ ವಿಧಿನಿಯಮವನ್ನು ನಿರಾಕರಿಸುತ್ತಿವೆ. 2ನೆಯದಾಗಿ ಸಾಮಾಜಿಕ ಜೀವನದ ತಳಹದಿ, ಕಾರ್ಮಿಕರ ಜೀವನದಲ್ಲಿ ಭದ್ರತೆ ಕಾಣದಿರುವ ಸಾಮಾಜಿಕ ಸಮಸ್ಯೆಗಳು ಇವೆ. ಕಾರ್ಮಿಕರ ಹಕ್ಕುಗಳು ಸಾಮಾನ್ಯ ಜನರಿಗೂ ತಿಳಿಯುವಂತೆ ಮಾಡಬೇಕಿದೆ. ಅವರಿಗೆ ತಿಳಿಯುವ ಹಕ್ಕುಗಳೆಂದರೆ, ಅವರಿಗೆ ಶಾಂತಿ, ಒಂದು ಮನೆ, ಸಾಕಷ್ಟು ಬಟ್ಟೆ ಬರೆ, ಶಿಕ್ಷಣ, ಆಹಾರ, ಆರೋಗ್ಯ ಹಾಗೂ ಶುಭ್ರ ರಾಜಬೀದಿಗಳಲ್ಲಿ ಅಪಮಾನದ ಭೀತಿಯಿಲ್ಲದೆ, ಗೌರವದಿಂದ ನಡೆಯುವ ಹಕ್ಕು". ಅಭದ್ರತೆಯ ವಿರುದ್ಧ ಸಂರಕ್ಷಣಾ ಕಾರ್ಯಗಳನ್ನು ಮಾಡುತ್ತಾ, ಭಾರತೀಯರು ಉತ್ಪಾದನೆಯಲ್ಲಿ ತೊಡಗುವಂತೆ ಮಾಡುವುದರ ಮುಖಾಂತರ, ನಮ್ಮ ಸಾಮಾರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕರೆನೀಡಿದರು.

ಮುಂದುವರಿಯುವುದು...

REMEMBERING RAJA RAM

Suryanath U. Kamath

(22nd May 1772 – 27th September 1833)



It was a Pilgrimage indeed! I had the rare privilege of inaugurating a library founded in memory of Raja Ram Mohun Roy at his place of birth, Radhanagar (hoogly dist.) in West Bengal. This was by virtue of my being the Chairman of the Raja Ram Mohun Roy Library Foundation Calcutta. The foundation started in 1972, on the occasion of the bi-centenary of the birth of Raja, the great social reformer, writer, journalist, religious leader.

The foundation decided to work in an unchartered field to promote the library movement in India. As libraries are a State subject, their growth in various States is not uniform. Some States have not shown any interest in the field. Till now only ten States and CATs (including luckily Karnataka) have a Library Legislation.

A majority of the States and centrally Administered Territories do not have any law to start, promote, guide, finance or regulate Libraries. The RRLF has been doing that work. It has helped 32,000 libraries in India, both bovernment and private till now. It is not to discuss its role this is being written

The ancestors of Roy were Kanauji brahmins, who had settled down in the place sometime during 16th century. Their local surname is Bandyopadhayaya (Banerji), They were Jamindars with lot of property. They had a huge house. This was renovated later in the classical style by a design believed to have been prepared by Rabindranath Tagore.

Inside the compound, at the spot where Roy is believed to have been born, a small pavilion has been raised. Outside this house the new small library building in harmony with the architecture of the renovated residence has been build. I was asked to inaugurate it. (Jan 20, 2001).

It was rare privilege. The RRRF donated a few lakhs for the purpose. A matching grant has been made by the district panchayat.

I inaugurated the library building. My name is inscribed on the stone plaque in Bengali script. There were long speeches by the Palli Panchayat Chairman followed by our Director, Dr Bhattacharjee. I was asked to speak. I bragged in Hindi. I told them that my native district centre Mangalore had invited Raja's men to preach Brahma Samaj ideas (in1870). The movement bore good fruit. Kudmul Ranga Rao founded the Depressed Classes League in 1897. His daughter was married to P. Subbrarayan of Madras. The Kumaramangalam Brothers (the general and Mohan) were the children of this daughter.

Bengal might not have produced a Prime Minister or a President of India. But it has produced men like the Ram Mohun, vivekananda, Aurobindo and Subhas Chandra Bose who have occupied "Hridaya Simhasana" of all Indians. They are our permanent Chakravartis of India. As rebel, Ram Mohun had to leave his ancestral home. He built a house for his stay at Radhanagar. as a boy, he was married thrice! Where are the wives to stay when he was ostracised by his parental house? The house is in ruins amidst a mango grove. They have conserved the dilapidated house, as they have done our Kittur Wada.

Courtasy : Deccan Herald 25.05.2001



Rajaram Mohun Roy Memorial Hall, Radhanagar

ವಿಶ್ವ ಪುಸ್ತಕ ದಿನಾಚರಣೆ

1923 ಏಪ್ರಿಲ್ 23ರಂದು ಸ್ಪೇನ್‌ನಲ್ಲಿ ಮಿಗೆಲ್‌ದ ಸೆರ್ವಾಂಟಿಸ್ ನಿಧನರಾದರು. ವಿಶ್ವ ಸಾಹಿತ್ಯಕ್ಕೆ 'ಡಾನ್ ಕ್ವಿಕ್ಸೋಟ್' ಕೃತಿಯನ್ನು ಕೊಟ್ಟವನೀತ. ಅವರ ಗೌರವಾರ್ಥವಾಗಿ ಆ ದಿನವನ್ನು ಪುಸ್ತಕ ದಿನವನ್ನಾಗಿ ಸ್ಪೇನ್‌ನ ಪುಸ್ತಕ ವ್ಯಾಪಾರಿಗಳು, ಪ್ರಕಾಶಕರು 1923ರಿಂದಲೇ ಆಚರಿಸಲಾರಂಭಿಸಿದರು. ಕಾಕತಾಳೀಯವೆಂಬಂತೆ ವಿಲಿಯಂ ಷೇಕ್ಸ್‌ಪಿಯರ್‌ನ ಜನ್ಮದಿನವೂ ಮತ್ತು ಮರಣ ದಿನವೂ ಅದೇ ಆಗಿತ್ತು. ಹಾಗಾಗಿ ಪ್ರತಿ ವರ್ಷ ಏಪ್ರಿಲ್ 23 ವಿಶ್ವ ಪುಸ್ತಕ ದಿನವನ್ನಾಗಿ ಆಚರಿಸುವಂತೆಯೂ, ಪುಸ್ತಕ, ಲೇಖಕರು ಹಾಗೂ ಗ್ರಂಥ ಸ್ವಾಮ್ಯದ ಕುರಿತು ಜಾಗೃತಿ ಮೂಡಿಸುವಂತೆಯೂ, ಓದಿನ ಅಭಿರುಚಿ ಪುಸ್ತಕ ಪ್ರೀತಿ ಬೆಳೆಸುವಂತ ವಿಶ್ವ ಸಂಸ್ಥೆ ಕರೆ ನೀಡಿತು. 1995ರ ಏಪ್ರಿಲ್ 23ರಿಂದ ಪುಸ್ತಕ ದಿನ ವಿಶ್ವಾದ್ಯಂತ ಆಚರಣೆಯಲ್ಲಿದೆ.

ವಿಶ್ವದ ಹತ್ತು ದೊಡ್ಡ ಗ್ರಂಥಾಲಯಗಳು

ಗ್ರಂಥಾಲಯೆ ಹೆಸರು, ಸ್ಥಳ ಹಾಗೂ ಸ್ಥಾಪನಾ ವರ್ಷ

1. ಬಿಬ್ಲಿಯೋಥೆಕ್ ನ್ಯಾಷನೇಲ್ ಲೈಬ್ರರಿ
   ಪ್ಯಾರಿಸ್, ಫ್ರಾನ್ಸ್ – 1480
2. ಹಾರ್ವರ್ಡ್ ವಿಶ್ವವಿದ್ಯಾಲಯದ ಲೈಬ್ರರಿ
   ಕೇಂಬ್ರಿಡ್ಜ್, ಅಮೆರಿಕಾ – 1638
3. ಯೇಲ್ ವಿಶ್ವವಿದ್ಯಾಲಯದ ಲೈಬ್ರರಿ :
   ನ್ಯೂ ಹೆವನ್, ಅಮೆರಿಕಾ – 1701
4. ಬ್ರಿಟಿಷ್ ಲೈಬ್ರರಿ :
   ಲಂಡನ್, ಇಂಗ್ಲೆಂಡ್ – 1753
5. ರಷ್ಯನ್ ನ್ಯಾಷನಲ್ ಲೈಬ್ರರಿ
   ಸೆಂಟ್ ಪೀಟರ್ಸ್ ಬರ್ಗ್, ರಷ್ಯಾ – 1795
6. ಲೈಬ್ರರಿ ಆಫ್ ಕಾಂಗ್ರೆಸ್ :
   ವಾಷಿಂಗ್ಟನ್ ಡಿ.ಸಿ., ಅಮೆರಿಕಾ – 1800
7. ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿ
   ನ್ಯೂಯಾರ್ಕ್, ಅಮೆರಿಕಾ – 1848
8. ರಷ್ಯನ್ ಸ್ಟೇಟ್ ಲೈಬ್ರರಿ :
   ಮಾಸ್ಕೋ, ರಷ್ಯಾ – 1862
9. ಬಿಬ್ಲಿಯೋಥೆಕ್ ಅಕಾಡೆಮಿಯ ರೋಮೇನೆ
   ಬುಖರೆಸ್ಟ್, ರುಮಾನಿಯಾ – 1867
10. ಇಲಿನಯ್ಸ್ ವಿಶ್ವವಿದ್ಯಾಲಯದ ಲೈಬ್ರರಿ
    ಅರ್ ಬಾನಾ, ಅಮೆರಿಕ– 1867

ಸಂಗ್ರಹ : ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ಬಸವೇಶ್ವರ, ಗಾಂಧೀಜಿ ಮತ್ತು ರಾಷ್ಟ್ರೀಯತೆ

(ವಿಶ್ವ ಗುರು ಬಸವಣ್ಣ ಅವರ ದಿನಾಚರಣೆಯ ಸ್ಮರಣಾರ್ಥ)

– ಡಿ.ಪಿ. ಪ್ರಕಾಶ್

19ನೇ ಶತಮಾನದ ಅಂತ್ಯದಲ್ಲಿ 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆ ನಮ್ಮಲ್ಲಿ ನಿಚ್ಚಳವಾಗಿ ಬೆಳೆಯಿತು. ಆನಂದಕುಮಾರ ಸ್ವಾಮಿ ಹಾಗೂ ಗಾಂಧೀಜಿ 'ರಾಷ್ಟ್ರೀಯತೆ'ಗೆ ಸಾಂಸ್ಕೃತಿಕ ಹಾಗೂ ನಾಗರಿಕ ಭೂಮಿಕೆ ಒದಗಿಸಿದರು. 12ನೇ ಶತಮಾನದಲ್ಲಿದ್ದ ಬಸವಣ್ಣನವರ ವಚನಗಳಲ್ಲಿ ರಾಷ್ಟ್ರ, ರಾಜ್ಯ ಎಂಬ ಪದಗಳ ಬಳಕೆ ನೇರವಾಗಿ ಇಲ್ಲದಿದ್ದರೂ ಅವರು ತಮ್ಮ ವಚನಗಳಲ್ಲಿ ತುಂಬಿಟ್ಟಿರುವ ದರ್ಶನ 'ರಾಷ್ಟ್ರೀಯತೆ'ಯ ಬಗ್ಗೆ ಮಹತ್ತರ ಬೆಳಕು ಚೀರುತ್ತದೆ.

"ಬಸವೇಶ್ವರರು ಹಲವು ತತ್ವಗಳನ್ನು ನಮಗೆ ದಯಪಾಲಿಸಿದ್ದಾರೆ. ಅವುಗಳಲ್ಲಿ ಕೆಲವನ್ನಾದರೂ ಸಾಧಿಸಲು ಪ್ರಯತ್ನಿಸುತ್ತೇನೆ." ಇದು ಮಹಾತ್ಮ ಗಾಂಧೀಜಿಯವರು 1924ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಬೆಳಗಾಂ ಅಧಿವೇಶನಕ್ಕೆ ಬಂದಿದ್ದಾಗ ಹೇಳಿದ ಮಾತು. ಬಸವೇಶ್ವರರ ಬಹುಮುಖ ವ್ಯಕ್ತಿತ್ವವನ್ನು ಮನಗಂಡಿದ್ದ ಗಾಂಧೀಜಿಯವರ ಈ ಮಾತು ನಿಜಕ್ಕೂ ಮುಖ್ಯವಾದದ್ದು.

ಸುಮಾರು 800 ವರ್ಷಗಳ ಹಿಂದೆಯೇ ಮೌಢ್ಯತೆಯಲ್ಲಿ ಸಿಲುಕಿದ್ದ ಸಮಾಜವನ್ನು ಸುಧಾರಿಸಲು ಬಸವೇಶ್ವರರು ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದು ಧರ್ಮವನ್ನು. ಇದಕ್ಕಿಂತ ಮುಖ್ಯವಾಗಿ ಬಸವೇಶ್ವರರು ಸಾಧಿಸಿದ ಸರ್ವಾಂಗೀಣ ಅಭಿವೃದ್ಧಿಯ ಕಡೆ ನಾವು ಗಮನಹರಿಸಬೇಕು. ಆರ್ಥಿಕ ವಲಯ, ಶೈಕ್ಷಣಿಕ ವಲಯ, ರಾಜಕೀಯ ವಲಯ, ಸಾಹಿತ್ಯಕ ವಲಯ. ಹೀಗೆ ಪಟ್ಟಿ ಬೆಳೆಯುತ್ತದೆ. 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆ ಬಸವೇಶ್ವರರು ಸಾಧಿಸಿದ ಕ್ರಾಂತಿಯಲ್ಲಿ ಯಾವ ಸ್ಥಾನ ಪಡೆದಿತ್ತು. ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸಿದರೆ ಹಲವು ಸ್ವಾರಸ್ಯಕರ ಸಂಗತಿಗಳು ಬೆಳಕಿಗೆ ಬಾರದೆ ಇರವು.

'ರಾಷ್ಟ್ರೀಯತೆ' ಎಂಬುದು 'ಪಾಶ್ಚಿಮಾತ್ಯ ಗಾಳಿ'ಯಿಂದ ತೇಲಿ ಬಂದ ಕೊಡುಗೆಗಳಲ್ಲಿ ಒಂದು ಎಂಬುದು ಹಲವರ ಅಭಿಪ್ರಾಯ. 19ನೇ ಶತಮಾನದ ಕೊನೆಯಂಚಿನಲ್ಲಿ 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆ ನಮ್ಮಲ್ಲಿ ನಿಚ್ಚಳವಾಗಿ ಬೆಳೆಯಿತೆನ್ನಬಹುದು. ಹೀಗಿದ್ದರೆ ಬಸವೇಶ್ವರರ ಕಾಲ 12ನೇ ಶತಮಾನದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಹುಡುಕುವುದು ಎಷ್ಟರ ಮಟ್ಟಿಗೆ ಸಮಂಜಸ ಎಂಬ ಪ್ರಶ್ನೆ ಏಳಬಹುದು. ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದ್ದು 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆಯ ಮೇಲ್ನೋಟ ಹಾಗೂ ಅದರ ನಾಮಾವಳಿಯ ಪ್ರಚುರತೆಯನ್ನಲ್ಲ. ಬದಲಿಗೆ 'ರಾಷ್ಟ್ರೀಯತೆ' ಬೆಳೆಯಲು ಬೇಕಾದ ಮೂಲಭೂತ ಅಂಶಗಳಾವುವು, ವಿಶಾಲಾರ್ಥದಲ್ಲಿ ರಾಷ್ಟ್ರೀಯತೆ ಯಾವ ರೂಪವನ್ನು ಪಡೆದುಕೊಳ್ಳುತ್ತದೆ ಮತ್ತು 'ರಾಷ್ಟ್ರೀಯತೆ' ಹಾಗೂ ಜನರ ನಡುವಿನ ಸಂಬಂಧ ಇವುಗಳ ಬಗ್ಗೆ ಸ್ವಲ್ಪ ಯೋಚಿಸಬೇಕಾಗುತ್ತದೆ.

ತಜ್ಞರ ವ್ಯಾಖ್ಯಾನಗಳತ್ತ ಹೆಚ್ಚು ಗಮನಹರಿಸದೆ ನೇರವಾಗಿ ನಮ್ಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಘನೀಭೂತಗೊಂಡ 'ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ಗಮನಕ್ಕೆ ತೆಗೆದುಕೊಳ್ಳೋಣ. 20ನೇ ಶತಮಾನಕ್ಕೆ ಪೂರ್ವದಲ್ಲಿ ರಾಷ್ಟ್ರೀಯತೆ ಎಂಬುದು ಕೇವಲ ವಸಾಹತು ಶಾಹಿಯ ವಿರೋಧದ ಧ್ವನಿ ಎಂದೇ ಪರಿಗಣಿಸಲಾಗಿತ್ತು. ಆದರೆ ಈ ಧ್ವನಿ ಸಂಪೂರ್ಣವಾಗಿ ಒಂದು ರಾಷ್ಟ್ರವನ್ನು ಕಟ್ಟಲಾರದು ಎಂಬುದನ್ನು ಆ ಶತಮಾನದ ಪ್ರಾರಂಭದಲ್ಲೇ ಆನಂದಕುಮಾರ ಸ್ವಾಮಿ ಹಾಗೂ ಗಾಂಧೀಜಿ ಅವರು ಮನಗಂಡಿದ್ದರು. ಇವರು ಸಾಂಸ್ಕೃತಿಕ ಹಾಗೂ ನಾಗರೀಕತೆಯ ಭೂಮಿಕೆಯನ್ನು 'ರಾಷ್ಟ್ರೀಯತೆ'ಗೆ ಒದಗಿಸಿಕೊಟ್ಟು ಆ ಒಂದು ನಿಟ್ಟಿನಲ್ಲಿ ರಾಷ್ಟ್ರೀಯತೆಗೆ ಒಂದು ಹೊಸ ಆಯಾಮವನ್ನೇ ನೀಡಿದರು.

ಬಸವೇಶ್ವರರು ತಮ್ಮ ಯಾವುದೇ ವಚನದಲ್ಲಿ ರಾಷ್ಟ್ರ, ರಾಜ್ಯ ಎಂಬ ಪದಗಳನ್ನು ನೇರವಾಗಿ ಬಳಸದೇ

ಇರಬಹುದು. ಆದರೆ ವಚನಗಳಲ್ಲಿ ಅವರು ತುಂಬಿಟ್ಟಿರುವ ಅರ್ಥ, ತತ್ವ ಹಾಗೂ ದರ್ಶನ ರಾಷ್ಟ್ರೀಯತೆಯ ಬಗ್ಗೆ, ಆರ್ಥಿಕ ಚೌಕಟ್ಟಿನ ಬಗ್ಗೆ ಹಾಗೂ ಇನ್ನಿತರ ಹಲವು ಸಂಪೂರ್ಣ ಒಂದು ರಾಷ್ಟ್ರಕ್ಕೆ ಅನ್ವಯಿಸುವ ಮುಖ್ಯ ಅಂಶಗಳ ಬಗ್ಗೆ ಮಹತ್ತರ ಬೆಳಕು ಬೀರುತ್ತವೆ.

ರಾಷ್ಟ್ರೀಯತೆ ತಂತಾನೆ ಒಂದು ಜನಾಂಗದಲ್ಲಿ ಹುಟ್ಟಿಕೊಳ್ಳಲಾರದು. ಒಂದು ಜನಸಮೂಹ ಅಥವಾ ಹಲವಾರು ಜನಾಂಗಗಳು ಒಂದು ಭೌಗೋಳಿಕ ಪರಿಮಿತಿಯಲ್ಲಿ ಒಟ್ಟಿಗೆ ವಾಸಿಸಿದಾಗಲೂ ಕೂಡ ರಾಷ್ಟ್ರೀಯತೆ ಇದ್ದಕ್ಕಿದ್ದ ಹಾಗೆ ಬೆಳೆಯಲು ಸಾಧ್ಯವೇ ಇಲ್ಲ. ಆ ನಿರ್ದಿಷ್ಟ ಭೌಗೋಳಿಕ ಪರಿಮಿತಿಗೆ ನಾವೆಲ್ಲರೂ ಒಟ್ಟುಗೂಡಿ ಒಂದು ಸಮೂಹ ಶಕ್ತಿಯಾಗಿ ನಾವಿರುವ ಭೌಗೋಳಿಕ ಪರಿಮಿತಿಯ ಜೊತೆ ಅವನಾಭಾವ ಸಂಬಂಧವಿದೆ ಎಂಬ ಭಾವನೆ ಪ್ರತಿಯೊಬ್ಬನಲ್ಲೂ ಬರಬೇಕು. ಇದು ಬಂದಾಗಲೇ ರಾಷ್ಟ್ರೀಯತೆ ಬೆಳೆಯಲು ಸಾಧ್ಯ. ಹೀಗಾಗಬೇಕಾದರೆ ಹಲವು ಮೂಲಭೂತ ಅಂಶಗಳು ಪ್ರಮುಖವಾಗಿ ಆ ಸಮಾಜದಲ್ಲಿ ಮೇಳೈಸಬೇಕಾಗುತ್ತದೆ. ಇದನ್ನು ಮಹಾತ್ಮ ಗಾಂಧೀಜಿಯವರು ಮನಗಂಡಿದ್ದರು. ಪ್ರತಿ ಬಾರಿಯೂ ಅವರು ಜನಪ್ರಿಯ ಆಂದೋಲನವನ್ನು ಹಿಂತೆಗೆದುಕೊಂಡ ದಿನದಿಂದಲೇ ರಚನಾತ್ಮಕ ಕಾರ್ಯಕ್ರಮಗಳನ್ನು ಯೋಚಿಸಿ ಜನರಲ್ಲಿಗೆ ಹೋಗುತ್ತಿದ್ದರು. ಇದರಿಂದಾಗಿ ಬಲವಾಗಿ ಪ್ರತಿಯೊಬ್ಬನಲ್ಲೂ ಬೇರೂರಿದ ರಾಷ್ಟ್ರೀಯತೆ ಎನ್ನುವ ಪ್ರಚಂಡ ಶಕ್ತಿ ಭಾರತ ಸ್ವಾತಂತ್ರ್ಯ ಪಡೆಯುವವರೆಗೂ ನಿರಂತರ ಹೋರಾಟ ನಡೆಸುವಂತೆ ಸಾಧ್ಯವಾಯಿತು.

12ನೇ ಶತಮಾನದ ಸಾಮಾಜಿಕ ಪರಿಸ್ಥಿತಿ ಗಾಂಧೀಜಿ ಕಾಲಕ್ಕಿಂತಲೂ ಹದಗೆಟ್ಟಿತ್ತು. ಗಾಂಧೀಜಿಗಿಂತ ಮೊದಲು ರಾಜಾರಾಂ ಮೋಹನ್ ರಾಯ್, ದಯಾನಂದ ಸರಸ್ವತಿ, ನಾರಾಯಣಗುರು, ಜ್ಯೋತಿರಾವ್ ಫುಲೆ ಮುಂತಾದವರು ಮೂಢನಂಬಿಕೆಗಳ ವಿರುದ್ಧ ಸೆಟೆದು ನಿಂತರು. ಅವರಂತೆಯೇ ಬಸವೇಶ್ವರರು ಮುನ್ನಡೆದರು. ಅವರು ಇಡೀ ಸಮಾಜದ ಅಧೋಗತಿಗೆ ಕಾರಣವಾದ ಸಂಗತಿಗಳನ್ನು ಸರಿಯಾಗಿ ಅರಿತುಕೊಂಡವರಾಗಿದ್ದರು. ಕೇವಲ ಮೂಢ ನಂಬಿಕೆಗಳನ್ನು ಝಾಡಿಸಿ ಸುಮ್ಮನಿದ್ದುಬಿಡಲಿಲ್ಲ. ಆರ್ಥಿಕ, ರಾಜಕೀಯ, ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಕ್ರಾಂತಿಯೆಬ್ಬಿಸಿದರು. ಇದರಿಂದ ರಾಷ್ಟ್ರೀಯತೆ ಹುಟ್ಟಲಿಕ್ಕೆ ಮೂಲಭೂತವಾಗಿ ಬೇಕಾಗಿರುವ ಎಲ್ಲಾ ಅಂಶಗಳೂ ಬೆಳೆಯಲಿಕ್ಕೆ ಅನುವು ಮಾಡಿಕೊಟ್ಟಂತಾಯಿತು.

ಆನಂದ ಕುಮಾರ ಸ್ವಾಮಿಯವರು 1909ರಲ್ಲಿ ಬರೆದ 'Essay On National Idealism' ಎಂಬ ಪ್ರಬಂಧದಲ್ಲಿ ಸ್ವಾತಂತ್ರ್ಯ ಹೋರಾಟ ಆಧ್ಯಾತ್ಮಿಕ ಹಾಗೂ ಮಾನಸಿಕ ಸ್ವಾತಂತ್ರ್ಯವನ್ನು ಕಂಡುಕೊಳ್ಳಲು,. ಆದರೆ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಗಳಿಸಿದರೆ ಅದು ಕೇವಲ ಅರ್ಧಪಾಲು ಮಾತ್ರ ಗಳಿಸಿದಂತೆ' ಎಂದರು. ಇದಕ್ಕಿಂತ ಮುಂದುವರಿದು ಗಾಂಧೀಜಿಯವರು ರಾಷ್ಟ್ರೀಯತೆಗೆ ಒಂದು ಸರ್ವವ್ಯಾಪಕ ವ್ಯಾಖ್ಯಾನವನ್ನು ಕೊಟ್ಟರು. ರಾಜಕೀಯ, ನಾಗರಿಕತೆ ಹಾಗೂ ನೀತಿ ಇವೆಲ್ಲವೂ ಮಿಳಿತಗೊಂಡ ಒಂದು ನೆಲೆಗಟ್ಟಿನ ಮೇಲೆ ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸಿದರು. ಸ್ವರಾಜ್ಯ ಪಡೆದುಕೊಂಡರೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಂಡಂತಲ್ಲ ಎಂದ ಅವರು, ರಾಷ್ಟ್ರೀಯತೆ ಎನ್ನುವುದು ಯಾವುದೇ ಒಂದು ಧರ್ಮದಲ್ಲಿ ಬೇರೂರಿಲ್ಲ ಬದಲಿಗೆ ಅದು ಸರ್ವಧರ್ಮ ಸಮಾಗಮದಿಂದ ರೂಪುಗೊಂಡದ್ದು ಎಂದರು. ಬಸವೇಶ್ವರರು ಮನಗಂಡಿದ್ದು ಇದನ್ನೇ. ಸರ್ವಧರ್ಮ ಸಮನ್ವಯದ ಮೇಲೆ ಅವರು ಸಮಾಜವನ್ನು ರೂಪಿಸಲು ಪ್ರಾರಂಭಿಸಿದರು.

ದೇವರು ಒಬ್ಬನೇ, ಇದರಿಂದ ಎಲ್ಲಾ ಧರ್ಮಗಳು ಸಾರುವ ಹಾದಿಯೆಲ್ಲಾ ಒಂದೇ. ಆದ್ದರಿಂದ ಧರ್ಮಗಳ ನಡುವೆ ವೈಷಮ್ಯ ಬೇಡ ಎಂದರು. ಗಾಂಧೀಜಿ ಅವರ ದೃಷ್ಟಿಯೂ ಇದೇ ಆಗಿತ್ತು. ಜಾತಿ, ವರ್ಣಗಳು ತೊಡಕಾಗಿ ಬಂದರೆ ರಾಷ್ಟ್ರೀಯತೆಗೆ ಬಹುಮುಖ್ಯವಾಗಿ ಬೇಕಾಗಿರುವ ಸರ್ವಧರ್ಮದ ಭೂಮಿಕೆ ಲಭ್ಯವಾಗದು. ಆದ್ದರಿಂದಲೇ ಬಸವೇಶ್ವರರು ಸಮಾಜದ ಸಂಘಟನೆ ಮಾಡುವಾಗ ಜಾತಿ ವರ್ಣಗಳನ್ನು ಕಿತ್ತೊಗೆಯುತ್ತಾರೆ.

ಜಾತಿವಿಡಿದು ಸೂತಕವನರಸುವೆ,
ಜ್ಯೋತಿವಿಡಿದು ಕತ್ತಲೆಯನರಸುವೆ!
ಇದೇಕೊ ಮರುಳು ಮಾನವಾ?

ಈ ಪ್ರಶ್ನೆ ಎಂಥಾ ಮೂಢನನ್ನು ಹಿಡಿದು ನಿಲ್ಲಿಸಿ ಅವನ ಜಾತೀಯತೆಯ ನಂಬಿಕೆಯನ್ನೂ ಅಲ್ಲಾಡಿಸಿ ಬಿಡುತ್ತವೆ. ಜಾತಿಯ ಹೆಸರಿನಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಪಂಗಡಗಳೇರ್ಪಟ್ಟು ಸಂಘಟನೆಯೇ ಇಲ್ಲದಿದ್ದಾಗ ರಾಷ್ಟ್ರೀಯತೆ ಬೆಳೆಯುವುದಾದರೂ ಹೇಗೆ? ಮಾನವ ಮೂಲಭೂತವಾಗಿ ಸಂಘಜೀವಿ. ಜಾತಿ, ಕುಲಗಳು ಅವನ ಸಂಘ ಜೀವತ್ವವನ್ನೇ ಕಸಿದು ಕೊಳ್ಳುತ್ತಿರುವುದು ಬಸವೇಶ್ವರರಿಗೆ ಸ್ಪಷ್ಟ ಗೋಚರವಾಗಿತ್ತು. ಜಾತಿ ಸಂಘ ಜೀವನದ ವೈಶಾಲ್ಯತೆಯನ್ನು ಸಾರುವುದಿಲ್ಲ ಅಥವಾ ಆತ್ಮಾಭಿವೃದ್ಧಿಯನ್ನೂ ಕಲ್ಪಿಸುವುದಿಲ್ಲ. ಇದರಿಂದ ರಾಷ್ಟ್ರೀಯತೆಗೆ ಪ್ರಮುಖವಾಗಿ ಬೇಕಾಗಿರುವ ಒಂದು ಸಮನಾದ ಸಂಘಟನೆ ದೊರೆಯಲು ಸಾಧ್ಯವಿಲ್ಲ. ನಾವೆಲ್ಲರೂ ಒಂದು ಎಂಬ ಭಾವನೆ ಮೂಡಿದ ಮೇಲೆ ಇನ್ನು ಕುಲದ ಮಾತೇಕೆ?

ಗಾಂಧೀಜಿ ಅವರು ಜನರ ಜೊತೆ 'ರಾಷ್ಟ್ರೀಯತೆ' ಸಂಬಂಧ ಬೆಳೆಸಿಕೊಳ್ಳಬೇಕಾದರೆ ಜನರ ನಡುವಿರುವ ಧಾರ್ಮಿಕ ವ್ಯತ್ಯಾಸಗಳು, ಜಾತಿ, ವರ್ಣಗಳ ಭಾವನೆ ತೊಲಗಬೇಕೆಂದರು. ಈ ನಿಟ್ಟಿನಲ್ಲಿ ಗಾಂಧೀಜಿ ಅವರ ರಚನಾತ್ಮಕ ಕಾರ್ಯಕ್ರಮಗಳು ಹಾಗೂ ಬಸವೇಶ್ವರರು ಸಾರಿದ ಸಮತಾವಾದ ಬಹುಮುಖ್ಯವಾಗುತ್ತದೆ. ಗಾಂಧೀಜಿ ಅವರು ಸಾರಿದ ಹಿಂದೂ ಮುಸಲ್ಮಾನರ ಭಾವೈಕ್ಯತೆ, ಬಡತನ ನಿರ್ಮೂಲನೆ ಹಾಗೂ ಸಮಾನತೆ ಇವುಗಳನ್ನು ಬಸವೇಶ್ವರರು ಬಹು ಯಶಸ್ವಿಯಾಗಿ 12ನೇ ಶತಮಾನದಲ್ಲೇ ಸಾಧಿಸುತ್ತಾರೆ. ಅಸ್ಪೃಶ್ಯತಾ ನಿವಾರಣೆಯ ಹೊರತು ಸಮಾಜದ ಸಂಘಟನೆ ಸಾಧ್ಯವಿಲ್ಲವೆಂಬುದನ್ನು ಬಸವೇಶ್ವರರು ಚೆನ್ನಾಗಿ ಅರಿತಿದ್ದರು. ಹೊಲೆಯ, ಮಾದಿಗ ಎಂಬುದಕ್ಕೆ ಅವರು ಹೊಸ ವ್ಯಾಖ್ಯಾನವನ್ನೇ ನೀಡುತ್ತಾರೆ.

ಹೊಲೆಯನ ಮೈಯಲ್ಲಿ ಹಾಗೂ ಉತ್ತಮನ ಮೈಯಲ್ಲಿ ಹರಿವುದು ಒಂದೇ ರಕ್ತ. ನಡೆದಾಡುವುದೂ ಒಂದೇ ನೆಲದ ಮೇಲೆ. ಹೀಗಿರುವಲ್ಲಿ ಮೇಲು ಕೀಳೆಂಬ ಪ್ರಶ್ನೆಯೇ ಬಾರದು ಎಂಬುದು ಬಸವೇಶ್ವರರ ತೀರ್ಮಾನ

ಇವನಾರವ ಇವನಾರವ
ಇವನಾರವನೆಂದೆನಿಸದಿರಯ್ಯ
ಇವ ನಮ್ಮವ ಇವ ನಮ್ಮವ
ಇವ ನಮ್ಮವನೆಂದೆನಿಸಯ್ಯ

ಎನ್ನುವ ರಾಷ್ಟ್ರೀಯತೆಗೆ ಬಹುಮುಖ್ಯವಾಗಿ ಬೇಕಾಗಿರುವ ಭ್ರಾತೃತ್ವವನ್ನು ಅವರು ಎತ್ತಿ ಹಿಡಿಯುತ್ತಾರೆ. ಈ ನಿಟ್ಟಿನಲ್ಲಿ ಹೇಳಬೇಕೆಂದರೆ ಯಾವುದೇ ಆಧುನಿಕ ಸಮಾಜ ಸಾಧಿಸದೆ ಇದ್ದುದ್ದನ್ನು 12ನೇ ಶತಮಾನದಲ್ಲಿ ಬಸವೇಶ್ವರರು ಪ್ರಯೋಗಕ್ಕೆ ತಂದದ್ದು ನಿಜಕ್ಕೂ ಅತ್ಯಮೋಘವಾದುದು.

ಗಾಂಧೀಜಿ ಅವರು ಹೇಳುವಂತೆ ನೀತಿ ರಾಷ್ಟ್ರೀಯತೆ ಬೆಳೆಯಲಿಕ್ಕೇ ಹೇಗೆ ಮುಖ್ಯವೋ ಹಾಗೆಯೇ ಬಸವೇಶ್ವರರೂ ನೀತಿ ತತ್ವಕ್ಕೆ ಒತ್ತುಕೊಟ್ಟಿದ್ದಾರೆ. ಸಮಾಜದ ಆಗು ಹೋಗುಗಳಿಗೆ ಪ್ರತಿಯೊಬ್ಬ ವ್ಯಕ್ತಿಯೂ ಹೊಣೆ ಎನ್ನುವ ದೃಷ್ಟಿ ಹೊಂದಿದ್ದ ಅವರು ಯಾವುದೇ ಕಾರಣದಿಂದಲೂ ಪ್ರಾಮಾಣಿಕತೆಯನ್ನು ಬಿಟ್ಟು ಕೊಡಬಾರದೆಂಬ ನಿಲುವು ಹೊಂದಿದ್ದರು.

ಕ್ರಿ.ಶ. 1857ರ ಸಿಪಾಯಿ ದಂಗೆಯ ನಂತರ ಜನರ ಮನದಲ್ಲಿ ರಾಷ್ಟ್ರೀಯತೆ ಬೆಳೆಯ ತೊಡಗಿದಾಗ ಅದಕ್ಕೇ ನೀರೆರದು ವೃದ್ಧಿಸುವ ಕೈಂಕರ್ಯದಲ್ಲಿ ನಾಯಕರು ಮೇಲೆ ವಿಶ್ಲೇಷಿಸಿರುವ ಅಂಶಗಳನ್ನು ಬೆಳೆಸುವ ಪರಿ ಹೊಂದಿರಲಿಲ್ಲ. ನಂತರದ ವರ್ಷಗಳಲ್ಲಿ ಗಾಂಧೀಜಿ ಅವರು ಹೇಳಿದ ರಾಷ್ಟ್ರೀಯತೆಯ ಆಳ, ಹರಿಹು ಅವರುಗಳ ನಿಲುವಲ್ಲಿ ಕಂಡು ಬರಲಿಲ್ಲ ಆಗಿನ ಸಮಾಜದಲ್ಲಿ ನಡೆಯುತ್ತಿದ್ದ ಆಂತರಿಕ ಶೋಷಣೆಯಲ್ಲಿ ಸೇರಿಹೋಗಿದ್ದ ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಸಮಾನತೆಯ ಅಂಶಗಳನ್ನು ಅವರು ಗ್ರಹಿಸಲಿಲ್ಲ. ಆದ್ದರಿಂದಲೇ ಗಾಂಧೀಜಿ ಅವರು 'ಖೇಡಾ' ಸತ್ಯಾಗ್ರಹ ಪ್ರಾರಂಭಿಸುವುದಕ್ಕಿನ್ನ ಮೊದಲು ಇಡೀ ರಾಷ್ಟ್ರವೇ ಬ್ರಿಟಿಷರ ವಿರುದ್ಧ ನಿಲ್ಲಲಿಲ್ಲ. ಆ ಅಸಮಾನತೆಯ ಅಂಶಗಳನ್ನು ಜೋತಿಬಾ ಪುಲೆ, ಇ.ವಿ. ರಾಮಸ್ವಾಮಿ ನಾಯ್ಕರ್, ನಾರಾಯಣ ಗುರು ಮತ್ತು ಅಂಬೇಡ್ಕರ್ ಒಂದು ಕಡೆ ಹಾಗೂ ಎಡಪಂಥೀಯ ನಾಯಕರು ಮತ್ತೊಂದು ಕಡೆ ಬೆಳಕಿಗೆ ತಂದರು. ಬಸವೇಶ್ವರರು ಒತ್ತಿ ಹೇಳಿದುದೇ ಇದನ್ನು ಒಟ್ಟು ಸಮಾನತೆ ಬರಲು ಆರ್ಥಿಕ, ರಾಜಕೀಯ, ಸಾಮಾಜಿಕ ಹೀಗೆ ಎಲ್ಲಾ ಸ್ತರಗಳಲ್ಲಿ ಮೊದಲು ಸಮಾನತೆ ಕಾಣಬೇಕು. ಆಗಲೇ ಒಟ್ಟಾರೆ ಜನತೆಯಲ್ಲಿ ಸಂಪೂರ್ಣ ಸಮಾನತೆ ಕಾಣಲು ಸಾಧ್ಯ ಎಂಬುದು ಅವರ ನಿಲುವು. ಮಾನವನಾಗಿ ಹುಟ್ಟಿದ ಮೇಲೆ ಒಟ್ಟಾಗಿ ಬಾಳಬೇಕು. ಭೇದ

ಭಾವನೆ ಸಲ್ಲದು ಎಂದು ಕಾಗೆ, ಕೋಳಿಯ ಸಹ ಜೀವನವನ್ನು ನಿರ್ದಶನವನ್ನಾಗಿ ಕೊಟ್ಟು ಸಮತಾವಾದ ನಿರೂಪಿಸುತ್ತಾರೆ.

ಕಾಗೆ ಒಂದಗುಳಕಂಡಡೆ
ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?

ಸಮಾಜದ ಐಕ್ಯಮತ್ಯವೇ ರಾಷ್ಟ್ರದ ಮುಖ್ಯ ಸಂಪತ್ತು. ಎನ್ನುವುದನ್ನು ಬಸವೇಶ್ವರರು 12ನೇ ಶತಮಾನದಲ್ಲೇ ತೋರಿಸಿಕೊಟ್ಟರು. ಜನರೆಲ್ಲರೂ ಒಟ್ಟಾಗಿ ನಿಂತರೆ ಎಲ್ಲವೂ ಸಾಧ್ಯ ಎಂದು ಅವರು ತೋರಿಸಿದುದಕ್ಕೆ ಅಕ್ಷರಾಭ್ಯಾಸ ಮಾಡದೆ, ತತ್ವಜ್ಞಾನ ಓದದೆ ಇದ್ದಂತಹ ಸಾಮಾನ್ಯ ಜನರಾದ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ ಮುಂತಾದವರು ಅದ್ಭುತವಾದ ವಚನಗಳಿತ್ತರು. ರಾಜ್ಯ ಬೊಗಸೆ ತುಂಬಿ ತುಳುಕುತ್ತಿತ್ತು. ಯಾವುದೇ ರೀತಿಯಲ್ಲೂ ಸುಂಕದಲ್ಲಿ ಮೋಸ ನಡೆಯಲಿಲ್ಲ. ಸಂಪೂರ್ಣ ಸಂಪದ್ಭರಿತ ರಾಜ್ಯವಾಗಿ ಕಲ್ಯಾಣ ನಗರ ಶೋಭಿಸಿತು. ಅದಕ್ಕೇ ಗಾಂಧೀಜಿ ಅವರು ರಾಷ್ಟ್ರೀಯತೆಯು ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ನ್ಯಾಯ ಮತ್ತು ಸಾಮಾಜಿಕ ಐಕ್ಯಮತ್ಯ ಇವುಗಳ ಮೇಲೆ ರಚನೆಯಾಗಬೇಕು ಎಂದರು


ಹೀಗೆ ಬಸವೇಶ್ವರರು ಪ್ರಚಾರಕ್ಕೆ ತಂದ ಹಲವು ತತ್ವಗಳು ಗಾಂಧೀಜಿ ಅವರು ವ್ಯಾಖ್ಯಾನ ಮಾಡಿದ ರಾಷ್ಟ್ರೀಯತೆಯ ತಿರುಳನ್ನು ಹೊಂದಿರುವುದಲ್ಲದೆ ಅಗಾಧ ಅರ್ಥವನ್ನು ನಮಗೆ ನೀಡುತ್ತದೆ. ಮನುಕುಲೋದ್ಧಾರಕ್ಕಾಗಿ ಶ್ರಮಿಸಿದ ಬಸವೇಶ್ವರರಿಗೆ ಗಾಂಧೀಜಿ ಅವರು 1942ರಲ್ಲಿ ಬೆಳಗಾವಿಯಲ್ಲಿ ನಮನ ಸಲ್ಲಿಸಿದ್ದು ತುಂಬಾ ಅರ್ಥವತ್ತಾಗಿದೆ. ಅಂದು ಬಸವೇಶ್ವರರು ಇಡೀ ಜೀವನವನ್ನೇ ತಪೋರಂಗವನ್ನಾಗಿ ಮಾಡಿಕೊಂಡು ಮನುಕುಲಕ್ಕಾಗಿ ಮಾಡಿದ ತ್ಯಾಗವನ್ನು ಜನತೆ ಗ್ರಹಿಸಿ ಅಳವಡಿಸಿಕೊಂಡಿದ್ದೇ ಆಗಿದ್ದಿದ್ದರೆ ಇಂದು ನಾವು ಎದುರಿಸುತ್ತಿರುವ ಹಲವು ತೆರನಾದ ವಿಚ್ಛಿದ್ರ ಶಕ್ತಿಗಳು ಹುಟ್ಟಿಕೊಳ್ಳಲು ಅವಕಾಶವೇ ಇರುತ್ತಿರಲಿಲ್ಲ.

ಸೌಜನ್ಯ : ಪ್ರಜಾವಾಣಿ 09.08.1998

58 ಪೂರೈಸಿದ 'ಏ ಮೇರೆ ವತನ್ ಕೆ ಲೋಗೋಂ



ಏ ಮೇರೆ ವತನ್ ಕೇ ಲೋಗೋಂ
ಝರಾ ಆಂಖ್ ಮೇ ಭರ್ ಲೋ ಪಾನಿ...
ಜೋ ಶಹೀದ್ ಹುಯೀ ಹೆ ಉನಕೋ
ಝರಾ ಯಾದ್ ಕರೋ ಕುರುಬಾನಿ




ಈಗಲೂ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ದೇಶಭಕ್ತಿ ಚಿಮ್ಮಿಸುವ ಅದ್ಭುತ ಶಕ್ತಿಯನ್ನು ಹೊಂದಿಸುವ ಈ ಗೀತೆಗೆ ಈಗ 58 ವರ್ಷ. ಈ ಹಾಡು ಒಂದು ಕಾಲದಲ್ಲಿ ದೇಶದ ಪ್ರಧಾನಿ ಜವಾಹರ್ ಲಾಲ್ ನೆಹರೂ ಅವರ ಕಣ್ಣಂಚಲ್ಲಿ ನೀರು ಜಿನುಗಿಸಿತ್ತು. 1962ರ ಭಾರತ ಚೀನಾ ಯುದ್ಧದಲ್ಲಿ ಸೋಲುಂಡು ನೋವನುಭವಿಸುತ್ತಿದ್ದ ಹೃದಯಗಳಲ್ಲಿ ಭರವಸೆಯ ಬೆಳಕನ್ನು ಮೂಡಿಸಿತ್ತು.
ಹೌದು, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಕವಿ ಪ್ರದೀಪ್ ಅವರು ರಚಿಸಿದ ಗೀತೆಯಿದು. ಯುದ್ಧಧ ಮುಗಿದ ಕೆಲವೇ ದಿನಗಳ ಬಳಿಕ ಈ ಹಾಡು ರೂಪುತಾಳಿತ್ತು. ಮುಂಬೈನ ಕಡಲ ತಡಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ 'ಏ ಮೇರೆ ವತನ್ ಕೇ ಲೋಗೋಂ' ಸಾಲುಗಳು ಪ್ರದೀಪ್ ಅವರಿಗೆ ಹೊಳೆದಿತ್ತು. ತಕ್ಷಣ ಪಕ್ಕದಲ್ಲಿದ್ದ ವ್ಯಕ್ತಿಯೊಬ್ಬರಿಂದ ಪೆನ್ ಪಡೆದುಕೊಂಡು ಸಿಗರೇಟ್ ಪ್ಯಾಕೆಟ್‌ನಲ್ಲಿರುವ ಒಳ ಭಾಗದ ಕವನವನ್ನು ಬರೆದಿದ್ದರು. ಆ ಹಾಡು ಮಾತ್ರ ಈಗಲೂ ಜನಮಾನಸದಲ್ಲಿ ನೆಲೆಸಿದೆ. ಸರಿಯಾಗಿ 58 ವರ್ಷಗಳ ಹಿಂದೆ ಜ. 27ರಂದು ದೆಹಲಿಯ ಸ್ಟೇಡಿಯಂನಲ್ಲಿ ಸಿ. ರಾಮಚಂದ್ರನ್ ಸಂಯೋಜಿಸಿದ್ದ ಈ ಹಾಡನ್ನು ಲತಾ ಮಂಗೇಶ್ಕರ್ ಅವರು ತಮ್ಮ ಕೋಗಿಲೆ ಕಂಠದಿಂದ ಹಾಡಿ ಅಲ್ಲಿ ನೆರೆದಿದ್ದವರ ಮನತಣಿಸಿದ್ದರು. ಆ ಕಾರ್ಯಕ್ರಮದಲ್ಲಿ ಅಂದಿನ ರಾಷ್ಟ್ರಪತಿ ಎಸ್. ರಾಧಾಕೃಷ್ಣನ್, ಪ್ರಧಾನಿ ನೆಹರೂ, ಸಂಪುಟ ಸಚಿವರು, ಮೊಹಮ್ಮದ್ ರಫೀ, ಹೇಮಂತ್ ಕುಮರ್‌ರಂತಹ ಗಾಯಕರು, ದಿಲೀಪ್ ಕುಮಾರ್, ದೇವಾನಂದ್, ರಾಜ್ ಕಪೂರ್ ಸೇರಿದಂತೆ ಇಡೀ ಸಿನಿಮಾ ರಂಗವೇ ಅಲ್ಲಿ ನೆರೆದಿತ್ತು. ಅಚ್ಚರಿಯೆಂದರೆ, ಆ ಕಾರ್ಯಕ್ರಮಕ್ಕೆ ಪ್ರದೀಪ್ ಅವರನ್ನು ಆಹ್ವಾನಿಸಿಯೇ ಇರಲಿಲ್ಲ ಎನ್ನುತ್ತಾರೆ ಅವರ ಪುತ್ರಿ ಮಿತುಲ್.

ಮೈಲಾರ ಮಹಾದೇವನ ಬಲಿದಾನದ ವೀರಗಾಥೆ (1911-1943)

– ಡಾ. ಮನು ಬಳಿಗಾರ್ :
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಗಾಂಧೀಜಿಯ ಐತಿಹಾಸಿಕ ದಾಂಡಿಯಾತ್ರೆಯಲ್ಲಿ ಕರ್ನಾಟಕದ ಏಕಮೇವ ಪ್ರತಿನಿಧಿಯಾಗಿ ಭಾಗವಹಿಸಿದವರು ಮೈಲಾರ ಮಹಾದೇವ. 1943 ಏಪ್ರಿಲ್ 1 ರಂದು ಉಜ್ವಲ ದೇಶಪ್ರೇಮಿ ಮೈಲಾರ ಮಹಾದೇವ ಬ್ರಿಟಿಷ್ ಪೋಲೀಸರ ಗುಂಡೇಟಿಗೆ ಬಲಿಯಾಗಿ ಹುತಾತ್ಮನಾದ. ಈ ವೀರ ದೇಶಭಕ್ತನ ಜೀವನ ಸಾಧನೆ ಇಂದಿನ ದೇಶಭಕ್ತರಿಗೆ ಮಾದರಿಯಾಗಿದೆ.



ಕಾಂತನ ಕಳಗೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ! ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ ಮಹಾದೇವಪ್ಪ ಮೈಲಾರ ಕರುನಾಡಿನ ಕಲಿ ವೀರಕೇಸರಿ ನೆನಪಿರಲೆನ್ನುತ ನಿರಂತರ ಬರೆದನು ಲಾವಣಿ, ಲಾವಣಿಕಾರ ಹರಡಿದ ಹಾಡನು ನಾನಾತರ!

ಸಮ್ಮದ್ ಸಾಹೇಬರ ಈ ಲಾವಣಿ ಸ್ವಾತಂತ್ರ್ಯಾಂದೋಲನದಲ್ಲಿ ಕರ್ನಾಟಕದ ಮನೆ ಮನೆಗಳಲ್ಲಿ ಮಾತಾಗಿ, ಮೈಲಾರ ಮಹಾದೇವರ ಬಲಿದಾನದ ಕಥೆ, ಅಸಂಖ್ಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಾಗಿತ್ತು. ಮೈಲಾರರು ಮನೆ, ಮಠ, ಕುಟುಂಬ ಎಲ್ಲಾ ತೊರೆದು ತಮ್ಮ ಹದಿಹರೆಯದಲ್ಲೆ ಶಾಲೆಗೆ ಶರಣು ಹೊಡೆದು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಬ್ರಿಟಿಷರ ಗುಂಡಿಗೆ ಆಹುತಿಯಾದವರು. 'ಮಾಡು ಇಲ್ಲವೆ ಮಡಿ' ಎಂಬ ಮಹಾತ್ಮರ ಕರೆಯನ್ನು ಅಕ್ಷರಶಃ ಪಾಲಿಸಿದ ಅದಮ್ಯ ಚೇತನ, ಗಾಂಧೀಜಿಯ ಆತ್ಮೀಯ ಶಿಷ್ಯ.

ಮೈಲಾರರು ಈಗಿನ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ ರೈತ ಕುಟುಂಬದಲ್ಲಿ ಜೂನ್ 8, 1911ರಂದು ಜನಿಸಿದರು. ತಂದೆ ಮಾರ್ತಂಡಪ್ಪ, ತಾಯಿ ಬಸಮ್ಮ. ಸ್ವಾತಂತ್ರ್ಯ ಆಂದೋಲನದಲ್ಲಿ ತಾಯಿ ಬಸಮ್ಮ ಸೆರೆಮನೆವಾಸ ಅನುಭವಿಸಿದ್ದರು. ಮೈಲಾರರಿಗೆ ದೇಶಭಕ್ತಿ ರಕ್ತಗತವಾಗಿ ಬಂದಿತ್ತು. ಪ್ರಾಥಮಿಕ ಶಿಕ್ಷಣ ಸ್ವಗ್ರಾಮದಲ್ಲೇ ಆಯಿತು. ಹಿರಿಯ ದೇಶಭಕ್ತರೊಬ್ಬರ ಭಾಷಣ ಕೇಳಿ ತನ್ನ ತಲೆ ಮೇಲಿನ ವಿದೇಶಿ ಟೊಪ್ಪಿಗೆ ತೆಗೆದು ನೆಲಕ್ಕೆಸೆದ ಮಹಾದೇವ. ಇದೇ ಆತನ ಸ್ವಾತಂತ್ರ್ಯ ಸಮರದ ಮೊದಲ ಹೆಜ್ಜೆ. ಹಿರಿಯ ಸ್ವಾತಂತ್ರ್ಯ ಸೇನಾನಿಗಳಾದ ಕೆ.ಎಫ್. ಪಾಟೀಲ ಹಾಗೂ ಟಿ.ಆರ್. ನೇಸ್ವಿ ಅವರ ಶಿಷ್ಯತ್ವ ದೊರೆತು, ಅವರು ದೇಶಕ್ಕಾಗಿ ತ್ಯಾಗ ಮಾಡಿದ ವೀರರ ಕಥೆಗಳನ್ನು ಹೇಳುತ್ತಿದ್ದರು. ಗಾಂಧೀಜಿ ಅವರ ಯಂಗ್ ಇಂಡಿಯಾ ಪತ್ರಿಕೆಯನ್ನು ನಿಯಮಿತವಾಗಿ ಓದುತ್ತ ಅವರ ಸತ್ಯಾಗ್ರಹದ ಬಗ್ಗೆ ಸಾಕಷ್ಟು ತಿಳಿದಿದ್ದ ಮಹಾದೇವ, ಗಾಂಧೀಜಿ ಆದಿಯಾಗಿ ಆಗಿನ ಶಿಕ್ಷಣ ಪದ್ಧತಿಯನ್ನು ಬಹುತೇಕರು ವಿರೋಧಿಸುತ್ತುದ್ದುದನ್ನು ಅರಿತಿದ್ದ. ಗಾಂಧೀಜಿ ಅವರ ಖಾದಿ ಪ್ರಸಾರದ ಸಂದೇಶದಂತೆ ಖಾದಿ ಬಟ್ಟೆಯನ್ನು ತಲೆಮೇಲೆ ಹೊತ್ತು ಮಾರಾಟ ಮಾಡಲು ಪ್ರಾರಂಭಿಸಿದ. ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿದ್ದ ಧಾರವಾಡಕ್ಕೆ ಹೋಗಿ 'ಭಾರತೀಯ ತರುಣ ಸಂಘ'ವನ್ನು ಸೇರಿಕೊಂಡ. ಸಾಬರಮತಿ ಆಶ್ರಮಕ್ಕೆ ಸೇರಿಕೊಳ್ಳಬೇಕೆಂಬ ಬಯಕೆ ಮಹಾದೇವನಲ್ಲಿ ತೀವ್ರವಾಯಿತು. ಅದೇ ಹೊತ್ತಿಗೆ ಗಾಂಧೀಜಿ ಅವರಿಂದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ಒಬ್ಬಿಬ್ಬ ಕಟ್ಟಾಳುಗಳನ್ನು ಕಳಿಸಬೇಕೆಂಬ ರಂಗನಾಥ ದಿವಾಕರ ಅವರಿಗೆ ಕರೆಬಂದಿತು. ಯುವಕ ಮಹಾದೇವ ಅತ್ಯುತ್ಸಾಹದಿಂದ ಅಲ್ಲಿಗೆ ಹೋಗಿ ಸೇರಿಕೊಂಡನು. ಹತ್ತೊಂಬತ್ತರ ಹರೆಯದ ಇವನನ್ನು ಕಂಡು ಗಾಂಧೀಜಿ ಕೆಲ ಪ್ರಶ್ನೆಗಳನ್ನು ಕೇಳಿ, ಕೆಲ ಪರೀಕ್ಷಗಳನ್ನು ಒಡ್ಡಿದರು. ಮಹಾದೇವ ಎಲ್ಲದರಲ್ಲೂ ತೇರ್ಗಡೆಯಾಗಿ 'ಆಶ್ರಮದಲ್ಲಿರಲು ಅಡ್ಡಿಯಿಲ್ಲ' ಎಂದು ಅನುಮತಿ ಪಡೆದುಕೊಂಡನು. 1930ರ ಮಾರ್ಚ್ 12ನೇ ದಿನ ಅಂದು ಮಹಾತ್ಮ ಗಾಂಧೀಜಿ ಅವರ ತಾವೇ ಆರಿಸಿಕೊಂಡ 29 ಸೇನಾನಿಗಳೊಂದಿಗೆ ಸಬರಮತಿಯಿಂದ ಉಪ್ಪಿನ ಸತ್ಯಾಗ್ರಹಕ್ಕಾಗಿ ದಾಂಡೀ ಯಾತ್ರೆ ಆರಂಭಿಸಿದ್ದರು. ಈ ತಂಡದಲ್ಲಿ ಕರ್ನಾಟಕದ

ಏಕಮೇವ ಪ್ರತಿನಿಧಿಯಾಗಿ ಮಹಾದೇವ ಇದ್ದದ್ದು ಆತನನ್ನು ನಿತ್ಯ ಹೊಳೆಯುವ ಧ್ರುವನಕ್ಷತ್ರದಂತೆ ಮಾಡಿದೆ. ದೂರದ ದಾಂಡೀಯನ್ನು 25ದಿನಗಳ ಪಾದಯಾತ್ರೆಯಿಂದ ತಲುಪಿ ಉಪ್ಪನ್ನು ಎತ್ತಿಕೊಂಡು ಕಾಯ್ದೆ ಭಂಗ ಮಾಡಿದಾಗ, ಗಾಂಧೀಜಿ ಅವರೊಂದಿಗೆ ಮೈಲಾರರಿಗೂ ಆರು ತಿಂಗಳ ಕಾರಾಗೃಹ ಶಿಕ್ಷೆಯಾಯಿತು. ಜೈಲಿನಿಂದ ಹೊರಬಂದು ಧಾರವಾಡಕ್ಕೆ ಹಿಂತಿರುಗಿದಾಗ ತವರಿನ ಜನ ಸಂಭ್ರಮದಿಂದ ಸ್ವಾಗತಿಸಿದರು. ಇದು ಸ್ವಾತಂತ್ರ್ಯ ಹೋರಾಟಕ್ಕೆ ಅಧಿಕೃತ ಮನ್ನಣೆ ಸಿಕ್ಕಂತಾಗಿತ್ತು ಮಹಾದೇವನಿಗೆ. ಅಂತೆಯೇ ಬಾರ್ಡೋಲಿಗೆ ಪತ್ನಿ ಸಿದ್ದಮ್ಮನ ಜೊತೆ ತೆರಳಿ ಮಹಾತ್ಮರಿಂದ ರಾಷ್ಟ್ರದೀಕ್ಷೆ ಕೊಡಿಸಿದ. ಅಲ್ಲಿಂದ ಅವಳಿಗೆ ಸಬರಮತಿ ಆಶ್ರಮಕ್ಕೆ ಹೋಗಲು ಗಾಂಧೀಜಿ ಅಪ್ಪಣೆ ದೊರೆಯಿತು. ಸಿದ್ದಮ್ಮನನ್ನು ಪ್ರೀತಿಯಿಂದ ಬಾಪು ಸಿದ್ದಮತಿ ಎಂದು ಕರೆಯುತ್ತಿದ್ದರು. 1932–33ರಲ್ಲಿ ಅಸಹಕಾರ ಹಾಗೂ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಸಿದ್ದಮ್ಮನಿಗೂ ಆರು ತಿಂಗಳು ಜೈಲು ಶಿಕ್ಷೆಯಾಗಿತ್ತು. ನಾಲ್ಕಾರು ಬಾರಿ ಮಹಾದೇವ ಜೈಲಿಗೆ ಹೋಗಿ ಬಂದರೂ ಹೊರಗಿದ್ದಾಗಲೆಲ್ಲ ಖಾದಿ ಪ್ರಚಾರ, ದಲಿತೋದ್ಧಾರ ಮುಂತಾದ ಗಾಂಧೀ ಕಾರ್ಯಕ್ರಮಗಳನ್ನು ಮುಂದುವರಿಸುತ್ತಿದ್ದರು. ಕೊರಡೂರಿನಲ್ಲಿ (1937) ತಮ್ಮದೇ ಆದ ಒಂದು ಗ್ರಾಮ ಸೇವಾಶ್ರಮವನ್ನು ಪ್ರಾರಂಭಿಸಿದ್ದರು. ಈ ಆಶ್ರಮದಲ್ಲಿ ಚರಖಾದಿಂದ ನೂಲು ತೆಗೆಯುವುದು, ನಿಸರ್ಗ ಚಿಕಿತ್ಸೆ, ವ್ಯಾಯಾಮ, ಅಕ್ಷರ ಕಲಿಕೆ, ಸ್ವಾತಂತ್ರ್ಯ ಸಂಗ್ರಾಮದ ಮಾಹಿತಿ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಇವರನ್ನು 1940ರ ಹಾವೇರಿ ತಾಲ್ಲೂಕು ಕಾಂಗ್ರೇಸ್ ಅಧ್ಯಕ್ಷರನ್ನಾಗಿ ಒಮ್ಮತದಿಂದ ಆರಿಸಲಾಯಿತು.

1942ರ ಆಗಸ್ಟ್ 8ರಂದು ಮುಂಬಯಿಯಲ್ಲಿ ಗಾಂಧೀಜಿ ಅವರ ನೇತೃತ್ವದಲ್ಲಿ 'ಬ್ರಿಟಿಷರೆ ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯದ ಸಂದರ್ಭದಲ್ಲಿ ಗಾಂಧೀಜಿ ಮಾಡು ಇಲ್ಲವೆ ಮಡಿ ಎಂಬ ಘೋಷವಾಕ್ಯವನ್ನು ಘೋಷಿಸಿದರು. ಧಾರವಾಡದ ದಕ್ಷಿಣ ಭಾಗದಲ್ಲಿ ಇದರ ನೇತೃತ್ವ ಮೈಲಾರರದಾಗಿತ್ತು. ಹಲವಾರು ವಿಧ್ವಂಸಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಬ್ರಿಟಿಷರ ಆಡಳಿತ ಯಂತ್ರ ನಿಷ್ಕ್ರಿಯವಾಗುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ಕ್ರಾಂತಿಕಾರಿ ಸುಭಾಸ್ ಚಂದ್ರ ಬೋಸರ ನಿಕಟ ಪರಿಚಯ ಹಾಗು ಅವರೊಡನೆ ಪತ್ರವ್ಯವಹಾರವಿದ್ದರೂ ಎಂತಹ ಕಠಿಣ ಸಂದರ್ಭದಲ್ಲಿ ಶಾಂತಿ ಮಾರ್ಗದಿಂದ ವಿಮುಖರಾಗಲಿಲ್ಲ.

ಮಹಾದೇವರಿಗೆ ಮಹಾತ್ಮರ ಮೇಲೆ ಅಪಾರ ಗೌರವ ಭಕ್ತಿ ಇತ್ತು. 1943ರಲ್ಲಿ ಗಾಂಧೀಜಿಗೆ 74 ವರ್ಷ ತುಂಬಿದಾಗ ಒಟ್ಟು 74 ವಿಧಾಯಕ ಕಾರ್ಯಗಳನ್ನು ನೆರವೇರಿಸಿದ ಮಹಾದೇವ, 75ನೇ ಕಾರ್ಯಕ್ರಮದ ಯೋಜನೆ ಹಾಕಿಕೊಂಡರು. ಅದರಂತೆ ದಿ.01.04.1943ರ ಬೆಳಿಗ್ಗೆ ಹೊಸರಿತ್ತಿಯ ಕಂದಾಯ ವಸೂಲಿ ಕಚೇರಿಯ ಮೇಲೆ ದಾಳಿ ನಡೆಸಿ ಅದನ್ನು ಧ್ವಂಸ ಮಾಡುವ ಯೋಜನೆ ಹಾಕಿಕೊಳ್ಳಲಾಯಿತು. ಜಯಘೋಷದ ನಡುವೆ ಕಂದಾಯ ಕಚೇರಿಗೆ ಮುತ್ತಿಗೆ ಹಾಕಿದಾಗ ಇದೇ ಸಂದರ್ಭಕ್ಕಾಗಿ ಅವಿತು ಕುಳಿತು ಕಾಯುತ್ತಿದ್ದ ಇಬ್ಬರು ಪೋಲೀಸರು ನೇರವಾಗಿ ಅವನ ಎದೆಗೆ ಗುಂಡು ಹಾರಿಸಿ ಬಿಟ್ಟರು. ಇದನ್ನು ಕಂಡ ಜೊತೆಯಲ್ಲಿದ್ದವರು ಪೋಲೀಸರ ಮೇಲೆ ಗುಂಡು ಹಾರಿಸಲು ಹೊರಟಾಗ ರಕ್ತದ ಮಡುವಿನಲ್ಲಿದ್ದ ಮಹಾದೇವ 'ನಮ್ಮದು ಅಹಿಂಸಾತ್ಮಕ ಹೋರಾಟ, ಪೋಲೀಸರನ್ನು ಕೊಲ್ಲದಿರಿ, ಹಿಂಸೆ ಮಾಡದಿರಿ' ಎಂದು ಹೇಳುತ್ತಲೇ ವೀರ ಸ್ವರ್ಗ ಸೇರಿದ. ಈ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಡಿತು. ನಾಡು ಶೋಕ ಸಾಗರದಲ್ಲಿ ಮುಳುಗಿತು ಮಹಾದೇವನ ತ್ಯಾಗ ಬಲಿದಾನಗಳ ಮೇಲೆ ಅಸಂಖ್ಯ ಗೀಗೀ, ಲಾವಣಿ ಪದಗಳು ರಚಿಸಲ್ಪಟ್ಟವು. ಸಮ್ಮದ್ ಸಾಹೇಬನ ಲಾವಣಿಯ ಈ ಎರಡು ಸಾಲು

ತುಂಟರ ತುಂಟನು,
ಭಂಟರ ಭಂಟನು
ಸಾತ್ವಿಕರೊಳಗೆ ಸರದಾರ !
ದಿಟ್ಟನ ಹೆಸರನು
ಹುಟ್ಟಿದ ಕೂಸಿಗೆ ಇಟ್ಟರೂ
ತೀರದು ಉಪಕಾರ!

One of the most difficult thnings
to give away is kindness, for it is
usually returned.
- Mark Ortman

AN INDELIBLE LEGACY

100th Birth Anniversary (6th June 1920 – 31st January 2005)

HN's aim was not just to teach lessons in classrooms but to change people's attitude towards life, build scientific temper and encourage them to question everything.

H. Narasimhaiah changed the intellectual makeup of Bengaluru and shaped the lives of generations of students, writes Nalme Nachiyar, after interacting with his students

At a young age of 15, when H Narasimhaiah set out to Bengaluru from his small village of Hosur, near Gauribidanur covering the 85 km distance on foot because he could not afford the bus fare little did he know that the journey was leading him to an institution that would become the biggest mission and vision of his life.

Narasimhaiah and National College were in-separable, and in a bond that lasted almost 70 years, he remained a common fixture in its premises, dressed in his characteristic khadi dhoti, jubba and a cap, and surrounded by students.

"HN came up because of National College, and the college in turn progressed because of him," says A H Rama Rao, who took over the baton as president of National Education Society (NES), which runs the National College, after HN's passing away.

Born on June 6, 1920, Dr Hanumanthappa Nara-simhaiah left his hometown in search of ed-ucation, and redefined the word for generations of students after him. Fondly known as HN, he was a learner, freedom fighter, teacher, physi-cist, rationalist and educationist – and he played all these roles with equal aplomb. However, his greatest triumph was as an educator.

Staunch Gandhian HN was convinced that only education can uplift the underprivileged and un-derrepresented in the societty. And he lived by those principles, first as a lecturer and principal at National College, then as the vice chancellor of Bengaluru University and finally as the presi-dent of the National Education Societty.

Deeply influenced by Gandhian values, he was a strict disciplinarian, but he also had a terrific sense of humour. A delightful teacher, HN's classes were rooted in practicality and laced with wit, making his Modern Physics paper a student's favourite. By explaining complex physics concepts in Kannada, he also made them more accessible to students who couldn't follow English.

In those days, science associations in colleges would only have inauguration and valedictory ceremonies. 'How can there be only ttwo days for science? It should be a way of life!'HN thought and laid the foundation for the Bengalu-ru Science Forum (BSF) in 1962 to help people see the science in everyday life. Today, this in-clusive forum has completed over 3,000 lectures with eminent scientists from around the world gracing the stage. He also started the month-long Science Festival in July 1978, which hasn't once been cancelled in the last 40 years.

HN's aim was not just to teach lessons in class-rooms but to change people's attitude towards life, build scientific temper and encourage them to question everything. 'Prashnisade Oppa bedi' (Don't agree without questioning) was not just the motto of his life, but also that of the BSF.

SCIENTIFIC TEMPER

As a rationalist, HN waged a life-long battle to ex-pose superstitions and miracles. He consti-tuted and chaired a committee challenging the miraculous claims of self-styt led godmen. But there was no malice or condescension, all he wanted was hard scientific proof. "Behind his crusade against godmen was not just an inher-ited qualittyof a good scientist but also the moral responsibilitty of a humanist,"says DrKJagan-nathRao, an Emeritus professor at IISc.


Today, many of his students occupy prestigious positions in universities and research institutes. To them, he was not just a physics lecturer, but a life guru whose simplicity, sincerity, commitment and honesty they all imbibed.

"After my Chemistry Honors, I came to National College looking for a job. Being the eldest son in a joint family, I needed it. But HN would hear none of it. He urged me to complete my MSc and even volunteered to pay my course fees, which was Rs 125 back then for a half-free seat, and also my exam fees of Rs 107. I was a nobody to him. But he changed the course of my life. After MSc, I became a lecturer in National College and was his junior colleague for three years," says KJ Rao.

For BS Shylaja, the former director of the Jawaharlal Nehru Planetarium, HN was a man of revolutionary ideas. "I completed my MSc in 1974 during his tenure as VC. That was also the year he decided to get rid of black robes and caps worn during graduation which he considered colonial hangovers. We all wore white for the convocation!"

Indeed, HN was a visionary whose ideas were much ahead of his time. In the 1960s, he started Seva Sangha, a social service camp, to teach students about the dignity of labour. In the same decade, he also introduced sex education classes in the college. In 1992, he introduced midday meals in NHS. Hosur all this before the government could even think of it.

While HN's biggest con-tribution has no doubt been to the field of science, he was equally invested in the arts and social sciences. HN started the Bangalore Social Science Forum (BSF), which has so far held around 800 talks. He also instituted the Bangalore Lalitha Kala Parishat (BLKP) in 1992 to encourage the arts with programmes held every first and third Friday of the month and half of them have been stage plays.



"Every institution is the shadow of a great in-dividual, and HN was at the forefront of NES. Even as he grew, he took the institution along. For me, National College is Narasimhaiah's College," Rama Rao says. In science, HN found his purpose and in HN, Bengaluru gained an educationist extraordinary who would change the intellectual makeup of the city forever.

Courtasy : Deccan Herald - 06.06.2020



Mahatma Gandhi interacts with young H Narasimhaiah during his visit to Bengaluru in 1936.

ಮಲೆನಾಡ ಗಾಂಧಿ ಹೆಚ್.ಜಿ. ಗೋವಿಂದೇಗೌಡರಿಗೊಂದು ಅಕ್ಷರ ನಮನ


(ಮೇ 25, 1926 – ಜನವರಿ 6, 2016)

– ಪ್ರೊ. ಎಂ. ಚಂದ್ರಶೇಖರಯ್ಯ

ಅವರು ನೆನಪಾಗುವುದು ಬರೀ ಅವರ ರಾಜಕಾರಣದಿಂದಷ್ಟೇ ಅಲ್ಲ. ಗಾಂಧಿವಾದಿ ಆಗಿ ಬದುಕುವುದು ಎಷ್ಟು ಕಷ್ಟ ಎಂದು ನೆನಪಾಗುವುದರಿಂದ. ಗಾಂಧಿವಾದದ ಮಾರ್ಗದ ಕಷ್ಟಕೋಟಲೆಗಳಿಂದಾಗಿಯೇ ಗೋವಿಂದೇಗೌಡರು ನೆನಪಾಗುತ್ತಾರೆ."

ರಾಜಕಾರಣ ಸ್ವಚ್ಛವಾಗಿರಬೇಕು ಎನ್ನುವುದನ್ನು ಗೌಡರ ಬದುಕನ್ನು ನೋಡಿ ಕಲಿಯಬೇಕು. ಶಿಕ್ಷಣ ಮಂತ್ರಿಯಾಗಿದ್ದ ಅವರು ಪಾರದರ್ಶಕವಾಗಿ ಶಿಕ್ಷಕರ ಆಯ್ಕೆ ವಿಧಾನ ಅಳವಡಿಸಿದ್ದನ್ನು ಒಂದು ಲಕ್ಷ ಶಿಕ್ಷಕರು ದೀಪ ಹಚ್ಚುವಾಗ ಗೌಡರನ್ನು ನೆನಪಿಸಿಕೊಳ್ಳುತ್ತಾರೆ.

1926ರಲ್ಲಿ ನರಸಿಂಹರಾಜಪುರ ಸಮೀಪದ ಹಿಣಚಿಯಲ್ಲಿ ಜನಿಸಿದ ಮಲೆನಾಡ ಗಾಂಧಿ, ಇಂಟರ್ ಮೀಡಿಯೆಟ್‌ವರೆಗೆ ಓದಿದ್ದರು. ತಮ್ಮ 25ನೇ ವಯಸ್ಸಿನಲ್ಲಿ ಕೊಪ್ಪ ಪುರಸಭೆಗೆ ಅಧ್ಯಕ್ಷರಾದವರು. ಅವರ ಜೀವನ ಬದುಕು, ನಡೆ, ಸರಳತೆ ಗಾಂಧಿವಾದವನ್ನು ನೆನಪಿಸುವಂತಿತ್ತು. 90 ವರ್ಷದ ಅವರ ಬದುಕಿನಲ್ಲಿ ಅವರಿಗೆ ಗಾಂಧಿವಾದ, ಗಾಂಧಿ ಪ್ರಭಾವದ ಸರಳತೆ ಸಜ್ಜನಿಕೆ ಮಾತ್ರ ಗೊತ್ತಿತ್ತು. ರಾಜಕಾರಣ ಎಂದರೆ ಸತ್ಯವನ್ನು ಪ್ರತಿಪಾದಿಸುವುದು ಎಂದು ನಂಬಿದ್ದರು. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದರು. ಕಡಿದಾಳ್ ಮಂಜಪ್ಪನವರ ಶಿಷ್ಯರಾಗಿದ್ದರು. ಶೃಂಗೇರಿ ಕ್ಷೇತ್ರದಿಂದ 1982ರ ಚುನಾವಣೆಯಲ್ಲಿ ಬೇಗಾನೆ ರಾಮಯ್ಯ ಅವರನ್ನು ಸೋಲಿಸಿ ಆಯ್ಕೆಯಾದರು. 1985ರಲ್ಲಿ ಮತ್ತೆ ಆಯ್ಕೆಯಾದರು. ಪ್ರಾಥಮಿಕ ಶಿಕ್ಷಣ ಖಾತೆ ಅವರನ್ನು ಬೆನ್ನಟ್ಟಿ ಬಂದಿತ್ತು. 1989ರಲ್ಲಿ ಅವರು ಸೋತಿದ್ದರು. ಅಷ್ಟರಲ್ಲಿ ಮಂತ್ರಿಯಾಗಿ ಒಂದಿಷ್ಟು ಹೆಸರು ಮಾಡಿದ್ದರಿಂದ 1994ರ ಚುನಾವಣೆಯಲ್ಲಿ ಖ್ಯಾತಿಯ ಎತ್ತರಕ್ಕೆ ಒಯ್ದದ್ದು ಶಿಕ್ಷಣ ಇಲಾಖೆಯಲ್ಲಿ ಅನೇಕ ಸುಧಾರಿತ ಕ್ರಮಗಳನ್ನು ಜಾರಿಗೆ ತಂದದ್ದು, ಸಿಇಟಿ ಮೂಲಕ ಶಿಕ್ಷಕರ ಆಯ್ಕೆಯನ್ನು ದಕ್ಷವಾಗಿ, ಅರ್ಹತೆ ಇರುವವರಿಗೆ ಆಯ್ಕೆಯಾಗುವಂತೆ ನೋಡಿಕೊಂಡರು. ಶಿಕ್ಷಕರ ನೇಮಕ, ವರ್ಗಾವಣೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಂಡವರು. ಶೇ. 50 ಮಹಿಳಾ ಮೀಸಲಾತಿಯನ್ನು ತಂದರು. ಶಿಕ್ಷಕರ ನೇಮಕದಲ್ಲಿ ರೋಸ್ಟರ್ ಮತ್ತು ಮೆರಿಟ್ ಎರಡು ನೀತಿಯನ್ನು ಅಳವಡಿಸಿದರು. ಇವೆಲ್ಲವೂ ಶಿಕ್ಷಕರನ್ನು ಗೌರವದಿಂದ ಸಮಾಜ ನೋಡುವಂತೆ, ಕಾಣುವಂತೆ ಮಾಡಿದ ಕೆಲಸಗಳಾಗಿದ್ದವು.



1999 ನಂತರ ರಾಜಕೀಯದಿಂದ ದೂರ ಉಳಿದ ಗೌಡರು ನಗರ ತ್ಯಜಿಸಿ ತಮ್ಮ ಹಳ್ಳಿಯ ಭೂಮಿಯಲ್ಲಿ ಮನೆ ಮಾಡಿಕೊಂಡು ಬದುಕಿದ ಗೌಡರು ಕೆಂಗಲ್ ಹನುಮಂತಯ್ಯ, ಕೆ.ಸಿ. ರೆಡ್ಡಿ, ಗೋಪಾಲಗೌಡ, ಕಲಮಣಕರ್, ನಾಗಪ್ಪ ಆಳ್ವ, ಬದರಿನಾರಾಯಣ್, ಕೌಜಲಗಿ, ಕೆ.ಎಸ್. ನಾಗರತ್ನಮ್ಮ, ನಿಜಲಿಂಗಪ್ಪ, ಬಿ.ಡಿ. ಜತ್ತಿ ಅವರುಗಳ ಒಡನಾಟದಲ್ಲಿ ಆದರ್ಶ ರಾಜಕಾರಣಿಯಾಗಿ ಬದುಕಿದವರು. ಗಾಂಧಿ ವಾದಕ್ಕೆ, ಗಾಂಧಿಯಂಥಹ ಬದುಕಿಗೆ ಅರ್ಹತೆಯ ಕಾಲ ಈಗಲೂ ಪಕ್ವವಾಗಿದೆ. ಬಡವರ ಬಗ್ಗೆ ಬಡತನ ಬಗ್ಗೆ ಪ್ರಾಮಾಣಿಕತೆಯ ಬಗ್ಗೆ ಈಗ ಯಾರು ಮಾತನಾಡುತ್ತಿಲ್ಲ. ಅಭಿವೃದ್ಧಿ ಎನ್ನುವ ಮಾರಕ ರೋಗದ ಬಗ್ಗೆಯೇ ಎಲ್ಲಾ ರಾಜಕಾರಣಿಗಳು ಮಾತನಾಡುತ್ತಿರುವುದರಿಂದಲೇ ಏನೂ ಮಾತನಾಡದೆ ಏನೆಲ್ಲ ಮಾಡಬಹುದೆಂದು ತೋರಿಸಿ ಹೋದ ಗೋವಿಂದೇಗೌಡರು ಮತ್ತೆ ಮತ್ತೆ ನೆನಪಾಗುತ್ತಾರೆ.

ಜೀವನದ ಪ್ರತಿ ಘಟ್ಟಗಳಲ್ಲೂ ಗಾಂಧಿ ತತ್ತ್ವಗಳನ್ನು ಅವರ ರಚನಾತ್ಮಕ ಕಾರ್ಯಕ್ರಮಗಳನ್ನು ಪರಿಪಾಲಿಸುತ್ತ ಅವರ ಜೀವನ ಕ್ರಮಗಳನ್ನು ಅನುಸರಿಸಿದ ಗೋವಿಂದೇಗೌಡರು ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ.

The centre of human nature is rooted in ten thousand ordinary acts of kindness that define our lives.

- Stephen Jay Gould

ಗಾಂಧೀವಾದಿ ಜಂಗಮನ ಶಾಂತಿಯಾತ್ರೆ

– ದಿನೇಶ್ ಅಮಿನ್ ಮಟ್ಟು


ಖಾದಿ ಅಂಗಿ ಮತ್ತು ಚಡ್ಡಿ, ಮಲಗಲೊಂದು ಚಾಪೆ, ಚಕ್ಕಳಬಕ್ಕಳ ಹಾಕಿಕೊಂಡು ಕೂತು ಬರೆಯುವ ರೂಢಿ. ಪ್ರವಾಸದ ಕಾಲದಲ್ಲಿ ಹೋಟೇಲ್ - ಗೆಸ್ಟ್ ಹೌಸ್‌ಗಳಿಗೆ ಕಾಲಿಡದೆ ಸದಾ ಶಿಷ್ಯರು - ಸ್ನೇಹಿತರ ಮನೆಯಲ್ಲಿ ವಾಸ, ತನ್ನ ಬಟ್ಟೆ ತಾನೆ ಒಗೆಯುವ ಪರಿಪಾಠ - ಎಲ್ಲವೂ ಅಪ್ಪಟ ಗಾಂಧಿ ಜೀವನ ಶೈಲಿ. ಇದೇ ರೀತಿ ಎಲೆಯ ಮರೆಯ ಕಾಯಿಯಂತೆ ಸಮಾಜ ಸೇವೆಯ ಕಾಯಕದಲ್ಲಿ ತೊಡಗುತ್ತಾ ಬಂದವರು ಸುಬ್ಬಾರಾವ್.

'ಈ ಹಿಂಸಾಚಾರ, ಭಯೋತ್ಪಾದನೆ, ಕೋಮುಗಲಭೆ ಇವರು ಯಾವುದೂ ಇಲ್ಲದೆ ಇದ್ದರೆ ಗಾಂಧಿವಾದದ ಪ್ರಸ್ತುತತೆಯ ಬಗೆಗಿನ ಪ್ರಶ್ನೆ ಬಗ್ಗೆ ಚರ್ಚೆ ಮಾಡಬಹುದಿತ್ತೋ ಏನೋ? ಭಾರತ ಮಾತ್ರವಲ್ಲ ಇಡೀ ವಿಶ್ವ ಎದುರಿಸುತ್ತಿರುವ ಸಂಕಷ್ಟಗಳ ಸರಮಾಲೆಯಿಂದ ಪಾರಾಗಲು ಗಾಂಧಿ ವಾದವೇ ಕೊನೆಯ ಆಸರೆ. ಈ ಬಗ್ಗೆ ಸಂಶಯ ಬೇಡ' ಎನ್ನುತ್ತಾರೆ ಸುಬ್ಬಾರಾವ್.

ಗಾಂಧಿವಾದದ ಕುಲುಮೆಯಲ್ಲಿ ಪುಟಗೊಂಡ ನಾಯಕರ ಪೀಳಿಗೆಯ ಕೊನೆಯ ಕೊಂಡಿಯಂತೆ ಕಾಣಿಸುತ್ತಿದ್ದಾರೆ ಸೇಲಂ ನಂಜುಂಡಯ್ಯ ಸುಬ್ಬಾರಾವ್. ಅದೇ ಖಾದಿ ಅಂಗಿ ಮತ್ತು ಚಡ್ಡಿ ಮಲಗಲೊಂದು ಚಾಪೆ, ಚಕ್ಕಳಬಕ್ಕಳ ಹಾಕಿಕೊಂಡು ಬರೆಯುವ ರೂಢಿ. ಸಂಪರ್ಕಕ್ಕಾಗಿ ಬಳಸುತ್ತಿರುವ ಪೋಸ್ಟ್‌ಕಾರ್ಡ್, ಪ್ರವಾಸ ಕಾಲದಲ್ಲಿ ಹೋಟೆಲ್ – ಗೆಸ್ಟ್‌ಹೌಸ್‌ಗಳಿಗೆ ಕಾಲಿಡದೆ ಸದಾ ಶಿಷ್ಯರು, ಸ್ನೇಹಿತರ ಮನೆಯಲ್ಲಿ ವಾಸ. ತನ್ನ ಬಟ್ಟೆ ತಾನೇ ಒಗೆಯುವ ಪರಿಪಾಠ, ಎಲ್ಲವೂ ಅಪ್ಪಟ ಗಾಂಧಿ ಜೀವನಶೈಲಿ. ಇದೇ ರೀತಿ ಎಲೆ ಮರೆಯ ಕಾಯಿಯಂತೆ ಸಮಾಜ ಸೇವೆಯ ಕಾಯಕ ಮಾಡುತ್ತಿರುವವರು ಸುಬ್ಬಾರಾವ್. ಸುಬ್ಬಾರಾವ್ ಬೆಂಗಳೂರಿನ ಮಲ್ಲೇಶ್ವರದವರು. ಅವರ ಪೂರ್ವಜರು ಸೇಲಂನಿಂದ ಬಂದವರಂತೆ. ಅದಕ್ಕಾಗಿ ಆ ಊರಿನ ಹೆಸರು ಅಂಟಿಕೊಂಡಿದೆ. ತಂದೆ ನಂಜುಂಡಯ್ಯ ಆ ಕಾಲದ ಖ್ಯಾತ ವಕೀಲರು. ಸುಳ್ಳು ಕೇಸುಗಳನ್ನು ತಿರಸ್ಕರಿಸಿ ಸುದ್ದಿ ಮಾಡಿದವರು. ಎಳೆಯ ಪ್ರಾಯದಲ್ಲಿಯೇ ಗಾಂಧಿ ತತ್ವಕ್ಕೆ ಮಾರುಹೋದ ಸುಬ್ಬಾರಾವ್ ಆ ದಿನಗಳಿಂದಲೇ ಖಾದಿ ಬಟ್ಟೆಗೆ ಮಾರು ಹೋದವರು. ಚಿತ್ರಕೂಟ – ಪೋರ್ಟ್ ಬ್ಲೇರ್ ಇರಲಿ, ಚಳಿ–ಸುರಿಯುವ ಮಳೆ ಏನೇ ಇರಲಿ... 90 ವರ್ಷದ ಸುಬ್ಬಾರಾವ್ ಅವರ ಖಾದಿ ಅಂಗಿ ಮತ್ತು ಚಡ್ಡಿಯ ಗಾಂಧಿ ದಿರಿಸು ಬದಲಾಗಲಿಲ್ಲ

ಕತ್ತಲೆಯ ದಾರಿಯಲ್ಲಿ ಆಸೆಯ ದೀಪ

ಹದಿಮೂರರ ವಯಸ್ಸಿನಲ್ಲಿ ಮಲ್ಲೇಶ್ವರಂನ ರಾಮಕೃಷ್ಣ ವೇದಾಂತ ಕಾಲೇಜಿನ ತರಗತಿ ಬಹಿಷ್ಕರಿಸಿ ರಸ್ತೆ–ಗೋಡೆಯ ಮೇಲೆ ಬ್ರಿಟಿಷ್ ವಿರುದ್ಧ ಘೋಷಣೆಗಳನ್ನು ಬರೆಯುತ್ತಿದ್ದಾಗ ಬಂಧನಕ್ಕೊಳಗಾದರೂ ಇನ್ನೂ ಮೈನರ್ ಹುಡುಗ ಎಂದು ಬಿಡುಗಡೆ ಮಾಡಿದ್ದರಂತೆ. ಚಿತ್ರದುರ್ಗದಲ್ಲಿ ನಡೆದ ರಾಷ್ಟ್ರೀಯ ಸೇವಾದಳದ ಶಿಬಿರದಲ್ಲಿ ಭೇಟಿಯಾದ ಡಾ. ಎನ್.ಎಸ್. ಹರ್ಡೀಕರ್, ಸುಬ್ಬಾರಾವ್ ಅವರ ಜೀವನದ ಗತಿಯನ್ನೇ ಬದಲಿಸಿ ಬಿಟ್ಟರು. ಡಾ. ಹರ್ಡೀಕರ್ ಅವರಿಂದ ದೀಕ್ಷೆ ಪಡೆದು ಗಾಂಧಿತತ್ವ ಪ್ರಚಾರ ಯಾತ್ರೆ ಪ್ರಾರಂಭಿಸಿದ್ದ ಸುಬ್ಬಾರಾವ್ ನಂತರ ವಿರಮಿಸಿದ್ದೇ ಇಲ್ಲ. ಲೋಕವನ್ನು ಕವಿದಿರುವ ಹಿಂಸಾಚಾರದ ಕತ್ತಲಲ್ಲಿ ಮುನ್ನಡೆಯ ಹಾದಿ ಕಾಣಲಾಗದವರ ಮುಂದೆ ಆಸೆಯ ದೀಪ ಹಿಡಿದು ಅವರು ಹೊರಟಿದ್ದಾರೆ. ಚಂಬಲ್ ಕಣಿವೆಯ ನಿರ್ದಯಿ ಡಕಾಯಿತರ ಮನದಲ್ಲಿ ಅಹಿಂಸೆಯ ಬೆಳಕು ಮೂಡಿಸಿದ್ದು ಇದೇ 'ಆಸೆಯ ದೀಪ'. ಮಣಿಪುರದಲ್ಲಿ ಸೇನಾ ದೌರ್ಜನ್ಯ ವಿರೋಧಿಸಿ ಆರು ವರ್ಷಗಳಿಂದ ಉಪವಾಸ ನಡೆಸಿರುವ ಶರ್ಮಿಳಾ ಛಾನು ಅವರ ಬತ್ತಿಹೋದ ದೇಹ, ಜೀವ ಹಿಡಿದಿಟ್ಟುಕೊಳ್ಳಲು ಕೂಡಾ ಈ ಗಾಂಧಿವಾದದ ದೀಪವೇ ಕಾರಣ.



ಕಾನೂನು ಪದವಿ ಮುಗಿಸಿದ್ದ ಸುಬ್ಬಾರಾವ್ ಅವರನ್ನು 1951ರಲ್ಲಿ ಒಂದು ವರ್ಷದ ಮಟ್ಟಿಗೆ ಡಾ. ಹರ್ಡೀಕರ್ ದೆಹಲಿಯ ರಾಷ್ಟ್ರೀಯ ಸೇವಾದಳದ ಕೇಂದ್ರ ಕಚೇರಿಗೆ ಕರೆಸಿಕೊಂಡಿದ್ದರು. ಸುಬ್ಬಾರಾವ್ ಹಿಂತಿರುಗಿ ಹೋಗಲೇ ಇಲ್ಲ. ಜಂತರ್‌ಮಂತರ್‌ನಲ್ಲಿರುವ ಕಚೇರಿಯಲ್ಲಿಯೇ ನೆಲೆನಿಂತು ದೇಶದಾದ್ಯಂತ ಅವರು ನಡೆಸುತ್ತಿದ್ದ ಯುವ ಶಿಬಿರಗಳು ಪ್ರಧಾನಿ ಜವಾಹರಲಾಲ್ ನೆಹರೂ, ಕೆ. ಕಾಮರಾಜ್ ಅವರಂತಹ ನಾಯಕರನ್ನು ಕೂಡಾ ಸೆಳೆದಿದ್ದವು. ಇದೇ ಸಮಯದಲ್ಲಿ ಅವರು ಚಂಬಲ್ ಕಣಿವೆಯತ್ತ ಆಕರ್ಷಿತರಾದರು. ಊರಿನ ಜನರೆಲ್ಲ

ಡಕಾಯಿತರ ಹೆಸರೆತ್ತಲು ಭಯಪಡುತ್ತಿದ್ದ ಆ ದಿನಗಳಲ್ಲಿ ಸುಬ್ಬಾರಾವ್ ಆ ಕಣಿವೆಯಲ್ಲೆಲ್ಲಾ ರಾತ್ರಿ ಹಗಲು ಅಲೆದಾಡಿದ್ದಾರೆ. ಬಂದೂಕಿನ ಬದಲಿಗೆ ರಚನಾತ್ಮಕ ಕಾರ್ಯಗಳ ಮೂಲಕ ಡಕಾಯಿತರ ಮನಃಪರಿವರ್ತನೆಗೆ ಶ್ರಮಿಸಿದ್ದಾರೆ. ಹಲವಾರು ಶ್ರಮ ಶಿಬಿರಗಳನ್ನು ನಡೆಸಿದ್ದಾರೆ. 1964ರಲ್ಲಿ ಚಂಬಲ್ ಕಣಿವೆಯ ಜೌರಾ ಪ್ರದೇಶದಲ್ಲಿ ಹತ್ತು ತಿಂಗಳ ಕಾಲ ನಡೆದ 'ಶ್ರಮ ಶಿಬಿರ' ಆ ಭಾಗದ ಜನರಲ್ಲಿ ಹೊಸ ಬದುಕಿನ ಆಸೆಯನ್ನು ಹುಟ್ಟಿಸಿತ್ತು. ಶಿಬಿರದಲ್ಲಿ ದೇಶದ ಬೇರೆಬೇರೆ ರಾಜ್ಯಗಳಿಂದ ಬಂದ ಸಾವಿರಾರು ಯುವಕ ಯುವತಿಯರು ಭಾಗವಹಿಸಿದ್ದರು. ಅಲ್ಲಿಯ ವರೆಗೆ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದ ಸುಬ್ಬಾರಾವ್ 1970ರಲ್ಲಿ ಪಕ್ಷ ತೊರೆದು ಸ್ವತಂತ್ರರಾದರು. ಅದರ ನಂತರ ಚೌರಾದಲ್ಲಿಯೇ 'ಗಾಂಧಿ ಸೇವಾ ಆಶ್ರಮ' ಸ್ಥಾಪಿಸಿದರು. ಜಯಪ್ರಕಾಶ್ ನಾರಾಯಣ್, ವಿನೋಬಾ ಭಾವೆ ಅವರ ಸಮಕ್ಷಮದಲ್ಲಿ ಕುಖ್ಯಾತ ಡಾಕಾಯಿತರಾದ ಮೊಹರ್‌ಸಿಂಗ ಮತ್ತು ಮಾಧೋಸಿಂಗ್ ಸೇರಿದಂತೆ ನೂರಾರು ಡಾಕಾಯಿತರು ಶರಣಾಗಿ ಸಮಾಜದ ಮುಖ್ಯವಾಹಿನಿಗೆ ಸೇರುವ ಸಂಕಲ್ಪ ಕೈಗೊಂಡಿದ್ದು ಅದೇ ಆಶ್ರಮದಲ್ಲಿ ಈ ಘಟನೆಯಿಂದ ಪ್ರೇರಣೆ ಪಡೆದು ಉತ್ತರಪ್ರದೇಶ ಮತ್ತು ರಾಜಸ್ತಾನಗಳಲ್ಲಿಯೂ ಡಕಾಯಿತರು ಶರಣಾದರು.

ಯುವ ಯೋಜನೆ

ಜೌರಾದಲ್ಲಿನ ಆಶ್ರಮದಲ್ಲಿಯೇ ರೂಪ ಪಡೆದದ್ದು ಸುಬ್ಬಾರಾವ್ ಅವರ ಮಹತ್ವಾಕಾಂಕ್ಷೆಯ 'ರಾಷ್ಟ್ರೀಯ ಯುವ ಯೋಜನೆ". ಕಿರಿಯ ವಯಸ್ಸಿನಲ್ಲಿಯೇ ಹೆಚ್ಚಿನವರು ಡಾಕಾಯಿತರಾಗುತ್ತಿರುವುದನ್ನು ಕಂಡಿದ್ದ ಅವರು ಯುವಶಕ್ತಿಗೆ ಮಾರ್ಗದರ್ಶನ ಕೊಡಲು ಹುಟ್ಟಿಕೊಂಡಿದ್ದು ಈ ಯೋಜನೆ. ಕಳೆದ 62 ವರ್ಷಗಳಲ್ಲಿ ರಾಷ್ಟ್ರೀಯ ಯುವ ಯೋಜನೆಯ ಸಾವಿರಾರು ಶಿಬಿರಗಳು ನಡೆದಿವೆ. ಕೋಮುಸೌಹಾರ್ದ, ರಾಷ್ಟ್ರೀಯ ಏಕತೆ, ಮಾನವೀಯ ಮೌಲ್ಯಗಳನ್ನು ಯುವಜನರಲ್ಲಿ ಬಿತ್ತುವ ಉದ್ದೇಶದ ಈ ಶಿಬಿರಗಳಲ್ಲಿ ಭಾರತದ ಮಾತ್ರವಲ್ಲ, ನೆರೆಯ ರಾಜ್ಯಗಳಾದ ಆಫ್ಘಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ ದೇಶಗಳ ಲಕ್ಷಾಂತರ ಆಸಕ್ತರು ಭಾಗವಹಿಸುತ್ತಿದ್ದಾರೆ. ಯುವ ಶಿಬಿರ ಎಂದು ಹೆಸರಿಸಲಾದರೂ ವಯಸ್ಸಿನ ಪರತ್ತು ಇಲ್ಲ. ಎಂಟರಿಂದ ಎಂಬತ್ತು ವರ್ಷದ ವರೆಗಿನ ವಯೋಮಾನದವರೆಲ್ಲರೂ ಪಾಲ್ಗೊಳ್ಳುತ್ತಿದ್ದಾರೆ.

